ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 5 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 50 | ಪುಟಗಳು: 10

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ವಿಶ್ವ ಪರಿಸರ ದಿನಾಚರಣೆ: ಔಷಧೀಯ ಗಿಡಗಳ ವಿತರಣೆ

ಮೈಸೂರು, ಜೂ.4– ಪರಿಸರ ದಿನಾಚರಣೆ ಅಂಗವಾಗಿ ಜೂ.5ರ ಬೆಳಗ್ಗೆ 9.30 ಗಂಟೆಗೆ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ ಸರಸ್ವತಿಪುರದ ಎದುರು ಇರುವ ಚಂದ್ರವನ ಸಸ್ಯೋದ್ಯಾನದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಔಷಧ ಸಸ್ಯಗಳ ವಿತರಣೆ ಮತ್ತು ಸಸ್ಯಗಳ ಉಪಯೋಗದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಚಾಮರಾಜ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಕೆ.ಎಸ್.ರಾಧಾಕೃಷ್ಣ ರಾಮರಾವ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ಮತ್ತು ಪರಿಸರ ಸಂರಕ್ಷಣಾ ಸಮಿತಿ ಚೇರ್ಮನ್ ರಾಧಾ ಚಿನ್ನಸ್ವಾಮಿ ಜಗನ್ನಾಥ್ ಭಾಗವಹಿಸುವರು. ಈ ಸಂದರ್ಭದಲ್ಲಿ ಅಮೃತಬಳ್ಳಿ, ಇನ್ಸುಲಿನ್ ಗಿಡ, ಆಡುಸೋಗೆ, ಲಾವಂಚ, ಅರಿಶಿನ, ನೆಲಬೇವು ಇತ್ಯಾದಿ ಔಷಧ ಸಸ್ಯಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುವುದು. ಮಾಹಿತಿಗಾಗಿ ಡಾ.ಶಿವಲಿಂಗ ಬೆಂಡೆಕಾಯಿ–ಮೊ.ಸಂ.9886613056, ಡಾ.ವೀಣಾ ನಾಯಕ್–ಮೊ.ಸಂ.9901578900 ಅವರನ್ನು ಸಂಪರ್ಕಿಸಬಹುದು.

ಅರೆಕಾಲಿಕ ಕಾನೂನು ಸ್ವಯಂ ಸೇವಕರ ನೇಮಕಾತಿಗೆ ಅರ್ಜಿ

ಮೈಸೂರು, ಜೂ.4– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕೆಲಸ ಮಾಡಲು 1 ವರ್ಷಕ್ಕೆ ಅರೆಕಾಲಿಕ ಕಾನೂನು ಸ್ವಯಂಸೇವಕರನ್ನು ನೇಮಕ ಮಾಡಲಾಗುತ್ತಿದ್ದು, ಅರೆಕಾಲಿಕ ಕಾನೂನು ಸ್ವಯಂಸೇವಕರು ನೊಂದ ಮತ್ತು ಕಾನೂನು ನೆರವು ಅಗತ್ಯವಿರುವ ವ್ಯಕ್ತಿಗಳನ್ನು ಗುರುತಿಸಿ, ಅವರಿಗೆ ನ್ಯಾಯಾಲಯಗಳಲ್ಲಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ಸೂಕ್ತ ನೆರವು ಮತ್ತು ಮಾರ್ಗದರ್ಶನ ನೀಡುವ ಸಲುವಾಗಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಸದರಿ ಸೇವೆಯನ್ನು ಮಾಡಲು ಸಮಾಜ ಸೇವೆ ಅನುಭವ ಇರುವ ಮತ್ತು ಸೇವಾ ಮನೋಭಾವವಿರುವ ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರುವ ವ್ಯಕ್ತಿಗಳು ತಮ್ಮ ವೈಯಕ್ತಿಕ ವಿವರ ವಿದ್ಯಾರ್ಹತೆ, ಗುರುತಿನ ಚೀಟಿ ಮತ್ತು ಇತ್ತೀಚಿನ ಭಾವಚಿತ್ರಗಳನ್ನು ಒಳಗೊಂಡ ಭರ್ತಿ ಮಾಡಿದ ಅರ್ಜಿಗಳನ್ನು ಜೂ.15ರ ಸಂಜೆ 5ರೊಳಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನೇರವಾಗಿ ಅರ್ಜಿಯ ಜೊತೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಬಹುದು



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಶ್ರೀಮತಿ ಲಲಿತ ಜಿ.ಟಿ.ದೇವೇಗೌಡರನ್ನು ದಾಸನಕೊಪ್ಪಲು ಗ್ರಾಮದ ಯುವ ಮುಖಂಡ ಸಿದ್ದು ಹಾಗೂ ಸ್ನೇಹಿತರು ಅಭಿನಂದಿಸಿದರು.

ಮೈಸೂರಿನ ಡಾ.ಎಸ್.ಚಂದ್ರನಾಯಕ್ ಜಪಾನ್ ಒಕ್ಕೈಡೊ ವಿವಿಯ ಅತಿಥಿ ಉಪನ್ಯಾಸಕರಾಗಿ ನೇಮಕ

ಮೈಸೂರು,ಜೂ.4– ಮೈಸೂರು ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗ ಪ್ರಾಧ್ಯಾಪಕರಾದ ಡಾ.ಎಸ್.ಚಂದ್ರನಾಯಕ್ ಅವರನ್ನು ಜಪಾನ್‌ನ ಒಕ್ಕೈಡೊ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಲಾಗಿದೆ.



ಡಾ.ನಾಯಕ್

ಪ್ರಸ್ತುತ ಚಂದ್ರನಾಯಕ್ ಅವರು ಕೇಂದ್ರ ಸರ್ಕಾರದ ಐಸಿಎಆರ್–ಎಐಸಿಆರ್‌ಪಿ ಕಾರ್ಯಕ್ರಮದಲ್ಲಿ ವಿಶೇಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 8 ರಾಜ್ಯಗಳಲ್ಲಿರುವ 11 ಮಿಲೆಟ್ ಸಂಶೋಧನಾ ಪ್ರಯೋಗಾಲಯಗಳ ಕೇಂದ್ರದ ಮುಖ್ಯಸ್ಥರಾಗಿಯೂ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಶಿಕ್ಷಣದ ಗುಣಮಟ್ಟ ಸುಧಾರಿಸಲು ಒಕ್ಕೈಡೋ ವಿಶ್ವವಿದ್ಯಾಲಯವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಶಿಕ್ಷಣ ತಜ್ಞರು ಮತ್ತು ವಿಜ್ಞಾನಿಗಳನ್ನು ಅತಿಥಿ ಉಪನ್ಯಾಸಕರಾಗಿ ಆಹ್ವಾನಿಸುತ್ತಿದೆ.

ದ್ವಿಪಕ್ಷೀಯ ಸಹಕಾರ ವೃದ್ಧಿಸುವ ಜತೆಗೆ ಈ ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಾಗೂ ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರಿಗೂ ಹೆಚ್ಚಿನ ಶಿಕ್ಷಣ, ತರಬೇತಿ ಒದಗಿಸಲು ನೆರವಾಗುತ್ತದೆ ಎಂಬುದು ಒಕ್ಕೈಡೋ ವಿಶ್ವವಿದ್ಯಾಲಯದ ಉದ್ದೇಶವಾಗಿದೆ. ಒಕ್ಕೈಡೋ ವಿವಿಯ ಜಾಗತಿಕ ಆಹಾರ, ಸಂಪನ್ಮೂಲಗಳು, ಕೃಷಿ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ಡಾ.ನಾಯಕ್ ಅವರನ್ನು ಆಹ್ವಾನಿಸಲಾಗಿದೆ.

ಆಹಾರ ಮತ್ತು ಕೃಷಿ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧಿಸಲಿರುವ ನಾಯಕ್ ಅವರು, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ಡಾ.ನಾಯಕ್ ಅವರು 2017ರ ಜಪಾನ್ ಯುವ ಕೃಷಿ ವಿಜ್ಞಾನಿ ಪ್ರಶಸ್ತಿಗೆ ಭಾಜರಾಗಿದ್ದಾರೆ.


ಭಾರತದ ಕೃಷಿ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನಾಲ್ಕು ಪೇಟೆಂಟ್ ಹೊಂದಿರುವ ನಾಯಕ್ ಅವರು, 12 ಪುಸ್ತಕಗಳನ್ನು ಬರೆದಿದ್ದಾರೆ. ತಾಂತ್ರಿಕ ಟಿಪ್ಪಣಿಗಳು, ಲೇಖನಗಳು, ಸಂಶೋಧನಾ ಅಧ್ಯಯನಗಳನ್ನು ರಚಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಜರ್ನಲ್‌ಗಳಲ್ಲಿಯೂ ಇವರ ಲೇಖನಗಳು ಪ್ರಕಟವಾಗಿವೆ. 42 ಎಚ್ ಸೂಚ್ಯಂಕದೊಂದಿಗೆ 5000ಕ್ಕಿಂತಲೂ ಹೆಚ್ಚಿನ ವೈಜ್ಞಾನಿಕ ಉಲ್ಲೇಖಗಳನ್ನು ಹೊಂದಿದ್ದಾರೆ. ಬೀಜದಿಂದ ಹರಡುವ ರೋಗಕಾರಕಗಳ ಅನುಕ್ರಮಗಳ ಕುರಿತು 1000ಕ್ಕೂ ಡಿಎನ್‌ಎ ಸೀಕ್ವೆನ್ಸ್ ಸಲ್ಲಿಸಿದ್ದಾರೆ. ಲಂಡನ್ ಮೂಲದ ರಾಯಲ್ ಸೊಸೈಟಿ ಆಫ್ ಬಯಾಲಜಿ, ಕರ್ನಾಟಕ ವಿಜ್ಞಾನದ ಮತ್ತು ತಂತ್ರಜ್ಞಾನ ಅಕಾಡೆಮಿಯ ಫೆಲೋಶಿಪ್‌ಗೂ ಡಾ. ಚಂದ್ರನಾಯಕ್ ಭಾಜನರಾಗಿದ್ದಾರೆ.

ರಾಜಕಾಲುವೆಯಲ್ಲಿ ಒಳಚರಂಡಿ ನೀರು: ಆನಂದನಗರದಲ್ಲಿ ದುರ್ವಾಸನೆ

ಮೈಸೂರು, ಜೂ.4(ಎಂಕೆ)– ಮೈಸೂರಿನ ವಾರ್ಡ್ ನಂ.45ರ ವ್ಯಾಪ್ತಿಯ ಆನಂದನಗರದಲ್ಲಿನ ಮಳೆ ನೀರು ಹರಿಯುವ ರಾಜಕಾಲುವೆಯಲ್ಲಿ ಒಳಚರಂಡಿ ನೀರು ಹರಿಯುತ್ತಿದ್ದು, ದುರ್ವಾಸನೆಯಿಂದ ನಿವಾಸಿಗಳು ಪರದಾಡುವಂತಾಗಿದೆ. ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದು, ಸಂಕಷ್ಟದಿಂದ ಪಾರುಮಾಡುವಂತೆ ನೊಂದ ನಿವಾಸಿಗಳು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಆನಂದನಗರದ ಮಧ್ಯಭಾಗದಲ್ಲಿ ಮಳೆ ನೀರು ಹರಿಯಲು ಇರುವ ರಾಜಕಾಲುವೆಯಲ್ಲಿ ಕಳೆದ 3 ವರ್ಷಗಳಿಂದ ಪ್ರತಿನಿತ್ಯ ಒಳಚರಂಡಿ ನೀರು ಹರಿಯುತ್ತಿದೆ. ಒಳ

ಡಿಸಿಗೆ ನಿವಾಸಿಗಳ ದೂರು



ಚರಂಡಿ ನೀರಿನ ದುರ್ವಾಸನೆಯಿಂದ ಉಸಿರಾಡುವುದಕ್ಕೂ ಕಷ್ಟಪಡಬೇಕಾಗದ ದುಸ್ಥಿತಿ ನಿರ್ಮಾಣವಾಗಿದೆ. ರಸ್ತೆಯಲ್ಲಿ ಮೂಗು ಮುಚ್ಚಿಕೊಂಡು ತಿರುಗಾಡುತ್ತಿದ್ದೇವೆ. ಸಾಂಕ್ರಾಮಿಕ ರೋಗಗಳಿಂದ ನಿವಾಸಿಗಳ ತೊಂದರೆಗೀಡಾಗುತ್ತಿದ್ದಾರೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿ–ಸಿಬ್ಬಂದಿ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗೆಯೇ 2022ರ ಆ.25ರಂದು ಸ್ಥಳೀಯ ನಿವಾಸಿ ಎಂ.ಆರ್.ಪುಟ್ಟಪ್ಪ ಎಂಬುವರು ತಮ್ಮ ಕಚೇರಿಗೆ ಪತ್ರ ಬರೆದು ಸ್ವೀಕೃತಿಯನ್ನೂ ಪಡೆದುಕೊಂಡಿದ್ದರು. ಆದರೆ ಇಲ್ಲಿವರೆಗೆ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಸದ್ಯಕ್ಕೆ ರಾಜಕಾಲುವೆ ದುರಸ್ತಿ ಮಾಡಲು ಸಾಧ್ಯವಾಗದಿದ್ದರೆ, ಹರಿಯುತ್ತಿರುವ ಒಳಚರಂಡಿ ನೀರನ್ನಾದರೂ ತಡೆದು ಬದಲಿ ವ್ಯವಸ್ಥೆ ಮಾಡಿ. ಬಡಾವಣೆ ನಿವಾಸಿಗಳು ನೆಮ್ಮದಿಯಿಂದ ಉಸಿರಾಡಲು ಅವಕಾಶ ಮಾಡಿಕೊಡಿ ಎಂದು ಆನಂದನಗರದ ನೊಂದ ನಿವಾಸಿಗಳು ಪತ್ರ ಬರೆದು ಮನವಿ ಮಾಡಿದ್ದಾರೆ.

ದೇವರಾಜ ಅರಸು ರಸ್ತೆಯಲ್ಲಿ ವಿದ್ಯುತ್ ಶಾಕ್‌ಗೆ ಕಾದಿವೆ ದೀಪದ ಕಂಬಗಳು!

ಮೈಸೂರು, ಜೂ.4 (ಎಸ್‌ಬಿಡಿ)– ಮೈಸೂರಿನ ಡಿ.ದೇವರಾಜ ಅರಸು ರಸ್ತೆಯ ವಿದ್ಯುತ್ ಕಂಬವೊಂದರಲ್ಲಿ ವೈರ್‌ಗಳು ನೇತಾಡುತ್ತಿದ್ದು ಜೀವ ಬಲಿಗಾಗಿ ಕಾದಿವೆ.

ಕಂಬದಲ್ಲಿ ಸಣ್ಣ ಮಕ್ಕಳಿಗೂ ಎಟಕುವಷ್ಟು ತಳಮಟ್ಟಕ್ಕೆ ವೈರ್‌ಗಳ ಬಾಕ್ಸ್ ಅಳವಡಿಸಲಾಗಿದ್ದು, ಅದರ ಮುಚ್ಚಳವೇ ನಾಪತ್ತೆಯಾಗಿದೆ. ಹಾಗಾಗಿ ವೈರ್‌ಗಳು ನೇತಾಡುತ್ತಿವೆ. ಶನಿವಾರ ಸಂಜೆ ವ್ಯಕ್ತಿಯೊಬ್ಬರ ಕೈ ಆಕಸ್ಮಿಕವಾಗಿ ವೈರ್‌ಗಳ ಬಾಕ್ಸ್‌ಗೆ ತಾಕಿ ವಿದ್ಯುತ್ ಪ್ರವಹಿಸಿದ ಪರಿಣಾಮ ಅವರು ಪ್ರಜ್ಞೆ ಕಳೆದುಕೊಂಡಿದ್ದರು. ಸ್ವಲ್ಪ ಹೊತ್ತಿನ ಬಳಿಕ ಸಾವರಿಸಿಕೊಂಡು ಹೋದರೆಂದು ಅಲ್ಲಿನ ವರ್ತಕರು ತಿಳಿಸಿದ್ದಾರೆ.

ಪ್ರಮುಖ ವಾಣಿಜ್ಯ ಕೇಂದ್ರವಾದ ಡಿ.ದೇವರಾಜ ಅರಸು ರಸ್ತೆಯಲ್ಲಿ ಸದಾ ಜನ ಸಂಚಾರವಿರುತ್ತದೆ. ಮಕ್ಕಳು, ಮಹಿಳೆಯರು,



ವೃದ್ಧರೂ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಾರೆ. ವಾಹನ ನಿಲ್ಲಿಸುವಾಗಲೋ ಅಥವಾ ನಡೆದು ಹೋಗುವಾಗಲೋ ಆಕಸ್ಮಿಕವಾಗಿ ಈ ಬಾಕ್ಸ್ ಮುಟ್ಟಿದರೆ ಅಪಾಯ ಕಟ್ಟಿಟ್ಟಬುತ್ತಿ. ಈ ರೀತಿಯ ಅಪಾಯಕಾರಿ ಪೆಟ್ಟಿಗೆಗಳು ಬಹಳಷ್ಟಿವೆ. ಸಂಬಂಧಿಸಿದವರು, ಅನಾಹುತ ಸಂಭವಿಸಿದಾಗ ಬೇರೊಂದು ಸಬೂಬು ಹೇಳಿ ನುಣುಚಿಕೊಳ್ಳುತ್ತಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಲ ದಿನಗಳ ಹಿಂದೆ ಫುಟ್‌ಪಾತ್ ಅಡಿಯಲ್ಲಿ ಅಳವಡಿಸಲಾಗಿದ್ದ ಸರ್ವೀಸ್ ಕೇಬಲ್ ತುಂಡಾಗಿತ್ತು. ಮಳೆ ಬಂದಾಗ ಶಾರ್ಟ್ ಸರ್ಕ್ಯೂಟ್ ಆಗಿ ಫುಟ್‌ಪಾತ್ ಇಂಟರ್‌ಲಾಕ್ ನಡುವಿಂದ ಹೊಗೆ ಬರಲಾರಂಭಿಸಿತ್ತು. ಈ ಬಗ್ಗೆ 'ಮೈಸೂರು ಮಿತ್ರ'ದಲ್ಲಿ ವರದಿ ಪ್ರಕಟಿಸಿದ ಬಳಿಕ ಆ ದಿನವೇ ಸರಿಪಡಿಸಲಾಗಿತ್ತು.

ನಾಳೆ ಮಹಾಜನ ಕಾಲೇಜಲ್ಲಿ ರಾಷ್ಟ್ರೀಯ ಯೋಗೋತ್ಸವ

ಮೈಸೂರು, ಜೂ.4 (ಸಿಎನ್)– ವಿಶ್ವ ಯೋಗ ದಿನಾಚರಣೆಯ ಪೂರ್ವಭಾವಿಯಾಗಿ 'ರಾಷ್ಟ್ರೀಯ ಯೋಗೋತ್ಸವ'ವನ್ನು ಜೂನ್ 6ರಂದು ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಆಯುಷ್ ಸಚಿವಾಲಯ, ನವದೆಹಲಿಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ಮಹಾಜನ ಶಿಕ್ಷಣ ಸಂಸ್ಥೆ ಹಾಗೂ ಶ್ರೀ ವೇದ ವ್ಯಾಸ ಯೋಗ ಪ್ರತಿಷ್ಠಾನ ಸಹಯೋಗದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಈ ಯೋಗೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್ ಜಯ ಕುಮಾರಿ ಮಾಹಿತಿ ನೀಡಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿ 20 ದೇಶಗಳ ಸಾರಥ್ಯವನ್ನು ವಹಿಸಿರುವ ಭಾರತವು ಈ



ವರ್ಷದ ಯೋಗೋತ್ಸವವನ್ನು ವಿಶೇಷ ರೀತಿಯಲ್ಲಿ ಆಚರಿಸಲು ಯೋಜನೆ ರೂಪಿಸಿದೆ. ಪ್ರತಿ ಮನೆ, ಬೀದಿ, ನಗರ, ಶಾಲೆ ಹಾಗೂ ವಿವಿಧ ಸಂಸ್ಥೆಗಳಲ್ಲಿ ಎಲ್ಲರೂ ಯೋಗಾಭ್ಯಾಸ ಮಾಡಲು ಪ್ರೇರಣೆಯಾಗಲೆಂದು ಆಶಿಸಲಾಗಿದೆ ಎಂದರು.

ಮೈಸೂರು ನಗರಪಾಲಿಕೆ ಮಹಾಪೌರರಾದ ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ಇನ್ನು ಯೋಗಾಭ್ಯಾಸದ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ವೇದವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಕೆ.ರಾಘವೇಂದ್ರ ಪೈ ತಿಳಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಯೋಗೋತ್ಸವದ ಅಂಗವಾಗಿ 'ಮೈಸೂರಿನ ಯೋಗ ಪರಂಪರೆ ಮತ್ತು ಭಗವದ್ಗೀತೆಯಲ್ಲಿ ಯೋಗ' ಎನ್ನುವ ವಿಷಯಗಳ ಕುರಿತು ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ವಸ್ತು ಪ್ರದರ್ಶನವನ್ನು ಎಕ್ಸೆಪ್ ಸಾಫ್ಟ್ ಟೆಕ್ನಾಲಜೀಸ್‌ನ ಸಿ.ಇ.ಓ ಮತ್ತು ಸಂಸ್ಥಾಪಕ ಡಿ.ಸುಧನ್ವ ಉದ್ಘಾಟಿಸಲಿದ್ದಾರೆ. ಜೊತೆಗೆ 'ಶಿಕ್ಷಣದಲ್ಲಿ ಯೋಗದ ಮಹತ್ವ' ಕುರಿತು ಉಪನ್ಯಾಸ ಮತ್ತು ಸಂವಾದ ಆಯೋಜಿಸಲಾಗಿದೆ. ಇನ್ನು ಯೋಗದ ಬಗ್ಗೆ ವಿದ್ಯಾರ್ಥಿಗಳಿಗೆ ಸ್ವಾಮಿ ಮಹಮೇದಾನಂದಜೀ ಮಹಾರಾಜ್ ಉಪನ್ಯಾಸ ನೀಡಿದರೆ, ವಿದ್ಯಾರ್ಥಿಗಳಿಗೆ ಓದಿನಲ್ಲಿ ಎದುರಾಗುವ ಸವಾಲುಗಳಿಗೆ ಯೋಗೋಪಾಯಗಳ ಕುರಿತು ಯೋಗಾಚಾರ್ಯ ಡಾ.ಪಿ.ಎನ್. ಗಣೇಶ್ ಕುಮಾರ್ ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು. ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್ ಜಯ ಕುಮಾರಿ, ಮಹಾಜನ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ವೇದ ವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಕೆ.ರಾಘವೇಂದ್ರ ಪೈ, ಕಾರ್ಯಕ್ರಮ ಸಂಚಾಲಕ ಡಾ.ಹೆಚ್. ಆರ್.ತಿಮ್ಮೇಗೌಡ, ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್‌ಕುಮಾರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.6.2023 ಸೋಮವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ, ಪರಿಸರ ವಿಜ್ಞಾನ ಅಧ್ಯಯನ ವಿಭಾಗ:** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಆರೋಗ್ಯ ಮತ್ತು ಸುಸ್ಥಿರ ಅಭಿವೃದ್ಧಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ: ಮೈಸೂರು ವಿಭಾಗದ ಡಿಸಿಎಫ್ ಡಾ. ಕೆ.ಎನ್. ಬಸವರಾಜ, ಮುಖ್ಯ ಅತಿಥಿ: ಮೈಸೂರು ವಿವಿ ರಿಜಿಸ್ಟ್ರಾರ್ ಶ್ರೀಮತಿ ವಿ.ಆರ್. ಶೈಲಜಾ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಎನ್.ಕೆ.ಲೋಕನಾಥ್, ಸ್ಥಳ: ಬಿ.ಎನ್. ಬಹದ್ದೂರ್ ಆಡಿಟೋರಿಯಂ, ಮಾನಸ ಗಂಗೋತ್ರಿ, ಬೆಳಗ್ಗೆ 9 ಗಂಟೆಗೆ.

■ **ಸೋನಾ ಟಿವಿಎಸ್ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಟಿವಿಎಸ್ ಕ್ಯೂಬ್ ಎಲೆಕ್ಟ್ರಿಕ್ ವೆಹಿಕಲ್ ಲೋಕಾರ್ಪಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು, ಶಾಸಕ ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಕೆ.ಆರ್. ಮೋಹನ್‌ಕುಮಾರ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 9 ಗಂಟೆಗೆ.

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** 'ಹೈಪೋಥೈರಾಯ್ಡಿಸಮ್' ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ.

■ **ಪ್ರಜ್ಞಾವಂತ ನಾಗರಿಕ ವೇದಿಕೆ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್:** ಪರಿಸರ ದಿನಾಚರಣೆ ಅಂಗವಾಗಿ ಬಟ್ಟೆ ಬ್ಯಾಗ್ ವಿತರಿಸುವ ಮೂಲಕ ಪ್ಲಾಸ್ಟಿಕ್ ನಿಷೇಧ ಜಾಗೃತಿ ಅಭಿಯಾನ, ಸ್ಥಳ: ದೇವರಾಜ ಮೊಹಲ್ಲಾದ ಮಾರ್ಕೆಟ್ ಮುಂಭಾಗ, ಬೆಳಗ್ಗೆ 9.30ಕ್ಕೆ.

■ **ರಾಮಕೃಷ್ಣ ವಿದ್ಯಾ ಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜು :** 2023–24ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಅಭಿವಿನ್ಯಾಸ ಸಮಾರಂಭ, ದಿವ್ಯ ಸಾನ್ನಿಧ್ಯ: ರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಸ್ಥಳ: ಶ್ರೀ ಶಾರದಾ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಡಾ.ಎಂ.ಹೆಚ್.ಮರೀಗೌಡ ಹಾರ್ಟಿಕಲ್ಚರಲ್ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ಹಾಗೂ ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು:** ಸಸಿ ನೆಡುವ ಹಾಗೂ ಪರಿಸರ ಮತ್ತು ಪರಿಸರ ವಿಜ್ಞಾನ ಕುರಿತು ಸ್ಮಾರಕೋಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷ ಮತ್ತು ವಿಶ್ರಾಂತ ಕುಲಪತಿ ಡಾ. ಜೆ. ಶಶಿಧರ ಪ್ರಸಾದ್, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಬೆಳಗ್ಗೆ 11 ಗಂಟೆಗೆ.

■ **ಸೆಂಟರ್ ಸಿರಿಕಲ್ಚರಲ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಸೆಂಟ್ರಲ್ ಸಿಲ್ಕ್ ಬೋರ್ಡ್ :** ವಿಶ್ವ ಪರಿಸರ ದಿನಾಚರಣೆ, ಸ್ಥಳ: ಸಿಎಸ್‌ಆರ್‌ಟಿಐ, ಮಾನಂದವಾಡಿ ರಸ್ತೆ, ಶ್ರೀರಾಂಪುರ, ಬೆಳಗ್ಗೆ 11 ಗಂಟೆಗೆ

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ :** ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ, ಸಂಚಲನದ ಮೂಲಕ ಜಾಗೃತಿ ಜಾಥಾ, ಸ್ಥಳ: ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 11 ಗಂಟೆಗೆ.

■ **ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ, ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಪರಿಸರ ವಿಭಾಗ, ಮೈಸೂರು:** ಪರಿಸರ ದಿನಾಚರಣೆ–2023, ಶೀರ್ಷಿಕೆ: ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರೋಪಾಯಗಳು, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶರಾದ ದಿನೇಶ್, ಮುಖ್ಯ ಭಾಷಣಕಾರರು: ಸಿಪೆಟ್‌ನ ಪರಮಿಂದರ್ ಪ್ರೀತ್ ಸಿಂಗ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ ಡಾ.ಬಿ.ಎಂ.ಪ್ರಕಾಶ್, ಅಧ್ಯಕ್ಷತೆ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಎಸ್.ಪಿ.ಭಟ್ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾ ರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಡಾ.ಸಂಗ ಮೇಶ್ ಸವದತ್ತಿಮಠ, 7.15 ಭಾವಗೀತೆಗಳು, 10.00 ಲಯ ಸಂಭ್ರಮ–ಪಾಶ್ಚಾತ್ಯ ಲಯ ವಾದ್ಯಗಳ ಪರಿಚಯ, ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ, 12.45 ನಮ್ಮ ಆರೋಗ್ಯ: "ಥ್ರಾಂಬೋ–ಸೈಟೋಪೀನಿಯಾ ಅಥವಾ ಪ್ಲೇಟ್ಲೆಟ್ ಡಿಸಾರ್ಡರ್" ಕುರಿತು ಮೈಸೂರಿನ ಕನ್ಸಲ್ಟಂಟ್ ಹೆಮಟಾಲಜಿಸ್ಟ್ ಮತ್ತು ಹೆಮೆಟೊ ಆಂಕಾಲಜಿಸ್ಟ್ ಡಾ.ಅರುಣ್ ವಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸಿತ್ತಾರೆ:–ಬೇದ್ರೆ ಮಂಜುನಾಥ್, 1.20 ಭಾವಗೀತೆ–ಎ.ಎಸ್.ಮುರಳೀಧರ್, 3.00 ಸಿಕ್ಕಿಲ್ ಸಹೋದರಿಯರು: ಕೊಳಲು. **ಸಂಜೆ** 4.00 ಮಹಿಳಾರಂಗ: ಡಾಕ್ಟರ್ ಸಮಯ– ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುವ ವೈದ್ಯರು–ಆಯು ರ್ವೇದ ವೈದ್ಯೆ ಡಾ.ಚೈತ್ರಾ, ವಿಷಯ–ಗರ್ಭಾಶಯದ ತೊಂದರೆಗಳು, 4.30 ಝೇಂಕಾರ: ಕವಿ–ಕೆ.ಬಿ. ಪ್ರಭು ಪ್ರಸಾದ್, ಸಂಗೀತ:– ಎಸ್.ಜಿ.ರಘುರಾಂ, ಭಾಗವಹಿಸುವವರು ರಂಗರಾವ್ ಅಂಧಶಾಲೆಯ ಮಕ್ಕಳು, 4.45 ಹಿಂದಿ ಪಾಠ: ಪ್ರಸ್ತುತಿ–ಡಾ.ಜಯಂತಿ ಪ್ರಸಾದ್ ನೌಟಿಯಾಲ್, 6.50 ಕೃಷಿರಂಗ: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೂಪಕ: ವಸುಂಧರೆ ಆಸರೆ, ಪ್ರಸ್ತುತಿ–ಆರ್.ಲೋಕೇಶ್ವರಿ, ನಿರ್ಮಾಣ: ಎಸ್. ಸುಬ್ರಮಣ್ಯ. **ರಾತ್ರಿ:** 9.30 ಹಳ್ಳಿಹಾಡು–ಯರಗನ ಹಳ್ಳಿ ಸಣ್ಣಮ್ಮ ಮತ್ತು ಸಂಗಡಿಗರು, 10.00 ನಾಟಕ: "ದುರ್ಯೋಧನನ ದೂರ್ವಾ ಸಾತಿಥ್ಯ", ರಚನೆ: ಎಂ. ಎಸ್. ವೆಂಕಟರಾಮ್ ಕುಪ್ಪ, ನಿರ್ಮಾಣ: ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು.

■ **ಬ್ರಾಹ್ಮಣ ಧರ್ಮ ಸಹಾಯ ಸಭಾ:** ಅಭಿನಂದನಾ ಸಮಾರಂಭ, ಅಭಿನಂದಿ ತರು: ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ: ಬ್ರಾಹ್ಮಣ ಧರ್ಮ ಸಹಾಯ ಸಭಾ ಅಧ್ಯಕ್ಷ ಎನ್. ಶ್ರೀನಿವಾಸ, ಸ್ಥಳ: ಸಭಾ ಕಲ್ಯಾಣ ಭವನ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ, ಸಂಜೆ 5 ಗಂಟೆಗೆ.

ದಡದಹಳ್ಳಿಯಲ್ಲಿ ಇಂದು

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಕೇಂದ್ರ :** 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು' ವಿಷಯದೊಂದಿಗೆ ವಿಶ್ವ ಪರಿಸರ ಮಾಸಾಚರಣೆ, ಮೈಸೂರಿನ ಸುತ್ತ–ಮುತ್ತ ಗಿಡ ನೆಡುವ ಬೃಹತ್ ಕಾರ್ಯಕ್ರಮ, ಸ್ಥಳ: ದಡದಹಳ್ಳಿ, ಬೆಳಗ್ಗೆ.

ಸಾಗರಕಟ್ಟೆಯಲ್ಲಿ ಇಂದು

■ **ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಎನ್‌ಎಸ್‌ಎಸ್ ಘಟಕ ಮತ್ತು ಲಾಳಂದೇವನಹಳ್ಳಿ ಗ್ರಾಮ ಪಂಚಾಯ್ತಿ:** ಪರಿಸರ ದಿನದ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮ, ಸ್ಥಳ: ಸಾಗರಕಟ್ಟೆ ನದಿ ತಪ್ಪಲು, ಬೆಳಗ್ಗೆ 10.30ಕ್ಕೆ

ಬೆಟ್ಟದಪುರದಲ್ಲಿ ಇಂದು

■ **ಗಣಾರಾಧನ ಸಮಿತಿ, ಬೆಟ್ಟದಪುರ ಮಠ ಮತ್ತು ಕನ್ನಡ ಮಠ:** ಶ್ರೀ ಚಿಕ್ಕ ವೀರ ದೇಶಿಕೇಂದ್ರ ಸ್ವಾಮಿ 95ನೇ ಗಣಾರಾಧನೆ, ಶ್ರೀ ಚನ್ನ ವೀರದೇಶಿ ಕೇಂದ್ರ ಸ್ವಾಮಿಗಳವರ 4ನೇ ಗಣಾರಾಧನೆ, ಕನ್ನಡ ಮಠದ 214ನೇ ಸ್ಥಾಪನಾ ವರ್ಷಾಚರಣೆ ಹಾಗೂ ಶಿವಾನುಭವ, ನುಡಿ ನೈವೇದ್ಯ ಗೌರ ವಾರ್ಪಣೆ, ಸಮಾಜ ಯುವ ಚೇತನ ಶ್ರೀಗಳು ಎಸ್‌ಸಿವಿಡಿಎಸ್ ವಿದ್ಯಾ ಸಂಸ್ಥೆಗಳ 32ನೇ ವರ್ಷಾಚರಣೆ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ: ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಗಂಗ ಸ್ವಾಮೀಜಿ, ವಿನಯ್ ಗುರೂಜಿ, ಬೆಟ್ಟದಹಳ್ಳಿಯ ಗವಿಮಠದ ಅಧ್ಯಕ್ಷ ಶ್ರೀ ಚಂದ್ರಶೇಖರ ಸ್ವಾಮೀಜಿ, ಮಾರಿಯಾಲದ ಶ್ರೀ ಮುರುಘ ರಾಜೇಂದ್ರ ಮಹಾಸಂಸ್ಥಾನ ಮಠದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಸ್ಥಳ: ಸ್ವತಂತ್ರ ಸಲೀಲಾ ವಿರಕ್ತ ಮಠ ಮತ್ತು ಕನ್ನಡ ಮಠ, ಬೆಟ್ಟದಪುರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 5 ಸೋಮವಾರ 2023

ಸಂಪುಟ: 44 | ಸಂಚಿಕೆ: 50 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕನ್ನಡಿಗರೆಲ್ಲ ಸುರಕ್ಷಿತ




ಬೆಂಗಳೂರು: ಒಡಿಶಾ ರೈಲು ದುರಂತದಲ್ಲಿ ಮೃತಪಟ್ಟವರ 300ಕ್ಕೂ ಹೆಚ್ಚು ಮೃತದೇಹಗಳನ್ನು ಪರಿಶೀಲಿಸಿದ್ದೇನೆ. ಯಾರೂ ಕನ್ನಡಿಗರು ಇಲ್ಲ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದ್ದಾರೆ.

ರೈಲು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿದ ಬಳಿಕ ಎರಡ್ಮೂರು ಶವಾಗಾರ, 4 ಆಸ್ಪತ್ರೆಗಳಲ್ಲಿ ಹುಡುಕಾಟ ಮಾಡಿದ್ದು, ನಾಲ್ಕು ಆಸ್ಪತ್ರೆಗಳಲ್ಲಿ 750 ಗಾಯಾಳುಗಳನ್ನು ಸಚಿವರು ಮಾತನಾಡಿಸಿದ್ದಾರೆ. ನಂತರ ಮಾಧ್ಯಮದ ಜೊತೆ ಮಾತನಾಡಿದ ಅವರು, 750 ಗಾಯಾಳುಗಳಲ್ಲಿ ಯಾರೂ ಕನ್ನಡಿಗರು ಇಲ್ಲ. 300ಕ್ಕೂ ಹೆಚ್ಚು ಡೆಡ್‌ಬಾಡಿಗಳನ್ನು ಪರಿಶೀಲನೆ ಮಾಡಿದ್ದೇನೆ, ಯಾರೂ ಕನ್ನಡಿಗರಿಲ್ಲ. ಕನ್ನಡಿಗರು ಸೇಫ್ ಆಗಿದ್ದಾರೆ. 110 ಜನ ಕಳಸದವರು ವಾಪಸ್ ಆಗುತ್ತಿದ್ದಾರೆ. ಪುರಿ ಜಗನ್ನಾಥ ದರ್ಶನಕ್ಕೆ ಬಂದವರಿಗೆ ಟಿಕೆಟ್ ವ್ಯವಸ್ಥೆ ಮಾಡಿದ್ದೇವೆ ಎಂದಿದ್ದಾರೆ.

ಒಡಿಶಾದ ಪುರಿ ಜಗನ್ನಾಥ ದರ್ಶನಕ್ಕೆ ತೆರಳಿದ್ದ 12 ಯಾತ್ರಿಗಳು ವಾಪಸ್ಸಾಗಲು ವ್ಯವಸ್ಥೆ ಇಲ್ಲದೇ ಪರದಾಡುತ್ತಿದ್ದು, ಸಂತೋಷ್ ಲಾಡ್ ಯಾತ್ರಿಗಳನ್ನು ವಾಪಸ್ ಕರೆತರುವ ಸಲುವಾಗಿ ಬೆಂಗಳೂರಿಗೆ ವಿಮಾನ ಟಿಕೆಟ್ ವ್ಯವಸ್ಥೆ ಮಾಡಿದ್ದಾರೆ. ಭುವನೇಶ್ವರದಿಂದ ವಿಮಾನ ಟಿಕೆಟ್ ವ್ಯವಸ್ಥೆ ಮಾಡಿದ್ದಾರೆ.

ಇಂದು ಮೈಸೂರು ಪಾಲಿಕೆ ಬಜೆಟ್

ಮೈಸೂರು, ಜೂ.4(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆಯ 2023–24ನೇ ಸಾಲಿನ ಆಯವ್ಯಯ(ಬಜೆಟ್) ಸೋಮವಾರ ಮಂಡನೆಯಾಗಲಿದೆ.



ನಗರಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ವಿಶೇಷ ಕೌನ್ಸಿಲ್ ಸಭೆಯಲ್ಲಿ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಆರ್.ನಾಗರಾಜು ಪ್ರಸಕ್ತ ಸಾಲಿನ ಬಜೆಟ್ ಮಂಡಿಸಲಿದ್ದಾರೆ. ಎಂಟೂವರೆ ತಿಂಗಳ ಬಳಿಕ ಕಳೆದ ಮೇ 25ರಂದು ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಆರ್ಥಿಕ ವರ್ಷದ ಆರಂಭದ ಬಳಿಕ ಬಜೆಟ್ ಮಂಡಿಸಲಾಗುತ್ತಿದೆ.

ಪರ್ವತ ಕುಸಿದು 14 ಮಂದಿ ಸಾವು

ಚೀನಾ: ಪರ್ವತ ಕುಸಿದು 14 ಜನರು ಸಾವನ್ನಪ್ಪಿದ್ದು, ಐವರು ನಾಪತ್ತೆ ಆಗಿರುವಂತಹ ದುರ್ಘಟನೆ ಭಾನುವಾರ ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ಸಂಭವಿಸಿದೆ. ನಗರದ ಜಿಂಕೌಹೆ ಜಿಲ್ಲೆಯ ಯೊಂಗ್‌ಶೆಂಗ್ ಟೌನ್‌ಶಿಪ್‌ನಲ್ಲಿರುವ ಅರಣ್ಯ ಫಾರ್ಮ್‌ನಲ್ಲಿ ಬೆಳಗ್ಗೆ 6 ಗಂಟೆ ಸುಮಾರಿಗೆ ಘಟನೆ ನಡೆದಿದೆ. 180ಕ್ಕೂ ಹೆಚ್ಚು ಜನರನ್ನು ಒಳಗೊಂಡ ರಕ್ಷಣಾ ತಂಡವು ನಾಪತ್ತೆಯಾದವರಿಗಾಗಿ ಇನ್ನೂ ಹುಡುಕಾಟ ನಡೆಸುತ್ತಿದೆ ಎನ್ನಲಾಗಿದೆ.

ರೈಲು ದುರಂತ: ಸಿಬಿಐ ತನಿಖೆಗೆ ಶಿಫಾರಸು

ಒಡಿಶಾ, ಜೂ.4– 288 ಪ್ರಯಾಣಿಕರನ್ನು ಬಲಿ ತೆಗೆದುಕೊಂಡ ಒಡಿಶಾ ರೈಲು ದುರಂತ ಹೇಗಾಯಿತು, ಇದಕ್ಕೆ ಕಾರಣವೇನು ಎಂಬುದನ್ನು ತಿಳಿಯಲು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದಾರೆ. ಒಡಿಶಾ ರೈಲು ದುರಂತವನ್ನು ಸಿಬಿಐ ತನಿಖೆಗೆ ಶಿಫಾರಸು ಮಾಡಿದ್ದಾರೆ.

ಇದುವರೆಗೆ ಪ್ರಾಥಮಿಕ ತನಿಖೆಯಲ್ಲಿ ಸಿಕ್ಕಿರುವ ಮಾಹಿತಿಗಳು, ಘಟನೆಯ ಗಂಭೀರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ತನಿಖೆಗೆ ರೈಲ್ವೇ ಮಂಡಳಿ ಸಿಬಿಐಗೆ ಶಿಫಾರಸು ಮಾಡುತ್ತಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಈ ಕುರಿತು ರೈಲ್ವೇ ಮಂಡಳಿ ಚರ್ಚೆ ನಡೆಸಿ ಸಿಬಿಐ ತನಿಖೆಗೆ ವಹಿಸುವ ನಿರ್ಧಾರ ಕೈಗೊಂಡಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಒಡಿಶಾ ರೈಲು ದುರಂತದ ಹೊಣೆ ಹೊತ್ತು ರೈಲ್ವೇ ಸಚಿವರು ರಾಜೀನಾಮೆ ನೀಡಬೇಕು ಎಂದು ವಿಪಕ್ಷಗಳು ಒತ್ತಾಯಿಸುತ್ತಿವೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಈ ದುರಂತದ ನಡುವೆ ಗೋದ್ರಾ ರೈಲು ದುರಂತವನ್ನು ಎಳೆದು ತಂದಿದ್ದಾರೆ. ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಬಾಹಾನಗ ನಿಲ್ದಾಣದಲ್ಲಿ ಒಟ್ಟು 4 ಹಳಿ ಇವೆ. ಈ ಪೈಕಿ ಮಧ್ಯದ ಎರಡು ಹಳಿ ರೈಲುಗಳ ಸಂಚಾರಕ್ಕೆ ಮುಕ್ತವಾಗಿಡಲಾಗಿತ್ತು. ಅಕ್ಕಪಕ್ಕದ ಎರಡು ಹಳಿಗಳಲ್ಲಿ ಸರಕು ರೈಲು ನಿಲ್ಲಿಸಲಾಗಿತ್ತು. ಇಂಥ ವೇಳೆ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು ಗಂಟೆಗೆ 128 ಕಿ.ಮೀ ಬರುತ್ತಿದ್ದು, ಅದಕ್ಕೆ ಮುಖ್ಯ ಲೇನ್‌ನಲ್ಲಿ ಅಂದರೆ ಮಧ್ಯದ ಹಳಿಯಲ್ಲಿ ಆಗಮಿಸಲು ▶ 8ನೇ ಪುಟಕ್ಕೆ



ದುರಂತಕ್ಕೆ ಕಾರಣವಾಯಿತೇ ವಿಧ್ವಂಸಕ ಸಂಚು?



ಅಶ್ವಿನಿ ವೈಷ್ಣವ್

ನವದೆಹಲಿ: ಒಡಿಶಾ ರೈಲು ದುರಂತಕ್ಕೆ 'ಕೋರೊಮಂಡಲ್ ಎಕ್ಸ್‌ಪ್ರೆಸ್' ರೈಲು ಚಾಲಕನ ತಪ್ಪು ಹಾಗೂ ರೈಲು ವ್ಯವಸ್ಥೆಯಲ್ಲಿ ದೋಷ ಕಂಡು ಬಂದಿಲ್ಲ ಎಂದು ಪ್ರಾಥಮಿಕ ನಿರ್ಧಾರಕ್ಕೆ ಬಂದಿರುವ ರೈಲ್ವೆ ಇಲಾಖೆ ಈ ದುರ್ಘಟನೆ ಹಿಂದೆ ವಿಧ್ವಂಸಕ ಕೃತ್ಯ ಅಥವಾ ಇಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಸಿಸ್ಟಮ್‌ನ ಬದಲಾವಣೆ ಮಾಡಿರಬಹುದಾದ ಕ್ರಿಮಿನಲ್ ಸಂಚನ್ನು ಬಲವಾಗಿ ಶಂಕಿಸಿದೆ.

ಸುದ್ದಿಗಾರರ ಜೊತೆ ಮಾತನಾಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ದುರ್ಘಟನೆಗೆ ಮೂಲ ಕಾರಣವನ್ನು ಮತ್ತು ಅದಕ್ಕೆ ಕಾರಣರಾದವರನ್ನು ಗುರುತಿಸಲಾಗಿದೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ. ಘಟನೆ ನಡೆದ ಸ್ಥಳ ಹಾಗೂ ನಡೆದಿರಬಹುದಾದ ಅಂಶಗಳನ್ನು ಪರಿಶೀಲಿಸಿದರೆ ಉದ್ದೇಶಪೂರ್ವಕವಾಗಿ ಇಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಸಿಸ್ಟಮ್‌ನ ಬದಲಾವಣೆ ಮಾಡಿರಬಹುದಾದ ಬಲವಾದ ಅನುಮಾನ ಮೂಡಿಸುತ್ತಿದೆ ಎಂದಿದ್ದಾರೆ. ದೆಹಲಿ ಉನ್ನತ ಮಟ್ಟದ ರೈಲು ಅಧಿಕಾರಿಗಳು ಕೂಡ ಇದನ್ನೇ ಹೇಳುತ್ತಿದ್ದು, ಇದು ಒಳಗಿನಿಂದ ಅಥವಾ ಹೊರಗಿನಿಂದ ನಡೆದಿರಬಹುದಾಗಿದೆ. ಇದನ್ನು ನಾವು ತಳ್ಳಿ ಹಾಕಿಲ್ಲ. ಎರಡೂ ರೈಲುಗಳು ವೇಗದ ಮಿತಿ ದಾಟಿರಲಿಲ್ಲ ಎಂದು ರೈಲ್ವೆ ಮಂಡಳಿ ಸದಸ್ಯೆ ಜಯಾ ವರ್ಮಾ ಹೇಳಿದ್ದಾರೆ. ರೈಲ್ವೆ ಸುರಕ್ಷತಾ ಆಯುಕ್ತರು ತನಿಖೆಯನ್ನು ಪೂರ್ಣಗೊಳಿಸಿದ್ದು ವರದಿಗಾಗಿ ಕಾಯುತ್ತಿದ್ದೇವೆ. ರೈಲು ದುರಂತವನ್ನು ಸಿಬಿಐ ತನಿಖೆಗೆ ವಹಿಸುವಂತೆ ರೈಲ್ವೆ ಮಂಡಳಿ ಶಿಫಾರಸು ಮಾಡಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ ಘಟನಾ ಸ್ಥಳದಲ್ಲಿ ತೆರವು ಕಾರ್ಯಾಚರಣೆ ಬಹುತೇಕ ಮುಗಿದಿದ್ದು, ಹಳಿಗಳ ಪುನರ್ ಜೋಡಣೆ ಹಾಗೂ ತಾಂತ್ರಿಕ ಕೆಲಸಗಳು ಪ್ರಗತಿಯಲ್ಲಿವೆ ಎಂದರು.

ಕೋರೊಮಂಡಲ್ ಎಕ್ಸ್‌ಪ್ರೆಸ್ ಚಾಲಕನಿಗೆ ಕ್ಲೀನ್‌ಚಿಟ್

ನವದೆಹಲಿ: ಕೋರೊಮಂಡಲ್ ಎಕ್ಸ್‌ಪ್ರೆಸ್ ಅತೀ ವೇಗದಲ್ಲಿ ಚಲಿಸುತ್ತಿರಲಿಲ್ಲ. ಗೂಡ್ಸ್ ರೈಲು ನಿಂತಿದ್ದ ಲೂಪ್ ಲೈನ್ ಪ್ರವೇಶಿಸಲು ಹಸಿರು ನಿಶಾನೆ ದೊರಕಿತ್ತು. ಅಪಘಾತದ ಹಿಂದೆ ಚಾಲಕನ ಪಾತ್ರ ಇಲ್ಲ ಎಂದು ರೈಲ್ವೆ ಇಲಾಖೆ ತಿಳಿಸಿದೆ. ರೈಲ್ವೆ ಮಂಡಳಿ ಇಬ್ಬರು ಪ್ರಮುಖ ಅಧಿಕಾರಿಗಳಾದ ಸಿಗ್ನಲಿಂಗ್‌ನ ಪ್ರಧಾನ ಕಾರ್ಯನಿರ್ವಾಹಕ ನಿರ್ದೇಶಕ ಸಂದೀಪ್ ಮಾಥುರ್ ಹಾಗೂ ಕಾರ್ಯಾಚರಣೆ ಮತ್ತು ವ್ಯವಹಾರ ಅಭಿವೃದ್ಧಿ ಸದಸ್ಯ ಜಯವರ್ಮ ಸಿನ್ಹಾ ಅವರು ಅಪಘಾತ ಹೇಗೆ ಸಂಭವಿಸಿರಬಹುದು ಎಂಬುದನ್ನು ವಿವರಿಸಿದ್ದಾರೆ. ಅಪಘಾತಕ್ಕೆ ಕಾರಣವಾದ ಸಮಸ್ಯೆಯ ಭಾಗವೆಂದು ಮೇಲ್ನೋಟಕ್ಕೆ ಕಂಡುಬರುವ ಇಂಟರ್ ಲಾಕಿಂಗ್ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ವಿವರಿಸಿದರು. ಕೋರೊಮಂಡಲ್ ಎಕ್ಸ್‌ಪ್ರೆಸ್ 128 ಕಿ.ಮೀ ವೇಗದಲ್ಲಿತ್ತು. ▶ 8ನೇ ಪುಟಕ್ಕೆ

ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ ಭರವಸೆ



ನವದೆಹಲಿ, ಜೂ.4– ಒಡಿಶಾ ರೈಲು ದುರಂತದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡ ಮಕ್ಕಳ ಶಾಲಾ ಶಿಕ್ಷಣದ ಜವಾಬ್ದಾರಿಯನ್ನು 'ಅದಾನಿ ಸಮೂಹ ಸಂಸ್ಥೆ' ಹೊರುವುದಾಗಿ ಉದ್ಯಮಿ ಗೌತಮ್ ಅದಾನಿ ಹಾಗೂ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಭಾನುವಾರ ಘೋಷಿಸಿದ್ದಾರೆ.


ಬೆಂಗಳೂರು–ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಕೋರೊಮಂಡಲ್ ಎಕ್ಸ್‌ಪ್ರೆಸ್ ಮತ್ತು ಸರಕು ಸಾಗಣೆ ರೈಲುಗಳ ಮಧ್ಯೆ ಒಡಿಶಾದ ಬಾಲಸೋರ್‌ನಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಅವಘಡದಲ್ಲಿ 288 ಮಂದಿ ಮೃತಪಟ್ಟಿದ್ದು, 1100 ಮಂದಿ ▶ 8ನೇ ಪುಟಕ್ಕೆ

ಸುರಕ್ಷಿತವಾಗಿ ಸುಮೇದ್ ಸಿಖರ್ಜಿ ತಲುಪಿದ 110 ಕನ್ನಡಿಗರು



ಚಿಕ್ಕಮಗಳೂರು, ಜೂ.4– ಒಡಿಶಾ ರೈಲು ದುರಂತದಿಂದ ಸಂಕಷ್ಟಕ್ಕೆ ಸಿಲುಕಿದ್ದ 110 ಕನ್ನಡಿಗರು ಸುರಕ್ಷಿತವಾಗಿ ಜಾರ್ಖಂಡ್‌ನ ಸುಮೇದ್ ಸಿಖರ್ಜಿಗೆ ತಲುಪಿದ್ದಾರೆ. ಅಲ್ಲದೇ ತಾವು ಸೇಫ್ ಆಗಿದ್ದೇವೆ ಎಂದು ವೀಡಿಯೋ ಮಾಡಿ ಹಂಚಿಕೊಂಡಿದ್ದಾರೆ. ಹೌರಾ ರೈಲಿನಲ್ಲಿ ಚಿಕ್ಕಮಗಳೂರಿನ ▶ 8ನೇ ಪುಟಕ್ಕೆ

ಹಸು ಏಕೆ ಕಡಿಯಬಾರದು; ಸಚಿವ ವೆಂಕಟೇಶ್ ಹೇಳಿಕೆಗೆ ಆಕ್ಷೇಪ



ಬೆಂಗಳೂರು, ಜೂ.4– ಹಸುವನ್ನು ಏಕೆ ಕಡಿಯಬಾರದು ಎಂದು ಪ್ರಶ್ನಿಸಿರುವ ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಹೇಳಿಕೆ ಆಶ್ಚರ್ಯ ತಂದಿದ್ದು, ಹೇಳಿಕೆ ಖಂಡನೀಯ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಗೋವಿನೊಂದಿಗೆ ಭಾರತೀಯರಾದ ನಾವು ಭಾವನಾತ್ಮಕ ಸಂಬಂಧ ಹೊಂದಿದ್ದು, ತಾಯಿ ಸ್ಥಾನದಲ್ಲಿ ಗೋವನ್ನು ಪೂಜಿಸುತ್ತೇವೆ. ಸಚಿವ ವೆಂಕಟೇಶ್ ಅವರು ಯಾರ ಓಲೈಕೆಗಾಗಿ ಈ ರೀತಿಯ ಹೇಳಿಕೆ ನೀಡಿದ್ದಾರೆ, ತಮಗೆ ನೀಡಿರುವ ಖಾತೆಯನ್ನು ಬದಲಾಯಿಸಲಿ ಎಂದೊ ಅಥವಾ ಹೈಕಮಾಂಡ್ ಮೆಚ್ಚಿಸಲೊ? ಎಂದು ಬಸವರಾಜ ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ಗೋಹತ್ಯೆ ನಿಷೇಧ ಪ್ರಥಮವಾಗಿ ಪ್ರತಿಪಾದಿಸಿದ್ದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು. ಗಾಂಧೀಜಿ ಪ್ರತಿಪಾದಿಸಿದ ಗೋಹತ್ಯೆ ನಿಷೇಧವನ್ನು 1960ರ ದಶಕದಲ್ಲಿ ಹಲವಾರು ರಾಜ್ಯಗಳಲ್ಲಿ ಕಾನೂನು ತರಲಾಗಿದೆ. ಸಚಿವರ ಹೇಳಿಕೆಯಿಂದ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಗೋವುಗಳ ಕಳ್ಳ ಸಾಗಾಣಿಕೆ, ಸಾಮೂಹಿಕ ಗೋಹತ್ಯೆ ಮಾಡುವ ಕಾನೂನುಬಾಹಿರ ಕಾರ್ಖಾನೆಗಳು ತಲೆ ಎತ್ತಲಿವೆ. ನಮ್ಮ ಸರ್ಕಾರದ ಅವಧಿಯಲ್ಲಿ ಕಾನೂನುಬಾಹಿರ ಕಸಾಯಿಖಾನೆಗಳನ್ನು ತಡೆಗಟ್ಟಲು ಕಾನೂನು ತರಲಾಗಿದೆ. ಕರ್ನಾಟಕದಲ್ಲಿ ಹೊಸ ಕಾಯಿದೆ ತಂದಿಲ್ಲ. ಇರುವ ಕಾನೂನಿಗೆ ಬಲ ತುಂಬಿದ್ದೇವೆ ಎಂದು ತಿಳಿಸಿದ್ದಾರೆ. ಈ ರೀತಿಯ ಹೇಳಿಕೆ ನೀಡುವ ಮೊದಲು ಸಚಿವರು ಆಲೋಚನೆ ಮಾಡಬೇಕು. ಈ ಬಗ್ಗೆ ಸಿಎಂ ಸಚಿವರಿಗೆ ಸೂಕ್ತ ಸಲಹೆ ನೀಡುವ ಅವಶ್ಯಕತೆ ಇದೆ ಎಂದು ಬೊಮ್ಮಾಯಿ ವಾಗ್ದಾಳಿ ನಡೆಸಿದ್ದಾರೆ.

ತ್ವರಿತವಾಗಿ 2 ಲೈನ್ ದುರಸ್ತಿ



ನವದೆಹಲಿ, ಜೂ.4– ಒಡಿಶಾದ ಬಾಲಸೋರ್ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಭೀಕರ ಸರಣಿ ರೈಲು ಅಪಘಾತದಲ್ಲಿ 288 ಮಂದಿ ಸಾವನ್ನಪ್ಪಿದ್ದಾರೆ. ಬಹನಾಗ ಬಜಾರ್ ಬಳಿಯ ಘಟನಾ ಸ್ಥಳದಲ್ಲಿ ಬೋಗಿಗಳನ್ನು ಬಹುತೇಕ ತೆರವುಗೊಳಿಸಿದ್ದು, ಹಳಿಗಳನ್ನು ಪರಿಶೀಲಿಸಿ ಸರಿಪಡಿಸಲಾಗುತ್ತಿದೆ. ಬುಲ್‌ಡೋಜರ್, ▶ 8ನೇ ಪುಟಕ್ಕೆ

ಲಾರಿಗೆ ಕಾರು ಡಿಕ್ಕಿ: ನಾಲ್ವರ ಸಾವು

ನಾಗಮಂಗಲ ಬಳಿ ಹೆದ್ದಾರಿಯಲ್ಲಿ ದುರ್ಘಟನೆ





ನಾಗಮಂಗಲ, ಜೂ.4– ಲಾರಿಗೆ ಕಾರು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಭಾನುವಾರ ಮುಂಜಾನೆ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ತಾಲೂಕಿನ ತಿರುಮಲಾಪುರ ಗ್ರಾಮದ ಶ್ರೀ ಶನಿದೇವರ ದೇವಾಲಯದ ಎದುರು ನಡೆದಿದೆ.

ತುಮಕೂರು ಮೂಲದ ಯೋಗೇಶ್ ಮತ್ತು ಶರತ್, ರಾಮನಗರದ ಹೇಮಂತ್ ಹಾಗೂ ಶಿವಮೊಗ್ಗ ಮೂಲದ ಧೀರಜ್ ಎಂಬುವರೇ ಭೀಕರ ಅಪಘಾತದಲ್ಲಿ ಮೃತಪಟ್ಟಿರುವ ದುರ್ದೈವಿಗಳು. ಎಂ ಸ್ಯಾಂಡ್ ಸಾಗಿಸುತ್ತಿದ್ದ ಟಿಪ್ಪರ್ ಲಾರಿಯನ್ನು ಹಿಂದಿಕ್ಕಿ ಮುನ್ನುಗ್ಗುವ ತವಕದಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಲಾರಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಹೆದ್ದಾರಿ ಗಸ್ತು ಪೊಲೀಸ್ ಸಿಬ್ಬಂದಿ ಬೆಳ್ಳೂರು ಠಾಣೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಡಿವೈಎಸ್‌ಪಿ, ಸಿಪಿಐ ಹಾಗೂ ಪಿಎಸ್‌ಐ ಲೋಕೇಶ್ ಸ್ಥಳಕ್ಕೆ ಭೇಟಿ, ನೀಡಿ ಪರಿಶೀಲನೆ ನಡೆಸಿದರು.

ಡೆತ್ ಡೇಗೆ ಮುನ್ನುಡಿಯಾದ ಬರ್ತ್ ಡೇ ಪಾರ್ಟಿ: ಮೃತಪಟ್ಟಿರುವ ನಾಲ್ವರೂ ಸ್ನೇಹಿತರಾಗಿದ್ದು ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರೆನ್ನಲಾಗಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಂದು ಶ್ರೀ ಆದಿಚುಂಚನಗಿರಿ ಕ್ಷೇತ್ರದ ಕಾಲ ಭೈರವೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿದರೆ ಇಷ್ಟಾರ್ಥಗಳು ನೆರವೇರುತ್ತವೆ ಎಂಬುದು ಇವರ ಪಾಲಿಗೂ ನಂಬಿಕೆಯಾಗಿತ್ತು. ▶ 8ನೇ ಪುಟಕ್ಕೆ

ಮೈಸೂರು ರಿಂಗ್ ರಸ್ತೆಯಲ್ಲಿ ಪರಿಸರ ಪ್ರೇಮಿಗಳಿಂದ ತ್ಯಾಜ್ಯ ಸಂಗ್ರಹ

- ಸಿಐಐ ನೇತೃತ್ವದಲ್ಲಿ ವಿವಿಧ ಕಾಲೇಜು ವಿದ್ಯಾರ್ಥಿಗಳು ಹಾಗೂ ಕಂಪನಿಗಳ ಸಿಬ್ಬಂದಿಗಳಿಂದ ಶ್ರಮದಾನ
- ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 28 ತಂಡಗಳ 2300 ಮಂದಿಯಿಂದ ಸ್ವಚ್ಛತಾ ಅಭಿಯಾನ







ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಹಾಗೂ ಮರು ಬಳಕೆ ಮಾಡುವ ಪ್ಲಾಸ್ಟಿಕ್ ಬಳಸುವ ಮತ್ತು ಬಳಸಿದ ಪ್ಲಾಸ್ಟಿಕ್ ಅನ್ನು ಎಲ್ಲೆಂದರಲ್ಲಿ ಬಿಸಾಡದೇ ಪುನರ್ ಉತ್ಪಾದನಾ ಘಟಕಕ್ಕೆ ರವಾನಿಸುವ ಪ್ರತಿಜ್ಞೆ ಸ್ವೀಕರಿಸಿದರು.

ಮೈಸೂರು, ಜೂ.4(ಎಂಟಿವೈ)– ವಿಶ್ವ ಪರಿಸರ ದಿನದ ಅಂಗವಾಗಿ ಸಿಐಐ ನೇತೃತ್ವದಲ್ಲಿ ಭಾನುವಾರ ನಡೆದ ಸ್ವಚ್ಛತಾ ಅಭಿಯಾನದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ವಿವಿಧ ಕಂಪನಿಗಳ ಸಿಬ್ಬಂದಿ ರಿಂಗ್ ರಸ್ತೆಯಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಅಪಾರ ಪ್ರಮಾಣದ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಿ ಪರಿಸರ ಕಾಳಜಿ ಪ್ರದರ್ಶಿಸಿದರು.

ಪರಿಸರ ದಿನದ ಅಂಗವಾಗಿ ಸಿಐಐ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದಲ್ಲಿ 'ಪ್ಲಾಸ್ಟಿಕ್ ಕವರ್ ಮತ್ತು ವಸ್ತು'ಗಳನ್ನಷ್ಟೇ ಸಂಗ್ರಹಿಸಲು ಉದ್ದೇಶಿಸಲಾಗಿತ್ತು.

ಸ್ವಚ್ಛ ಮೈಸೂರು ಪರಿಕಲ್ಪನೆಯಲ್ಲಿ ನಡೆದ ಸ್ವಚ್ಛ ಅಭಿಯಾನದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಕೈಗಾರಿಕೆ ಮತ್ತು ಕಂಪನಿಗಳ ಸಿಬ್ಬಂದಿ ಸ್ವಯಂಪ್ರೇರಣೆಯಿಂದ ಪಾಲ್ಗೊಂಡಿದ್ದರು. ಭಾನುವಾರ ಬೆಳಗ್ಗೆ 7ರಿಂದ 9ರವರೆಗೆ ಏಕಕಾಲದಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ 2300 ಮಂದಿ ಪಾಲ್ಗೊಂಡಿದ್ದರು. ರಿಂಗ್ ರಸ್ತೆಯನ್ನು 28 ವಿಭಾಗವಾಗಿ ವಿಂಗಡಿಸಿ ಒಂದೊಂದು ತಂಡ 1–2 ಕಿ.ಮೀವರೆಗೆ ರಿಂಗ್ ರಸ್ತೆಯ ಎರಡೂ ಬದಿಯಲ್ಲೂ ವಾಹನ ಸವಾರರು ಬಿಸಾಡಿ ಹೋಗಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಿದರು. ಮೈಸೂರು ನಗರಪಾಲಿಕೆ ಸಿಬ್ಬಂದಿ ಈ ಸ್ವಚ್ಛತಾ ಅಭಿಯಾನಕ್ಕೆ ಸಹಕಾರ ನೀಡಿದ್ದು, ಪರಿಸರಾಸಕ್ತರು ಸಂಗ್ರಹಿಸಿದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸ್ವೀಕರಿಸಿದರು. ನಗರಪಾಲಿಕೆಯ ಒಟ್ಟು 17 ಆಟೋ ಟಿಪ್ಪರ್ ಹಾಗೂ 3 ಟ್ರಾಕ್ಟರ್ ತುಂಬ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾದವು. ಅವುಗಳನ್ನು ಶೂನ್ಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ರವಾನಿಸಿದರು.



ಜೆ.ಕೆ.ಮೈದಾನದಲ್ಲಿ ಕಾರ್ಯಕ್ರಮ: ಬೆಳಗ್ಗೆ ಎರಡು ಗಂಟೆಗಳ ಕಾಲ ಶ್ರಮದಾನ ಮಾಡಿದ ವಿದ್ಯಾರ್ಥಿಗಳು ಹಾಗೂ ವಿವಿಧ ಸಂಸ್ಥೆಗಳ ಸಿಬ್ಬಂದಿಗಳನ್ನು ಜೆ.ಕೆ. ಮೈದಾನಕ್ಕೆ ಕರೆತರಲಾಯಿತು.

ಈ ವೇಳೆ ಪರಿಸರ ಸಂರಕ್ಷಣೆ ಬಗ್ಗೆ ಹಾಗೂ ಸ್ವಚ್ಛ ಮೈಸೂರು ಮಾಡಲು ಶ್ರಮಿಸುವುದರೊಂದಿಗೆ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಹಾಗೂ ಮರು ಬಳಕೆ ಮಾಡುವ ಪ್ಲಾಸ್ಟಿಕ್ ಬಳಸುವ ಮತ್ತು ಬಳಸಿದ ಪ್ಲಾಸ್ಟಿಕ್ ಅನ್ನು ಎಲ್ಲೆಂದರಲ್ಲಿ ಬಿಸಾಡದೆ ಪುನರ್ ಉತ್ಪಾದನಾ ಘಟಕಕ್ಕೆ ರವಾನಿಸುವ ಪ್ರತಿಜ್ಞೆ ಸ್ವೀಕರಿಸಿದರು. ವಿಶ್ವ ಪರಿಸರ ದಿನದ ಅಂಗವಾಗಿ ಕಳೆದ ವಾರ ಕಾಲೇಜು ವಿದ್ಯಾರ್ಥಿಗಳು ಹಾಗೂ ವಿವಿಧ ಕಂಪನಿಗಳ ಸಿಬ್ಬಂದಿಗಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಿಐಐ ಅಧ್ಯಕ್ಷ ಸ್ಯಾವ್ ಚೆರಿಯನ್, ಸಿಐಐ ಉಪಾಧ್ಯಕ್ಷ ವಿ.ಈಶ್ವರರಾವ್, ಸಿಎಸ್‌ಆರ್ ವಿಭಾಗದ ಸಂಚಾಲಕಿ ಸವಿತಾ ಮಲ್ಲಪ್ಪ, ಉನ್ನತ ಶಿಕ್ಷಣ ವೇದಿಕೆ ಸಂಚಾಲಕ ಡಾ.ಧರ್ಮಪ್ರಸಾದ್, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಿರಿಯ ಪರಿಸರ ಅಧಿಕಾರಿ ಬಿ.ಎಂ.ಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 5 ಜೂನ್ 2023

ನಕ್ಕರೆ ಅದೇ ಸ್ವರ್ಗ

ಮಗು : ಅಮ್ಮ..., ಅಪ್ಸರೆಯರು ಸ್ವರ್ಗದಲ್ಲೇ ತಾನೆ ಇರೋದು?
ಅಮ್ಮ : ಹೌದು ಪುಟ್ಟ, ಯಾಕೆ?
ಮಗು : ಮತ್ತೆ ಪಕ್ಕದ ಮನೆ ಆಂಟಿ ಇನ್ನು ಇಲ್ಲೇ ಇದ್ದಾರೆ...?
ಅಮ್ಮ : ಆ ಶೂರ್ಪನಖಿ ಅಪ್ಸರೆ ಅಂತ ಯಾರ್ ಹೇಳಿದ್ರು ನಿಂಗೆ?
ಮಗು : ಮೊನ್ನೆ ಅಪ್ಪ ಹೇಳ್ತಿದ್ರು 'ನೀನು ಅಪ್ಸರೆ ಥರ ಕಾಣ್ತೀಯಾ ಅಂತ? ಹೇಳಮ್ಮ ಆಂಟಿ ಸ್ವರ್ಗಕ್ಕೆ ಯಾಕೆ ಹೋಗಿಲ್ಲ?
ಅಮ್ಮ : ಇವತ್ತು ಹೋಗ್ತಾಳೆ, ಜೊತೆಗೆ ನಿಮ್ ಪಪ್ಪಾನೂ ಹೋಗ್ತಾರೆ ನೋಡ್ತಾ ಇರು...

ಮೈಸೂರು ಮಿತ್ರ
ಸೋಮವಾರ, 5 ಜೂನ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........


ಎಲ್ಲವೂ ಕ್ಷಣಿಕ, ತಿಳಿದು ಬದುಕು ನೀ ಇರುವ ತನಕ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಗೈಯಲ್ಲಿ ಬೆಣ್ಣೆ ಇಟ್ಕೊಂಡು ಊರೆಲ್ಲಾ ತುಪ್ಪಕ್ಕೆ ಅಲೆದಾಡಿದರಂತೆ

ನಿಮ್ಮ ಪತ್ರಗಳು

ಇಂದಿಗೂ ಎಂದೆಂದಿಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅಜರಾಮರ

ಮಾನ್ಯರೆ



ಆಧುನಿಕ ನವ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆಯನ್ನು ಮರಿಯೋದುಂಟೆ. ಇಂದಿಗೂ ಜನಮನದಲ್ಲಿ ಹಚ್ಚಳಿಯದೆ ನಿಂತಿರುವ ನಾಡಿನ ದೊರೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹತ್ತನೇ ಚಾಮರಾಜ ಒಡೆಯರ್ ಹಾಗೂ ಕೆಂಪ ನಂಜಮ್ಮಣ್ಣಿಯವರ ಸುಪುತ್ರರಾಗಿ ಜೂನ್ 4, 1884 ರಂದು ಜನಿಸಿದರು.

ತಂದೆ 10ನೇ ಚಾಮರಾಜ ಮರಣದ ನಂತರ ತಮ್ಮ 11ನೇ ವರ್ಷದ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ 1895 ರಲ್ಲಿ ಸಿಂಹಾಸನವನ್ನು ಏರಿದರೂ ಅವರ ತಾಯಿ ಮಹಾರಾಣಿ ರಾಜ ಪ್ರತಿನಿಧಿಯಾಗಿ ಆಳ್ವಿಕೆ ನಡೆಸಿದರು. ನಂತರದ ವರ್ಷಗಳಲ್ಲಿ ಯುವರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಸಂಪೂರ್ಣ ಆಡಳಿತ ವಹಿಸಿಕೊಂಡ ಮೇಲೆ ಅವರ ಅವಧಿಯಲ್ಲಿ ಕೊಟ್ಟಂತಹ ಜನಪರ ಕಾರ್ಯಕ್ರಮಗಳು ಹಾಗೂ ಕೊಡುಗೆಗಳು ನಾಡಿನ ಜನಮನದಲ್ಲಿ ಎಂದೆಂದಿಗೂ ಅಜರಾಮರ.

ಮೈಸೂರು ಸಂಸ್ಥಾನವನ್ನು ವಿಶ್ವಮಟ್ಟದಲ್ಲಿ ಪ್ರಗತಿ ಮಾಡಿದ ಪ್ರಾತಃ ಸ್ಮರಣೀಯ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಕಾಲದಲ್ಲಿ ಮೂಲಭೂತ ಸೌಕರ್ಯಗಳ ಮಹಾಪೂರವೇ ಆಗಿದೆ. ಕೃಷ್ಣರಾಜ ಆಸ್ಪತ್ರೆ, ಕ್ಷಯ ರೋಗ ಆಸ್ಪತ್ರೆ, ಮಿಂಟೋ ಆಸ್ಪತ್ರೆ, ಶಿವನ ಸಮುದ್ರದ ವಿದ್ಯುತ್ ಉತ್ಪಾದನೆ, ನಿಮ್ಹಾನ್ಸ್ ಆಸ್ಪತ್ರೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ವಾಣಿ ವಿಲಾಸ ಅಣೆಕಟ್ಟೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ವಿಶ್ವವಿದ್ಯಾನಿಲಯದ, ವಾಣಿ ವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ಮೈಸೂರು ಮೆಡಿಕಲ್ ಕಾಲೇಜು, ಮೊಟ್ಟ ಮೊದಲು ರಸ್ತೆಗಳಿಗೆ ದಾರಿ ದೀಪ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಲಲಿತ ಮಹಲ್ ಪ್ಯಾಲೇಸ್, ಸೇಂಟ್ ಫಿಲೋಮಿನಾ ಚರ್ಚ್ ಸ್ಥಾಪನೆ, ಮಂಡ್ಯ ರಚನೆ, ಗಂಧದ ಎಣ್ಣೆ ಕಾರ್ಖಾನೆ, ಮೈಸೂರು ರೈಲ್ವೆ, ದೇವದಾಸಿ ಪದ್ಧತಿ ನಿಷೇಧ, ವೇಶ್ಯಾವಾಟಿಕೆ ತಡೆಗಟ್ಟುವ ಕಾಯ್ದೆ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ, ವಿಧವೆಯರಿಗೆ ಮರು ವಿವಾಹ ಕಾಯ್ದೆ ಹಾಗೂ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಸಣ್ಣ-ಪುಟ್ಟ ಪಟ್ಟಣಗಳಲ್ಲಿ ಮುನಿಸಿಪಾಲಿಟಿ ಸ್ಥಾಪಿಸಿದರು.

ಗ್ರಾಮ ನಿರ್ವಹಣೆ, ನೀರಿನ ಸೌಕರ್ಯ, ಸಾಲ ಪ್ರವೇಶಕ್ಕೆ ಜಾತಿ ಪರಿಗಣನೆ ನಿಷೇಧ, ಮಾಧ್ಯಮಿಕ ಶಾಲಾ ಮಟ್ಟದಲ್ಲಿ ಶುಲ್ಕ ರದ್ದತಿ, ಮೈಸೂರು ಗ್ರಾಮ ನ್ಯಾಯಾಲಯ ಹೀಗೆ ಇನ್ನೂ ಹಲವಾರು ಜನಪರ ಕಾರ್ಯಕ್ರಮಗಳನ್ನು ನಾಡಿಗೆ ಕೊಟ್ಟಂಥ ಪ್ರಾಂತಃ ಸ್ಮರಣೀಯ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ನಾಡಿನ ಜನರ ಮನಸ್ಸಿನಲ್ಲಿ ಇಂದಿಗೂ ಎಂದೆಂದಿಗೂ ಶಾಶ್ವತವಾಗಿ ಅಜರಾಮರ.

– ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಅಗ್ನಿಶಾಮಕ ದಳಕ್ಕೆ ಧನ್ಯವಾದಗಳು

ಮಾನ್ಯರೆ,

ಸುಮಿತ್ರ ಒಬ್ಬ ಪೋಲಿಯೋ ಪೀಡಿತರು. ಅವರ ಕೈ-ಕಾಲುಗಳು ಸ್ವಾಧೀನದಲ್ಲಿಲ್ಲ. ನ್ಯಾಯಾಲಯದ ನಿವೃತ್ತ ಶಿರಸ್ತೇದಾರರು. ಚಾಮರಾಜಪುರಂನಲ್ಲಿ ಒಬ್ಬರೇ ವಾಸವಿದ್ದಾರೆ. ಶುಕ್ರವಾರ ರಾತ್ರಿ ಬಾಗಿಲು ಹಾಕಿಕೊಂಡು ಮಲಗಿದ ಅವರಿಗೆ ಶನಿವಾರ ಬೆಳಗ್ಗೆ ಬಾಗಿಲು ತೆಗೆಯಲು ಹೋದಾಗ ಬಾಗಿಲು ತೆರೆಯಲಾಗಲೇ ಇಲ್ಲ. ಬೀಗ ಜಾಮ್ ಆಗಿತ್ತು. ಮನೆಯಿಂದ ಹೊರಗಡೆ ಬರಲು ಬೇರೆ ಬಾಗಿಲು ಇಲ್ಲದ ಮನೆಯಲ್ಲಿ ಏನು ಮಾಡಲಿ ಎಂದು ನನ್ನ ನೆರವು ಕೋರಿ ಕರೆ ಮಾಡಿದರು.

ನನಗೆ ಹೊಳೆದದ್ದು ಅಗ್ನಿ ಶಾಮಕ ದಳದವರ ನೆರವು ಪಡೆಯುವ ವಿಚಾರ. ಕೂಡಲೇ 101 ಕ್ಕೆ ಕರೆಮಾಡಿ ವಿಷಯ ತಿಳಿಸಿ ನೆರವಾಗಲು ಕೋರಿದೆ.

ಸರಸ್ವತಿಪುರಂ ಅಗ್ನಿ ಶಾಮಕ ದಳದ ಕೃಷ್ಣೇಗೌಡರ ತಂಡ ಅರ್ಧ ಗಂಟೆಯೊಳಗೇ ಬಂದು ತಮ್ಮ ಅನುಭವದ ಕಾರ್ಯಾಚರಣೆಯಿಂದ ಬಾಗಿಲು ಹಾಗೂ ಬೀಗಗಳಿಗೆ ಯಾವುದೇ ಹಾನಿಯಾಗದಂತೆ ಬಾಗಿಲನ್ನು ತೆರೆದು ಸಹಾಯ ಮಾಡಿದ್ದಾರೆ. ಅವರ ತಂಡದ ಪ್ರಯತ್ನದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಈ ಪತ್ರ ಬರೆದಿದ್ದೇನೆ.

ಸುಮಿತ್ರ ಅವರಂತೂ ಕೃಷ್ಣೇಗೌಡರ ತಂಡಕ್ಕೆ ಎಷ್ಟು ಧನ್ಯವಾದಗಳನ್ನು ಹೇಳಿದರೂ ಅವರಿಗೆ ಸಮಾಧಾನವಾಗುತ್ತಿಲ್ಲ.

– ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು

ರಂಗಾಯಣದ ನಿರ್ದೇಶಕರು ಯಾರಾಗಬೇಕು?

ಮಾನ್ಯರೆ,

ಪ್ರಸ್ತುತ ಮೈಸೂರಿನ ಕರ್ನಾಟಕ ರಂಗಾಯಣದ ನಿರ್ದೇಶಕರ ಸ್ಥಾನ ಖಾಲಿಯಾಗಿರುವುದರಿಂದ, ಈಗಾಗಲೇ ಅನೇಕರು ಈ ಕುರ್ಚಿಯ ಮೇಲೆ 'ಟವಲ್' ಹಾಕಿದ್ದಾರೆ.

ಈ ಪ್ರತಿಷ್ಠಿತ ನಿರ್ದೇಶಕರ ಹುದ್ದೆಗೆ ಬರುವವರು ಕೆಲವೊಂದು ಅರ್ಹತೆಯನ್ನು ಹೊಂದಿರುವವರಾಗಿರಬೇಕು.

ಮೂಲತಃ ರಂಗ-ಭೂಮಿಯ ಆಳ-ಆಗಲ ತಿಳಿದವರಾಗಿರಬೇಕು, ದೇಶದ ಚರಿತ್ರೆ ಮತ್ತು ಇತಿಹಾಸವನ್ನು ಬಲ್ಲವರಾಗಿಬೇಕು, ಯಾವುದೇ ರಾಜಕೀಯ ಪಕ್ಷಗಳ 'ಚೇಲ'ಗಳಂತೆ ವರ್ತಿಸಬಾರದು, ದಲಿತ, ನವ್ಯ, ನವೋದಯ ಸಾಹಿತ್ಯವನ್ನು ಓದಿಕೊಂಡವರಾಗಿರಬೇಕು, ಪ್ರಾಮಾಣಿಕ ಮತ್ತು ಪಾರದರ್ಶಕತೆ ಹೊಂದಿರುವವರಾಗಿರಬೇಕು, ಜ್ಯಾತ್ಯಾತೀತ ಮನೋಭಾವದ, ಎಲ್ಲ ಸಮುದಾಯದವರನ್ನು ಒಟ್ಟಿಗೆ ಕೊಂಡೊಯ್ಯಬೇಕು, ರಂಗ ಭೂಮಿಗೆ ಹೆಚ್ಚು ಯುವ ಸಮುದಾಯವನ್ನು ಪರಿಚಯಿಸುವಂತಾಗಬೇಕು, ತಮ್ಮ ವೈಯಕ್ತಿಕ ವಿಚಾರಗಳನ್ನು, ಇನ್ನೊಬ್ಬರ ಮೇಲೆ ಬಲವಂತವಾಗಿ ಹೇರಬಾರದು, ರಂಗಾಯಣ ಕ್ರೀಯಾತ್ಮಕವಾಗಿ ಸದಾ ಚಟುವಟಿಕೆಯಿಂದ ಕೂಡಿರುವಂತಾಗಬೇಕು, ಮುಖ್ಯವಾಗಿ, ರಂಗಭೂಮಿಯ ಯಾವುದೇ ಚಟುವಟಿಕೆಗಳು ಪೋಲೀಸರ ಸರ್ಪಗಾವಲಿನಲ್ಲಿ ನಡೆಯದೇ ರಂಗಾಸಕ್ತರು ಮುಕ್ತವಾಗಿ ಮತ್ತು ಸ್ವಾತಂತ್ರವಾಗಿ ಭಾಗವಹಿಸುವಾಂತಗಬೇಕು.

ಈ ಎಲ್ಲ ಗುಣ- ಲಕ್ಷಣಗಳು ಇದ್ದವರನ್ನು ಮಾತ್ರ ಸರ್ಕಾರ ನಿರ್ದೇಶಕರನ್ನಾಗಿ ಆಯ್ಕೆ ಮಾಡುವಂತಾಗಲಿ.

– ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ 139ನೇ ವರ್ಧಂತ್ಯುತ್ಸವ







ಮೈಸೂರು,ಜೂ.4(ಸಿಎನ್)–ಆಧುನಿಕ ಕರ್ನಾಟಕ ನಿರ್ಮಾತೃ, ರಾಜರ್ಷಿ, ಮೀಸಲಾತಿಯ ಜನಕ, ಮೈಸೂರಿನ ಪ್ರಸಿದ್ಧ ದೊರೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ವರ್ಧಂತಿಯನ್ನು ಮೈಸೂರಿನಲ್ಲಿ ಅದ್ಧೂರಿಯಾಗಿ ಆಚರಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಅರಮನೆ ಮಂಡಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ಜಿಲ್ಲೆ ಅರಸು ಮಂಡಳಿ ಸಂಘ, ಅರಸು ಬಳಗಗಳ ಒಕ್ಕೂಟ ಇವರ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಅರಮನೆ ಅಂಗಳದ ವೇಣುಗೋಪಾಲ ಸ್ವಾಮಿ ದೇವಸ್ಥಾನದಿಂದ ಹೊರಟ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಮೆರವಣಿಗೆ, ಅರಮನೆ ಉತ್ತರ ದ್ವಾರದಿಂದ, ಕೆ.ಆರ್ ವೃತ್ತದಲ್ಲಿರುವ ರಾಜರ್ಷಿ ಪ್ರತಿಮೆಗೆ ಮಾಲಾರ್ಪಣೆ ಬಳಿಕ ಡಿ.ದೇವರಾಜ ಅರಸ್ ಮಾರ್ಗವಾಗಿ, ಜೆಎಲ್‌ಬಿ ರಸ್ತೆ, ಮೆಟ್ರೊಪೋಲ್ ನಿಂದ, ಕಲಾಮಂದಿರ ವೇದಿಕೆ ಕಾರ್ಯಕ್ರಮದ ವರೆಗೂ ಯಶಸ್ವಿಯಾಗಿ ಮೆರವಣಿಗೆ ಸಾಗಿತು.

ಕೆ.ಆರ್ ಸರ್ಕಲ್‌ನಲ್ಲಿ ನಡೆದ ಮಾಲಾರ್ಪಣೆ ಕಾರ್ಯಕ್ರಮದಲ್ಲಿ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್‌ಸಿ ಮಹದೇವಪ್ಪ, ಎಂಎಲ್‌ಸಿ ಡಿ.ತಿಮ್ಮಯ್ಯ, ಡಿಸಿ.ಡಾ.ರಾಜೇಂದ್ರ, ಮೇಯರ್ ಶಿವಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿ ಕಾಂತ ರೆಡ್ಡಿ, ಜಿಪಂ ಸಿಇಓ ಗಾಯತ್ರಿ, ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಮುತ್ತುರಾಜ್, ಸ್ಥಳೀಯ ಶಾಸಕ ಶ್ರೀವತ್ಸ, ಅಧಿಕಾರಿಗಳು ಹಾಗೂ ಕಾರ್ಯಕರ್ತರು ಸಾಥ್ ನೀಡಿದರು.

ವಿವಿಧ ಕಲಾತಂಡಗಳ ಮೆರಗು: ನಾದಸ್ವರ, ನಂದಿಕಂಬ, ಡೊಳ್ಳು ಕುಣಿತ, ಚಿಲಿಪಿಲಿ ಗೊಂಬೆ, ತಮಟೆ, ನಗಾರಿ, ವೀರಗಾಸೆ ಕಲಾತಂಡಗಳು ಭಾಗಿಯಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ವರ್ಧಂತಿ ಮೆರವಣಿಗೆ ಸಂಭ್ರಮಕ್ಕೆ ಮೆರಗು ತಂದವು.

ಬಳಿಕ ತಡವಾಗಿ ಆರಂಭವಾದ ಕಲಾಮಂದಿರದ ವೇದಿಕೆ ಕಾರ್ಯಕ್ರಮಕ್ಕೆ ಶಾಸಕ ಶ್ರೀವತ್ಸ, ಮೇಯರ್ ಶಿವಕುಮಾರ್, ಡಿ.ಸಿ ಡಾ.ಕೆವಿ. ರಾಜೇಂದ್ರ ಉಪ ಮೇಯರ್ ರೂಪ, ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್ ಅವರು ದೀಪ ಬೆಳಗಿಸಿ, ರಾಜರ್ಷಿ ಭಾವಚಿತ್ರಕ್ಕೆ ಪುಷ್ಪಾ ರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಪ್ರಾಸ್ತಾವಿಕವಾಗಿ ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ ಶಿವಕುಮಾರ್ ಮಾತನಾಡಿ, ಮೈಸೂರು ಸಂಸ್ಥಾನದ ಜನರು ಅದೃಷ್ಟಶಾಲಿಗಳು. ಭಾರತದ ಯಾವ ಸಂಸ್ಥಾನಕ್ಕೂ ಸಿಗದಂತ ಒಂದು ರಾಜಮನೆತನ ಮೈಸೂರು ಜನತೆಗೆ ಸಿಕ್ಕಿದೆ. ಎಷ್ಟೋ ಮಹಾರಾಜರು ಆಳ್ವಿಕೆ ಮಾಡಿ ಹೋಗಿದ್ದಾರೆ, ಅದರಲ್ಲಿ ಬೆರಳೆಣಿಕೆ ಅಷ್ಟು ರಾಜರ ಪೈಕಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರು ಮುಂಚೂಣಿಯಲ್ಲಿದೆ. ಹಾಗಾಗಿ ಆಧುನಿಕ ಯುಗ ಯುವ ಸಮೂಹ ಹಾಗೂ ವಿದ್ಯಾರ್ಥಿಗಳು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಇತಿಹಾಸ, ನಾಡಿಗೆ ನೀಡಿದಂತ ಕೊಡುಗೆ ಎಲ್ಲವನ್ನು ಅರಿತುಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ಬಳಿಕ ಮಾತನಾಡಿದ ಮೇಯರ್ ಶಿವ ಕುಮಾರ್, ಮೈಸೂರು ಅನೇಕ ಬಿರುದುಗಳನ್ನು ಪಡೆದಿದ್ದರೇ ಅದಕ್ಕೆ ಕಾರಣ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಆಗಿನ ಕಾಲದಲ್ಲೇ ದೂರಾಲೋಚನೆ ಮೂಲಕ 100 ಅಡಿ ರಸ್ತೆ ನಿರ್ಮಿಸಿದ್ದಲ್ಲದೇ, ಯುಜಿಡಿ ಸಂಪರ್ಕ ವ್ಯವಸ್ಥಿತವಾಗಿ ಕಲ್ಪಿಸಿದ್ದರು. ಜನರಿಗೋಸ್ಕರ ಸಾಲ ಮಾಡಿ ಕೆಆರ್‌ಎಸ್ ಜಲಾಶಯ ಕಟ್ಟಿದ್ದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ. ಜಲ ಸಂಪರ್ಕ, ಮೂಲ ಸೌಕರ್ಯ, ಬೀದಿದೀಪ ಸಂಪರ್ಕ ಕಲ್ಪಿಸಿದ್ದರು. ಆಗಿನ ಕಾಲದಲ್ಲೇ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶಾಲೆ ತೆರೆದರು, ಮೈಸೂರು ಮಾರುಕಟ್ಟೆ ನಿರ್ಮಾಣ, ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಮೈಸೂರಿಗೆ ಸಂದ ಎಲ್ಲಾ ಬಿರುದು ಗೌರವ ನಾಲ್ವಡಿ ಕೃಷ್ಣರಾಜರಿಗೆ ಸಲ್ಲಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಶಿಕ್ಷಣ ಇಲ್ಲದೆ ಯಾವುದೇ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ನಾಲ್ವಡಿ ಅವರು ಕಂಡುಕೊಂಡಿದ್ದರು. ಈ ಕಾರಣಕ್ಕಾಗಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಹೆಚ್ಚಿನ ಒತ್ತು ನೀಡಿದ್ದು, ಪ್ರತಿಯೊಬ್ಬರಿಗೂ ಶಿಕ್ಷಣ ಉಚಿತವಾಗಿ ದೊರೆಯುವಂತೆ ಮಾಡಿದರು. 'ಶಿಕ್ಷಣದಿಂದ ನನಗೆ ಇಷ್ಟೊಂದು ಶ್ರೇಯ ದೊರಕಿದೆ' ಈ ಶ್ರೇಯಸ್ಸು ಸಮಾಜಕ್ಕೂ ದೊರೆಯಬೇಕು' ಎಂಬ ಉದ್ದೇಶ ಅವರದಾಗಿತ್ತು. ಕೃಷಿ, ಕೈಗಾರಿಕೆ, ಸಾಹಿತ್ಯ, ಸಂಸ್ಕೃತಿ ಸೇರಿದಂತೆ ಪ್ರತಿಯೊಂದು ಕ್ಷೇತ್ರದ ಅಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಿದರು. ಇದರಿಂದ ಮೈಸೂರು ಸಂಸ್ಥಾನ ಮಾದರಿ ಸಂಸ್ಥಾನವಾಗಿ ರೂಪುಗೊಂಡಿತು. ಈ ಮಾದರಿ ಆಡಳಿತವನ್ನು ಕಂಡು ಮಹಾತ್ಮ ಗಾಂಧೀಜಿಯವರು ನಾಲ್ವಡಿಯವರಿಗೆ 'ರಾಜರ್ಷಿ' ಬಿರುದು ನೀಡಿದ್ದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನೌಕರರ ಸಂಘ ಜಿಲ್ಲಾಧ್ಯಕ್ಷ ಕೆ.ಗೋವಿಂದ ರಾಜು, ಅರಸು ಮಂಡಳಿ ಸಂಘದ ಅಧ್ಯಕ್ಷ ನಿಂಗರಾಜೇ ಅರಸು, ಇತಿಹಾಸ ತಜ್ಞ ನಂಜರಾಜೇ ಅರಸ್, ಸಾಮಾಜಿಕ ಹೋರಾಟಗಾರರಾದ ಅರವಿಂದ್ ಶರ್ಮಾ, ಸಿದ್ದರಾಜು, ಯಮುನಾ, ಕನ್ನಡ ಪರ ಹೋರಾಟಗಾರ ಟಿ.ಎಸ್ ಶಿವಶಂಕರ್, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಎಂಜಿಆರ್ ಅರಸು ಮತ್ತಿತರರಿದ್ದರು.

ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾದ ಜಿಲ್ಲಾಡಳಿತ

ಸರಿಯಾದ ವ್ಯವಸ್ಥೆ ಮಾಡಿಲ್ಲ, ಕೇವಲ 3 ದಿನಗಳ ಹಿಂದೆ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಸಿದ್ದಾರೆ. ಮುಂಚಿತವಾಗಿ ಸಭೆ ಕರೆದು, ಕಾರ್ಯಕ್ರಮದ ಕುರಿತು ಚರ್ಚಿಸಿ, ಪ್ರಚಾರ ಕಾರ್ಯ ಕೈಗೊಂಡಿದ್ದರೇ, ಇನ್ನಷ್ಟು ಜನ ಬರುತ್ತಿದ್ದರು. ಬೇಕಾಬಿಟ್ಟಿಯಾಗಿ ರಾಜರ್ಷಿ ಅವರ ಜನ್ಮೋತ್ಸವವನ್ನು ಆಚರಿಸುವ ಮೂಲಕ ನಾಡ ದೊರೆಗೆ ಅವಮಾನ ಮಾಡಿದ್ದಾರೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

ಅರಸು ಮಂಡಳಿಯಿಂದ ರಾಜರ್ಷಿ ವರ್ಧಂತಿ

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವರ್ಧಂತಿ ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ, ತ್ಯಾಗರಾಜ ರಸ್ತೆಯಿಂದ ಪ್ರಾರಂಭಗೊಂಡು ಅಗ್ರಹಾರ ಸರ್ಕಲ್, ಕೆ.ಆರ್ ಸರ್ಕಲ್ ತಲುಪಿ ರಾಜರ್ಷಿ ಅವರ ಪುತ್ಥಳಿಗೆ ಮಾಲಾರ್ಪಣೆ ಬಳಿಕ ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ ಮೆಟ್ರೋಪೋಲ್ ಮಾರ್ಗವಾಗಿ ಕಲಾಮಂದಿರ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸಿತು. ಈ ವೇಳೆ ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್‌ಎಂಟಿ ನಿಂಗರಾಜೇ ಅರಸ್, ಉಪಾಧ್ಯಕ್ಷರಾದ ಶ್ರೀಕಾಂತ್ ರಾಜೇ ಅರಸ್, ಜಯದೇವ ರಾಜೇ ಅರಸ್, ಕಾರ್ಯದರ್ಶಿ ಸುಮಾ ಅರಸ್, ಸಹ ಕಾರ್ಯದರ್ಶಿ ಶರತ್ ಅರಸ್, ಉಪ ನಿರ್ದೇಶಕ ನಿರಂಜನ್ ರಾಜೇ ಅರಸ್, ಅರಸು ಮಂಡಳಿ ಮಾಜಿ ಅಧ್ಯಕ್ಷರಾದ ವೈ.ಎಂ.ಕಿರಣ್. ಹೆಚ್.ಡಿ.ನಂಜರಾಜೇ ಅರಸ್, ಸಂಘದ ಪದಾಧಿಕಾರಿಗಳು ಭಾಗಿಯಾಗಿದ್ದರು.

ನಂಜರಾಜೇ ಅರಸ್ ಆಕ್ರೋಶ



ನಾಲ್ವಡಿ ಅವರು ವೋಟ್ ಬ್ಯಾಂಕ್ ಆಗಿದ್ದರೆ ಎಲ್ಲರೂ ಬರುತ್ತಿದ್ದರು. ಕೆಂಪೇಗೌಡ ಜಯಂತಿ, ಬಸವ ಜಯಂತಿ, ಅಂಬೇಡ್ಕರ್ ಜಯಂತಿಗಳಿಗೆ ಒಂದು ಗಂಟೆ ಮುಂಚಿತವಾಗೇ ಬಂದು ಕೂರುತ್ತಿದ್ದರು. ಆದರೆ ನಾಲ್ವಡಿ ಅವರು ಪ್ರಬಲ ಸಮುದಾಯಕ್ಕೆ ಸೇರಿಲ್ಲವಾದ್ದರಿಂದ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಸ್ಥಳೀಯ ಸಚಿವರು, ಶಾಸಕರು, ಅಧಿಕಾರಿಗಳ ವಿರುದ್ಧ ಏಕವಚನದಲ್ಲೇ ಹರಿಹಾಯ್ದರು.

ಖಾಲಿ ಕುರ್ಚಿಗಳಿಗೆ ಡಿಸಿ ಭಾಷಣ

ಇನ್ನೊಂದೆಡೆ ಜನರೇ ಇಲ್ಲದೇ ಬಿಕೋ ಎನ್ನುತ್ತಿದ್ದ ವೇದಿಕೆ ಕಾರ್ಯ ಕ್ರಮದಲ್ಲಿ ಡಿ.ಸಿ.ಡಾ.ಕೆವಿ.ರಾಜೇಂದ್ರ ಅವರು ಖಾಲಿ ಕುರ್ಚಿಗಳಿಗೆ ಭಾಷಣ ನಡೆಸಿದ ಘಟನೆ ನಡೆದಿದೆ. ಮೆರವಣಿಗೆ ಯಲ್ಲಿ ಭಾಗಿಯಾದಂತ ಜನರು, ಕಲಾಮಂದಿರದ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸದೇ, ತಮ್ಮ ಮನೆಗಳತ್ತ ಮುಖ ಮಾಡಿದರು. ಈ ಹಿನ್ನೆಲೆ ಜನರಿಲ್ಲದೇ ಡಿಸಿ ಅವರು ಭಾಷಣ ಮಾಡುವಂತ ಪರಿಸ್ಥಿತಿ ನಿರ್ಮಾಣವಾಯಿತು.

102 ಲಕ್ಷ ಕೋಟಿ ಸಾಲ ಮಾಡಿದಾಗ, 68,607 ಕೋಟಿ ಸಾಲ ಮನ್ನಾ ಮಾಡಿದಾಗ ದೇಶ ದಿವಾಳಿಯಾಗಲಿಲ್ಲವೇ

ಪ್ರತಾಪ್ ಸಿಂಹಗೆ ರಾಜ್ಯ ಕುರುಬರ ಸಂಘ ಪ್ರಶ್ನೆ



ಮೈಸೂರು, ಜೂ.4– ಸಂಸದ ಪ್ರತಾಪ್ ಸಿಂಹ ಅವರು ತಮ್ಮ ಪಕ್ಷದ ಸೋಲಿನಿಂದ ಹತಾಶೆಗೊಂಡಿದ್ದು ನಿರಂತರವಾಗಿ ಟೀಕೆ ಮಾಡುತ್ತಿದ್ದಾರೆ. ಈಗ ಕರ್ನಾಟಕ ರಾಜ್ಯ ಭಿಕ್ಷಾ ರಾಜ್ಯವಾಗುತ್ತದೆ ಎಂದು ಹೇಳಿರುವುದು ಅವರ ಹೀನ ಮನಸ್ಥಿತಿಯನ್ನು ತೋರಿಸುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಕಿಡಿ ಕಾರಿದ್ದಾರೆ.

ಸಂಸದ ಪ್ರತಾಪ್ ಸಿಂಹ ಅವರ 'ಸುಭಿಕ್ಷ ರಾಜ್ಯವನ್ನು ಕಾಂಗ್ರೆಸ್ ಭಿಕ್ಷಾ ರಾಜ್ಯವನ್ನಾಗಿ ಮಾಡುತ್ತಿದೆ' ಎಂಬ ಹೇಳಿಕೆಯನ್ನು ಖಂಡಿಸಿರುವ ಅವರು, ಸಿದ್ದರಾಮಯ್ಯ ಅವರು 13 ಬಾರಿ ಬಜೆಟ್ ಮಂಡಿಸಿದ್ದು, ಯಾವ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆ ಎಂಬ ಅರಿವು ಅವರಿಗಿದೆ. ಅದೇ ರೀತಿ ಉಚಿತ ಯೋಜನೆಗಳು ದುರುಪಯೋಗವಾಗದಿರಲಿ ಎಂದು ಷರತ್ತುಗಳನ್ನು ವಿಧಿಸಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈಗ ಉಚಿತ ಯೋಜನೆ ಘೋಷಣೆ ಮಾಡಿರುವುದು ಜನರ ತೆರಿಗೆ ಹಣವನ್ನು ಸದ್ಬಳಕೆ ಮಾಡಬೇಕು ಎಂಬ ಉದ್ದೇಶದಿಂದ ಎಂದಿರುವ ಅವರು, ನಿಮ್ಮದೇ ನರೇಂದ್ರ ಮೋದಿ ಸರ್ಕಾರದ ಅವಧಿಯಲ್ಲಿ, 50 ಉದ್ಯಮಿಗಳ 68,607 ಕೋಟಿ ರೂ. ಸಾಲ ಮನ್ನಾ (ರೇಟಾಫ್) ಆಯಿತು. ಆಗ ದೇಶ ದಿವಾಳಿಯಾಗಲಿಲ್ಲವೆ? ಆರಂಭದಲ್ಲಿ 3 ಸಾವಿರ ಕೋಟಿ ಎಂದು ಹೇಳಿ 6 ಪಥ ರಸ್ತೆ ಕಾಮಗಾರಿಗೆ 8 ಸಾವಿರ ಕೋಟಿ ಖರ್ಚು ಮಾಡಿದಿರಿ, ಆದರೂ ಸಮರ್ಪಕವಾಗಿ ಮಾಡಿಲ್ಲ. ಇದೆಲ್ಲವೂ ಆರ್ಥಿಕ ಹೊಡೆತ ನೀಡಲಿಲ್ಲವೆ? ಎಂದು ಪ್ರಶ್ನಿಸಿದ್ದಾರೆ.

ಸ್ವಾತಂತ್ರ್ಯ ಬಂದಾಗಿನಿಂದ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದ ಅವಧಿವರೆಗೆ ಭಾರತದ ಮೇಲಿನ ಸಾಲ 52,11,000 ಕೋಟಿ ರೂ. ಇತ್ತು. ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರ ಬಂದಾಗಿನಿಂದ ಈಗಿನ ದೇಶದ ಮೇಲಿನ ಸಾಲ 155 ಲಕ್ಷ ಕೋಟಿ ರೂ.ಆಗಿದೆ. ಕಳೆದ 9 ವರ್ಷದಲ್ಲಿ 102 ಲಕ್ಷ ಕೋಟಿ ಸಾಲ ಮಾಡಲಾಗಿದೆ. 2018ರ ಸರ್ಕಾರದ ಅವಧಿಯವರೆಗೆ ರಾಜ್ಯದ ಮೇಲೆ 2,42,000 ಕೋಟಿ ಸಾಲ ಇತ್ತು. ಈಗ ಪ್ರಸಕ್ತ ಆರ್ಥಿಕ ವರ್ಷದಲ್ಲಿ ತಿಳಿಸಿರುವಂತೆ 5,64,000 ಕೋಟಿ ಸಾಲ ರಾಜ್ಯದ ಮೇಲಿದೆ. ಅಂದರೆ ಬಿಜೆಪಿ ಅವಧಿಯಲ್ಲಿ 3,22,000 ಕೋಟಿ ಸಾಲ ಪಡೆದಿದ್ದಾರೆ. ಸಿದ್ದರಾಮಯ್ಯ ಅವರು ಈ ಹಿಂದೆ 5 ವರ್ಷ ಅಧಿಕಾರ ಪೂರೈಸಿದ್ದಾಗ 5 ವರ್ಷದಲ್ಲಿ ಸಾಲ 1,16,000 ಕೋಟಿ ಇತ್ತು. ಆದರೆ ಈ ಹಿಂದಿನ ಬಿಜೆಪಿ ಸರ್ಕಾರ 4 ವರ್ಷಗಳಲ್ಲಿ 2,90,000 ಕೋಟಿ ಸಾಲ ಮಾಡಿದೆ ಎಂದು ಆರೋಪಿಸಿದ್ದಾರೆ.

ಸಿದ್ದರಾಮಯ್ಯ ಸರ್ಕಾರ ಎಲ್ಲಾ ಗ್ಯಾರಂಟಿ ಯೋಜನೆ ಜಾರಿಗೆ 52 ಸಾವಿರ ಕೋಟಿ ರೂ. ಆಗಬಹುದು ಎಂದು ಅಂದಾಜಿಸಿದೆ. ಸರ್ಕಾರದ ಬಜೆಟ್ 3.10 ಲಕ್ಷ ಕೋಟಿ ರೂ. ಇದೆ. 15ನೇ ಹಣಕಾಸು ಆಯೋಗದ ವರದಿ ಪ್ರಕಾರ ಕೇಂದ್ರದಿಂದ ಹೆಚ್ಚುವರಿ 50 ಸಾವಿರ ಕೋಟಿ ರೂ. ಅನುದಾನ ಬರಬೇಕು. ಇಷ್ಟು ವರ್ಷ ಮೋಸವಾಗಿದ್ದನ್ನು ಸಿದ್ದರಾಮಯ್ಯ ಸರಿಪಡಿಸಿ ರಾಜ್ಯವನ್ನು ಸುರಕ್ಷಿತವಾಗಿ ಮುನ್ನಡೆಸಿಕೊಂಡು ಹೋಗಲಿದ್ದಾರೆ ಎಂಬ ನಂಬಿಕೆ ಜನತೆಯಲ್ಲಿದೆ ಎಂದು ಅವರು ಹೇಳಿದ್ದಾರೆ.

ಯಕ್ಷಗಾನ ನಾಟ್ಯ ತರಗತಿಗೆ ಚಾಲನೆ



ಮೈಸೂರು, ಜೂ 4(ಎಸ್‌ಪಿಎನ್)– ವಿದ್ಯಾರ್ಥಿಗಳಿಗೆ ಚಿಕ್ಕ ವಯಸ್ಸಿನಿಂದಲೇ ಕಲೆಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಿದರೆ, ಮುಂದಿನ ಜೀವನ ಕಟ್ಟಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಕಾರಿಯಾಗುತ್ತದೆ ಎಂದು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವೆಂಕಟಾಚಲ ಹೆಗಡೆ ಅಭಿಪ್ರಾಯಪಟ್ಟರು.

ಮೈಸೂರು ವಿಜಯ ವಿಠಲ ವಿದ್ಯಾಶಾಲಾ ಆವರಣದಲ್ಲಿ ಕರಾವಳಿ ಯಕ್ಷಗಾನ ಕೇಂದ್ರದ ವತಿಯಿಂದ ಆಯೋಜಿಸಿದ್ದ ಪ್ರಸಕ್ತ ಸಾಲಿನ ಯಕ್ಷಗಾನ ನಾಟ್ಯ ತರಗತಿಗಳ ಆರಂಭ ಹಾಗೂ ತಾಳಮದ್ದಳೆ ಕಾರ್ಯಕ್ರಮ ಮತ್ತು ಸೀತಾಪಹಾರ ಪ್ರಸಂಗಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರಾವಳಿ ಜಿಲ್ಲೆಯ ವಿದ್ಯಾರ್ಥಿಗಳು ಬುದ್ಧಿವಂತರು, ತೀಕ್ಷ್ಣಮತಿಗಳು ಎಂಬ ಮಾತು ಸಾಮಾಜಿಕ ವಲಯದಲ್ಲಿ ಜನಜನಿತವಾಗಿದೆ. ಏಕೆಂದರೆ, ಯಕ್ಷಗಾನ ಸೇರಿದಂತೆ ಇತರೆ ಕಲೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದರಿಂದ ಈ ಮಾತು ಜನಜನಿತವಾಗಿದೆ ಎಂದ ಅವರು, ಕರಾವಳಿಯಲ್ಲಿ ಸೀಮಿತವಾಗಿದ್ದ ಯಕ್ಷಗಾನ, ಇದೀಗ ಮೈಸೂರು ಜಿಲ್ಲೆಯ ವಿದ್ಯಾರ್ಥಿಗಳಿಗೂ ಯಕ್ಷಗಾನ ಕಲಿಸಲು ಶ್ರೀಧರ ಐತಾಳ್ ಅವರ ನೇತೃತ್ವದಲ್ಲಿ ಮುಂದಾಗಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು.

ಈ ದೇಶದ ಪ್ರಗತಿಯಲ್ಲಿ ಯುವಕರ ಪಾತ್ರ ಪ್ರಮುಖವಾದುದು. ಆದರೆ, ದೇಶ ಮುನ್ನಡೆಸುವ ಆಡಳಿತ ಮತ್ತು ವಿಪಕ್ಷದ ಪ್ರಮುಖರೆಲ್ಲರಿಗೂ ವಯಸ್ಸಾಗಿದೆ. ಹಾಗಾಗಿ ದೇಶದ ಭವಿಷ್ಯದ ದೃಷ್ಟಿಯಿಂದ ಯುವಕರು ಒಮ್ಮೆ ಚಿಂತಿಸಿದರೆ, ರಾಜಕಾರಣದಲ್ಲಿ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಬಹುದು ಎಂದರು. ಈ ವೇಳೆ ಕರಾವಳಿ ಯಕ್ಷಗಾನ ಕೇಂದ್ರದ ಉಪಾಧ್ಯಕ್ಷ ಈಶ್ವರ ಹೆಗಡೆ, ಕಾರ್ಯದರ್ಶಿ ಗಣೇಶ್ ಭಟ್, ಸಹ ಕಾರ್ಯದರ್ಶಿ ಅರುಣ ಕುಮಾರ್ ಹಾಗೂ ಇತರೆ ಸದಸ್ಯರು ಉಪಸ್ಥಿತರಿದ್ದರು. ಈ ಸಾಲಿನ ಯಕ್ಷಗಾನ ಕಲಿಕಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯ

ಇಂದು ಜನತಂತ್ರ ಜಾಗೃತಿ ವೇದಿಕೆ ರೈತ ಸಂಘದಿಂದ ಪ್ರತ್ಯೇಕ ಪ್ರತಿಭಟನೆ



ಮೈಸೂರು, ಜೂ.4(ಪಿಎಂ)– ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಜನತಂತ್ರ ಜಾಗೃತಿ ವೇದಿಕೆ (ಹಲವು ಜನಮುಖಿ ಸಂಘಟನೆಗಳ ಒಕ್ಕೂಟ) ವತಿಯಿಂದ ಜೂ.5ರಂದು ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಐಎಂಎಸ್‌ಎಸ್ ಪದಾಧಿಕಾರಿ ಉಮಾದೇವಿ, ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸಮಾವೇಶಗೊಂಡು, ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಲಾಗುವುದು. ಬಳಿಕ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಮುಖಂಡರಾದ ಉಗ್ರನರಸಿಂಹೇಗೌಡ, ಹೊಸಕೋಟೆ ಬಸವರಾಜು, ಕೆಂಪುಗೌಡ, ಶಬ್ಬೀರ್ ಮುಸ್ತಫಾ, ಚೋರನಹಳ್ಳಿ ಶಿವಣ್ಣ, ಪ್ರೊ.ಕಾಳಚನ್ನೇಗೌಡ ಗೋಷ್ಠಿಯಲ್ಲಿದ್ದರು.

ರೈತ ಸಂಘ: ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಜೂ.5ರಂದು ಇಡೀ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದು, ಅಂತೆಯೇ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಸಹ ಪ್ರತಿಭಟನೆ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಈ ವಿಷಯ ತಿಳಿಸಿದ ಸಂಘದ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಿಮ್ಮಾವು ರಘು, ಸದರಿ ಲೈಂಗಿಕ ಕಿರುಕುಳ ಪ್ರಕರಣ ಸಂಬಂಧ ನೆಪ ಮಾತ್ರಕ್ಕೆ ಒಂದು ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿ ತರಾತುರಿಯಲ್ಲಿ ಆರೋಪಿ ಪರವಾದ ವರದಿ ಸಿದ್ಧಪಡಿಸಿ ದೌರ್ಜನ್ಯ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು.

ಅಂದು ಬೆಳಗ್ಗೆ 11ಕ್ಕೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು. ಸಂಯುಕ್ತ ಕಿಸಾನ್ ಮೋರ್ಚಾ ಜೂ.5ರಂದು ರಾಷ್ಟ್ರವ್ಯಾಪಿ ಹೋರಾಟಕ್ಕೆ ಕರೆ ನೀಡಿದೆ. ಕೆ.ಟಿ. ಗಂಗಾಧರ ಮತ್ತು ಚುಕ್ಕಿ ನಂಜುಂಡ ಸ್ವಾಮಿ ಅವರ ನೇತೃತ್ವದ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘವೂ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಿದೆ ಎಂದು ತಿಳಿಸಿದರು. ಸಂಘದ ಪದಾಧಿಕಾರಿಗಳಾದ ಶೈಲಜಾ ತಗಡೂರು, ಸಿಂಧು ಕಾಳಿಹುಂಡಿ, ಕಡಕೊಳ ರವಿ, ಅಭಿ ಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಗೀತ್ ಗಾತಾ ಚಲ್ ಸಂಗೀತ ರಸಸಂಜೆ

ಮಧುರ ಮನಸ್ಸುಗಳಿಗೆ ಮುದ ನೀಡಿದ ಸವಿಗಾನ, ನೃತ್ಯ ವೈಭವ



ಮೈಸೂರಿನ ಎಂಎಂಸಿಆರ್‌ಐ ಪ್ಲಾಟಿನಂ ಜ್ಯೂಬಿಲಿ ಸಭಾಂಗಣದಲ್ಲಿ ಭಾನುವಾರ ವೈದ್ಯರು ಮತ್ತು ಅವರ ಕುಟುಂಬ ಸದಸ್ಯರನ್ನೊಳಗೊಂಡ ಜನಪ್ರಿಯ 'ಗೀತ್ ಗಾತಾ ಚಲ್–21' ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಿತು.

ಮೈಸೂರು, ಜೂ.4(ಎಂಕೆ)– ಮಾನ್ಸೂನ್ ಮುಸ್ಸಂಜೆಯಲಿ ಮಧುರ ಮನಸ್ಸುಗಳಿಗೆ ಮುದ ನೀಡಿದ 'ಗೀತ್ ಗಾತಾ ಚಲ್' ಸಂಗೀತ ರಸ ಸಂಜೆ... ಹಳೇ ಕನ್ನಡ, ಹಿಂದಿ ಚಲನಚಿತ್ರ ಗೀತೆಗಳ ಸವಿಗಾನ, ನೃತ್ಯ ವೈಭವ ಕಂಡು ಮೂಕವಿಸ್ಮಿತರಾದ ಕಲಾಪ್ರೇಮಿಗಳು...

ಮೈಸೂರಿನ ಎಂಎಂಸಿಆರ್‌ಐ(ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ) ಪ್ಲಾಟಿನಂ ಜ್ಯೂಬಿಲಿ ಹಾಲ್‌ನಲ್ಲಿ ಭಾನುವಾರ ನಡೆದ ವೈದ್ಯರು ಮತ್ತು ಅವರ ಕುಟುಂಬ ಸದಸ್ಯರನ್ನೊಳಗೊಂಡ ಜನಪ್ರಿಯ 'ಗೀತ್ ಗಾತಾ ಚಲ್' 21ನೇ ಆವೃತ್ತಿಯ ಸಂಗೀತ ರಸಸಂಜೆ, ಕಿಕ್ಕಿರಿದು ತುಂಬಿದ ಸಂಗೀತ ಪ್ರಿಯರಿಗೆ ಮಸ್ತ್ ಮನರಂಜನೆಯ ರಸದೌತಣವನ್ನೇ ನೀಡಿತು. ಬೆಳಕಿನ ವೈಭವದೊಂದಿಗೆ ಅತ್ಯಾಕರ್ಷಕವಾಗಿ ಸಿಂಗಾರಗೊಂಡಿದ್ದ ವೇದಿಕೆಯಲ್ಲಿ ವಿಘ್ನ ವಿನಾಯಕನನ್ನು ಸ್ಮರಿಸಿದ ವೈದ್ಯರಾದ ಡಾ.ದೀಪಿಕಾ, ಡಾ.ಚೈತ್ರಾ, ಡಾ.ರಶ್ಮಿ, ಡಾ.ಬಿ.ಎನ್.ರಶ್ಮಿ, ಡಾ.ಸೋನಿಯಾ, ಡಾ.ಪುಷ್ಪಲತಾ ಹಾಗೂ ಡಾ.ರೂಪಾ ಪ್ರಕಾಶ್ 'ಗಣನಾಯಕಾಯ ಗಣದೈವತಾಯ' ಹಾಡಿಗೆ ಮನಮೋಹಕ ನೃತ್ಯದ ಮೂಲಕ 'ಗೀತ್ ಗಾತಾ ಚಲ್'ಗೆ ವಿದ್ಯುಕ್ತ ಚಾಲನೆ ನೀಡಿದರು.

ಬಳಿಕ ಡಾ.ಪಿ.ಎ.ಕುಶಾಲಪ್ಪ, ಡಾ.ಎಂ.ಎಸ್.ನಟಶೇಖರ್, ಡಾ.ಎ.ಎಲ್.ಹೇಮಲತಾ, ಡಾ.ಯು.ಗಣೇಶ್ ರಾವ್, ಡಾ.ಯು.ಜಿ.ಶೆಣೈ, ಡಾ.ಶಿವಾನಿ ನಾಯಕ್, ಡಾ.ಸುಷ್ಮಾ ಕೃಷ್ಣಮೂರ್ತಿ, ಡಾ.ಸೀತಾಲಕ್ಷ್ಮಿ ಸೋಮನಾಥ್, ಡಾ.ಸೋಮನಾಥ್ ವಾಸುದೇವ್, ಡಾ.ಶ್ಯಾಮಪ್ರಸಾದ್, ಅಪೂರ್ವ ನಟಶೇಖರ್, ಡಾ.ಸ್ಪರ್ಶ ಶೆಣೈ, ಡಾ.ಪ್ರೀತಿ ಪ್ರಭು, ರಂಜಿತಾ, ಪೃಥ್ವಿ ಶಂಕರ್, ಡಾ.ಜಿ.ಡಿ.ರವಿಕುಮಾರ್, ಆರ್.ಎಲ್. ವರ್ಷಾ, ಡಾ.ಸ್ನೇಹಶ್ರೀ, ಡಾ.ಸೂರಜ್ ಉಪಾಧ್ಯಾಯ ಹಾಗೂ ಡಾ.ಅಮೃತಾ ತಮ್ಮ ಸುಮಧುರ ಕಂಠದಿಂದ ಹಿಂದಿ ಹಾಗೂ ಕನ್ನಡ ಚಲನಚಿತ್ರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಸಾಂಸ್ಕೃತಿಕ ಪ್ರಿಯರ, ಸಂಗೀತಾಸಕ್ತರ ಮನ ತಣಿಸಿದರು.

ಮಧುರ ಮಧುರವೀ ಮಂಜುಳ ಗಾನ: ಮೊದಲಿಗೆ 'ಸತೀ ಸುಕನ್ಯ' ಕನ್ನಡ ಚಿತ್ರದ 'ಮಧುರ ಮಧುರವೀ ಮಂಜುಳ ಗಾನ' ಹಾಡನ್ನು ಹಾಡಿದ ಡಾ.ಎಂ.ಎಸ್.ನಟಶೇಖರ್ ಮತ್ತು ಅಪೂರ್ವ ನಟಶೇಖರ್, ಕೇಳುಗರ ಮಧುರ ಮನಸ್ಸಿಗೆ ಮುದ ನೀಡಿದರು. ಡಾ.ಪಿ.ಎ. ಕುಶಾಲಪ್ಪ 'ಕಾವೋಶಿ' ಹಿಂದಿ ಚಿತ್ರದ 'ತುಂ ಪುಕಾರ್ ಲೋ', ಡಾ.ಎ.ಎಲ್.ಹೇಮಲತಾ 'ನಗೀನ್ (nagin)' ಹಿಂದಿ ಚಿತ್ರದ 'ಮೇರಾ ದಿಲ್ ಯೇ ಪುಕರೇ ಆಜಾ..', ಡಾ.ಸ್ನೇಹಶ್ರೀ 'ಅಮರ್ ಪ್ರೇಮ್' ಹಿಂದಿ ಚಿತ್ರದ 'ರೈನಾ ಬೀಟಿ ಜಾಯೆ' ಹಾಡನ್ನು ಹಾಡಿ ಎಲ್ಲರನ್ನು ರಂಜಿಸಿದರು.

ಡಾ.ಗಣೇಶ್ ರಾವ್ 'ದುಲ್ಹನ್ ಏಕ್ ರಾತ್ ಕಿ' ಹಿಂದಿ ಚಿತ್ರದ 'ಏಕ್ ಹಸೀನ್ ಶಾಮ್ ಕೋ ದಿಲ್ ಮೇರಾ ಖೋ ಗಯಾ', ಡಾ.ಸುಷ್ಮಾ ಕೃಷ್ಣಮೂರ್ತಿ 'ಗಾಳಿ ಮಾತು' ಕನ್ನಡ ಚಿತ್ರದ 'ಒಮ್ಮೆ ನಿನ್ನನ್ನು ಕಣ್ತುಂಬ', ಡಾ.ಎಂ.ಎಸ್. ನಟಶೇಖರ್ 'ಸಂಗಮ್' ಹಿಂದಿ ಚಿತ್ರದ 'ದೋಸ್ತ್ ದೋಸ್ತ್ ನಾ ರಹಾ', ಡಾ.ಅಮೃತಾ 'ಪರಾಖ್' ಹಿಂದಿ ಚಿತ್ರದ 'ಓ ಸಜ್ನಾ ಬರ್ಖಾ ಬಹರ್ ಆಯೀ', ಡಾ.ಪಿ.ಎ.ಕುಶಾಲಪ್ಪ ಮತ್ತು ಡಾ.ಪ್ರೀತಿ ಪ್ರಭು 'ಜವಾನಿ ದಿವಾನಿ' ಹಿಂದಿ ಚಿತ್ರದ 'ಜಾನೇ ಜಾ ಧೂಂಡತ ಫಿರ್ ರಾಹಾ', ಡಾ.ಆರ್.ಎಲ್.ವರ್ಷಾ 'ಕಭಿ ಕಭಿ' ಹಿಂದಿ ಚಿತ್ರದ ಟೈಟಲ್ ಸಾಂಗ್ ಹಾಡಿ ನೆರೆದಿದ್ದವರ ಮನ ಗೆದ್ದರು.

ಡಾ.ಯು.ಜಿ.ಶೆಣೈ ಮತ್ತು ಡಾ.ಸ್ಪರ್ಶ ಶೆಣೈ 'ಹೊಂಬಿಸಿಲು' ಕನ್ನಡ ಚಿತ್ರದ 'ಜೀವ ವೀಣೆ ನೀಡು ಮಿಡಿತದ ಸಂಗೀತ' ಹಾಡನ್ನು ಹಾಡಿದರೆ, ಡಾ.ಜಿ.ಡಿ.ರವಿಕುಮಾರ್ 'ಕಿಸ್ಮತ್' ಹಿಂದಿ ಚಿತ್ರದ 'ಲಕೋನ್ ಹೈ ಯಹಾನ್ ದಿಲ್ವಾಲೆ', ಡಾ.ಶಿವಾನಿ ನಾಯಕ್ 'ಶರ್ಮಿಲಿ' ಹಿಂದಿ ಚಿತ್ರದ 'ಮೇಘಾ ಛಾಯೆ ರಾತ್', ರಂಜಿತಾ ಮತ್ತು ಪೃಥ್ವಿ ಶಂಕರ್ 'ಗೀತಾ' ಕನ್ನಡ ಚಿತ್ರದ 'ಜೊತೆಯಲಿ ಜೊತೆ ಜೊತೆಯಲಿ', ಡಾ.ಸೀತಾಲಕ್ಷ್ಮಿ ಸೋಮನಾಥ್ 'ಅಮೃತವರ್ಷಿಣಿ' ಚಿತ್ರದ 'ತುಂತುರು ಅಲ್ಲಿ ನೀರ ಹಾಡು ಕಂಪನ ಇಲ್ಲಿ ಪ್ರೀತಿ ಹಾಡು' ಸೇರಿದಂತೆ 21 ಹಾಡುಗಳನ್ನು ಹಾಡಿದ ವೈದ್ಯ ಗಾಯಕರು ಕಲಾ ರಸಿಕರಿಗೆ ಮಸ್ತ್ ಮನರಂಜನೆ ನೀಡಿದರು.

ನೃತ್ಯ ವೈಭವ: ಹಾಡುಗಳ ಸವಿಗಾನದ ಜೊತೆಗೆ ಡಾ.ಸ್ಪರ್ಶ ಶೆಣೈ ತಂಡದ ನೃತ್ಯ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ತಂಡದಲ್ಲಿದ್ದ ಶಿಲ್ಪಾ, ವರ್ಷಾ, ತನ್ಮಯಿ, ಅನಘಾ, ಸಮೃದ್ಧಿ, ಚೇತನಾ, ಸುಂಪನಾ, ಯಾಮಿನಿ, ಸುಷ್ಮಾ ಮತ್ತು ಪೂಜಾ ಹಳೇ ಹಿಂದಿ ಹಾಡುಗಳಿಗೆ ತಕ್ಕಂತೆ ಹೆಜ್ಜೆ ಹಾಕುವ ಮೂಲಕ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಕಿಕ್ಕಿರಿದು ತುಂಬಿದ ಸಭಾಂಗಣ: 'ಗೀತ್ ಗಾತಾ ಚಲ್' 21ನೇ ಆವೃತ್ತಿಯಲ್ಲಿ ಸಂಗೀತ ಸುಧೆ ಕೇಳಲು ಸಭಾಂಗಣ ಕಿಕ್ಕಿರಿದು ತುಂಬಿತ್ತು. ಸಭಾಂಗಣದ ಒಳಗೆ ಎಲ್ಲಾ ಆಸನಗಳು ಭರ್ತಿಯಾಗಿದ್ದರಿಂದ ಹೊರಗಡೆ ಅಳವಡಿಸಿದ್ದ ಎಲ್‌ಇಡಿ ಪರದೆಯಲ್ಲಿ ಹಲವರು ಸಂಗೀತ ರಸಸಂಜೆಯನ್ನು ವೀಕ್ಷಣೆ ಮಾಡಿದರಲ್ಲದೆ ಅಪಾರ ಪ್ರೋತ್ಸಾಹ ನೀಡಿದರು.

ಸನ್ಮಾನ: ಇದೇ ವೇಳೆ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹಾಗೂ ಶ್ರೀಮತಿ ರ್‍ಯಾಲಿ ಗಣಪತಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು. ಕೈಗಾರಿಕೋದ್ಯಮಿ ಡಾ.ಎಂ. ಜಗನ್ನಾಥ್ ಶೆಣೈ, ಶ್ರೀಮತಿ ಕುಸುಮ ಶೆಣೈ, 'ಗೀತ್ ಗಾತಾ ಚಲ್' ಸಂಸ್ಥಾಪಕ ಪೋಷಕ ಡಾ.ಸಿ.ಉಮೇಶ್‌ಕಾಮತ್, ನಿರೂಪಕ ಸೈಯ್ಯದ್ ಅಫ್ತಾಬ್ ಅಹಮದ್ ಮತ್ತಿತರರು ಉಪಸ್ಥಿತರಿದ್ದರು.



'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಮತ್ತು ಅವರ ಪತ್ನಿ ಶ್ರೀಮತಿ ರ್‍ಯಾಲಿ ಗಣಪತಿ ಅವರನ್ನು ಸನ್ಮಾನಿಸಿದ ನಂತರ ಗೀತ್ ಗಾತಾ ಚಲ್ ತಂಡವು ಗ್ರೂಪ್ ಫೋಟೋ ಕ್ಲಿಕ್ಕಿಸಿಕೊಂಡಿತು.

ಇದು ಉಚಿತ, ನಿಶ್ಚಿತ, ಖಚಿತಗಳ ಕಾಲ...!

ಗೀತ್ ಗಾತಾ ಚಲ್ ತಂಡದ ವತಿಯಿಂದ ಆತ್ಮೀಯ ಅಭಿನಂದನೆ ಸ್ವೀಕರಿಸಿದ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಮಾತನಾಡಿ, ಜೀವನದಲ್ಲಿ ಅನೇಕ ವಿಷಯಗಳು ಆಕಸ್ಮಿಕವಾಗಿ ನಡೆಯುತ್ತವೆ. ಅವುಗಳಲ್ಲಿ 'ಗೀತ್ ಗಾತಾ ಚಲ್' ಕುಟುಂಬದಿಂದ ನೀಡಿರುವ ಅಭಿನಂದನೆಯೂ ಒಂದಾಗಿದ್ದು, ಅಭಿನಂದನೆ ನೀಡಿರುವುದಕ್ಕೆ ಗೀತ್ ಗಾತಾ ಚಲ್ ತಂಡಕ್ಕೆ ಹೃದಯ ಪೂರ್ವಕವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಇದು ಉಚಿತ, ನಿಶ್ಚಿತ, ಖಚಿತಗಳ ಕಾಲ...! ನಮ್ಮ ಗುರುಗಳಾದ ಜಿ.ಪಿ.ನಾರಾಯಣ ಅವರು, ಜೀವನದಲ್ಲಿ ಉಚಿತವಾಗಿ ದೊರೆಯುವುದು ಎರಡೇ. ಒಂದು ಸೂರ್ಯನ ಬೆಳಕು ಮತ್ತೊಂದು ಗಾಳಿ. ಆದರೆ, ಬದಲಾದ ಕಾಲದಲ್ಲಿ ಬೇರೆ ಎಲ್ಲಾ ವಿಷಯಗಳು ಉಚಿತವಾಗಿ ಸಿಗುತ್ತವೆ. ಅದರಂತೆ ನನಗೆ ಈಗ ಉಚಿತವಾಗಿ ಸಿಕ್ಕಿದ್ದು ಈ ಸನ್ಮಾನ. ನಾನು ನಿರೀಕ್ಷೆಮಾಡಿರಲಿಲ್ಲ ಸಾಧಕನಾಗಿ ನೀಡಿರುವುದು ಎನ್ನುತ್ತಿದ್ದಾರೆ. ನನ್ನ ಜೀವನದ ಪಯಣದಲ್ಲಿ ಸಾಧನೆ ಎಂಬುದು ಕಡಿಮೆ. ಇವತ್ತಿನ ದಿನಗಳಲ್ಲಿ 16 ವರ್ಷಕ್ಕೆ ಒಬ್ಬ ಕ್ರಿಕೆಟ್‌ಗೆ ಸೇರಿದರೆ ಅಪಾರ ಸಾಧನೆ ಮಾಡುತ್ತಾನೆ. ಅದರಂತೆ ಒಬ್ಬ ಸಂಗೀತಗಾರ, ನಾಟಕಕಾರ, ಕಲಾವಿದ, ವಿಜ್ಞಾನಿಗಳು ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಸಾಧನೆ ಮಾಡುವವರಿದ್ದಾರೆ. ಮಾಡುತ್ತಿದ್ದಾರೆ. ಆದರೆ ನಮ್ಮದು ದೀರ್ಘ ಕಾಲದ ಪಯಣ ಎಂದರು.

'ದೋಣಿ ಸಾಗಲಿ, ಮುಂದೆ ಹೋಗಲಿ ದೂರ ತೀರವ ಸೇರಲಿ' ಎಂಬಂತೆ ನಾವೆಲ್ಲಾ ಜೀವನದಲ್ಲಿ ಒಂದು ದೋಣಿಯನ್ನು ಸೇರುತ್ತೇವೆ. ಯಾವ ರೀತಿಯ ತೀರವನ್ನು ಸೇರುತ್ತೇವೆಯೋ ತಿಳಿಯದು. ಅದು ಬೃಂದಾವನ ಆಗಿರಬಹುದು, ಸಂಗೀತಮಯವಾದ ವಾತಾವರಣ ಆಗಿರಬಹುದು, ದಟ್ಟವಾದ ಕಾಡಾಗಿರಬಹುದು ಅಥವಾ ಮರುಭೂಮಿ ಆಗಿರಬಹುದು. ಎಲ್ಲಿಗೆ ತಲುಪುತ್ತೇವೆ ಎಂಬುದು ಗೊತ್ತಿಲ್ಲ. ಆದರೆ, ನಾನು ಈ ಸಂಜೆ ನನ್ನ ಧರ್ಮ ಪತ್ನಿಯೊಂದಿಗೆ ಒಳ್ಳೆಯ ಸ್ಥಳದಲ್ಲಿ ಲ್ಯಾಂಡ್ ಆಗಿದ್ದೇನೆ ಎನ್ನುವ ಮೂಲಕ ಹಾಸ್ಯ ಚಟಾಕಿ ಹಾರಿಸಿದರಲ್ಲದೆ ಇಂದು ನಾವೆಲ್ಲರೂ ಸಂಗೀತ ಮಯವಾದ ತೀರವನ್ನು ಸೇರಿದ್ದೇವೆ. ಸಂಗೀತದ ಸವಿಯನ್ನು ಸವಿಯೋಣ ಎಂದು 'ಗೀತ್ ಗಾತಾ ಚಲ್' ತಂಡಕ್ಕೆ ಶುಭ ಹಾರೈಸಿದರು.

ವೈದ್ಯರಿಗೆ ವೇದಿಕೆ ಸೃಷ್ಟಿಸುತ್ತಿರುವ 'ಗೀತ್ ಗಾತಾ ಚಲ್': ಜಗನ್ನಾಥ ಶೆಣೈ...

ರೇಡಿಯೋ, ಟಿವಿ ಕಾರ್ಯಕ್ರಮಗಳಲ್ಲಿ ವೈದ್ಯರಿಗೆ ವೇದಿಕೆ ಸೃಷ್ಟಿಸುತ್ತಿರುವ 'ಗೀತ್ ಗಾತಾ ಚಲ್' ಸಂಗೀತ ರಸಸಂಜೆ ಕಾರ್ಯಕ್ರಮ 21 ವರ್ಷಗಳಿಂದ ಹೊಸಬರಿಗೆ ಅವಕಾಶ ಮಾಡಿಕೊಡುತ್ತಿದೆ ಎಂದು ಖ್ಯಾತ ಕೈಗಾರಿಕೋದ್ಯಮಿಗಳು ಹಾಗೂ ದಾನಿಗಳು ಆಗಿರುವ ಡಾ.ಎಂ.ಜಗನ್ನಾಥ್ ಶೆಣೈ ಹೇಳಿದರು.

ಗೀತ್ ಗಾತಾ ಚಲ್ ಸಂಸ್ಥಾಪಕ ಪೋಷಕರಾದ ಡಾ.ಸಿ.ಉಮೇಶ್ ಕಾಮತ್, ಸಂಘಟನಾ ಅಧ್ಯಕ್ಷ ಡಾ.ಪಿ.ಎ.ಕುಶಾಲಪ್ಪ, ಡಾ.ಹೇಮಲತಾ ಈ ನಿಟ್ಟಿನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಉತ್ತಮವಾಗಿ ಹಾಡುವ ವೈದ್ಯರನ್ನು ಗುರ್ತಿಸಿ, ಅವರಿಗೆ ಅವಕಾಶ ಮಾಡಿಕೊಡುವ ಕಾರ್ಯ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮೈಸೂರು ಗೋಲ್ಡ್: ಸಂಗೀತ ರಸಸಂಜೆಯ ಮುಖ್ಯ ಅತಿಥಿಗಳಾದ ಕೆ.ಬಿ. ಗಣಪತಿಯವರು, ಕಳೆದ 21 ವರ್ಷಗಳಿಂದ 'ಗೀತ್ ಗಾತಾ ಚಲ್' ಕಾರ್ಯಕ್ರಮದ ಯಶಸ್ಸಿಗೆ ತಮ್ಮ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪ್ರತಿಕೆ ಮೂಲಕ ಪ್ರೋತ್ಸಾಹ ನೀಡುತ್ತಿದ್ದಾರೆ. ಮೈಸೂರಿಗರಿಗೆ ಚಿರಪರಿಚಿತರಾಗಿರುವ ಅವರು, ಉದ್ಯಮಿ ಶ್ಯಾಮ್ ಚೆರಿಯನ್ ಹೇಳಿದಂತೆ 'ಮೈಸೂರು ಗೋಲ್ಡ್' ಎಂದು ಬಣ್ಣಿಸಿದರು.



ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ ನೆರೆದಿರುವ ಪ್ರೇಕ್ಷಕರು.

ಸಾಹಿತ್ಯ ಕ್ಷೇತ್ರಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ



ಮೈಸೂರು, ಜೂ.4(ಎಸ್‌ಬಿಡಿ)– ಸಾಹಿತ್ಯ ಕ್ಷೇತ್ರಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅವಿಸ್ಮರಣೀಯ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.



ಟಿ.ಎಸ್.ಶ್ರೀವತ್ಸ

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್, ಹಿಮಾಲಯ ಪ್ರತಿಷ್ಠಾನ ಹಾಗೂ ರೋಟರಿ ಕ್ಲಬ್ ಆಫ್ ಮೈಸೂರ್ ಸ್ಪಾರ್ಸ್ ಸಂಸ್ಥೆ ಸಹಯೋಗದಲ್ಲಿ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಪ್ರಥಮ ಮುಕ್ತಕ ಸಾಹಿತ್ಯೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪ್ರೋತ್ಸಾಹ ಮತ್ತು ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸುವ ಮೂಲಕ ನಾಡು ಬೆಳಗಿದ್ದಾರೆ. ಅವರ ಜನ್ಮದಿನದಂದು ಸಾಹಿತ್ಯದ ಭಾಗವಾಗಿ ಮುಕ್ತಕ ಸಾಹಿತ್ಯೋತ್ಸವ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ. ಮುಕ್ತಕ ಸಾಹಿತ್ಯದ ರಚನೆ ಸುಲಭದ ಮಾತಲ್ಲ. ಅದರಲ್ಲಿ ಭಾವಾರ್ಥ ಪ್ರಧಾನವಾಗಿರಬೇಕು. ಈ ಪ್ರಕಾರದ ಸಾಹಿತ್ಯದಲ್ಲು ಹಲವರು ಸಾಧನೆ ಮಾಡಿದ್ದಾರೆ ಎಂದರು.

ಹಿರಿಯ ನಾಗರಿಕ ವೇದಿಕೆ ಸಂಸ್ಥಾಪಕ ಎಂ.ಪ್ರಭುಸ್ವಾಮಿ ಮಾತನಾಡಿ, ಸ್ವಾಸ್ಥ್ಯ ಸಮಾಜದಲ್ಲಿ ಸಾಹಿತ್ಯ ಪ್ರಮುಖ ಪಾತ್ರ ವಹಿಸುತ್ತದೆ. ಸಾಹಿತ್ಯ ಸಮಾಜದ ಸಂತೋಷ ಮತ್ತು ಹೆಮ್ಮೆಯ ಪ್ರತೀಕ ಎಂದು ಅಭಿಪ್ರಾಯಿಸಿದರು. ಹಿರಿಯ ಉಪನ್ಯಾಸಕ ಎಸ್.ಸ್ವಾಮಿ, ಸಾಹಿತ್ಯ ಸರ್ವರ ಹಿತವನ್ನು ಬಯಸುತ್ತದೆ. ಪ್ರತಿಯೊಬ್ಬರೂ ವೃತ್ತಿ ಜೊತೆಗೆ ಸಂಗೀತ, ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಂಡು ಸಂಬಂಧಿತ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ 81ನೇ ವರ್ಷದ ಹಿರಿಯ ಮುಕ್ತಕ ಸಾಹಿತಿ ಎಸ್. ರಾಮಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ಇದೇ ವೇಳೆ 'ಕಮಲ ಪುಷ್ಪಗಳು' ಮುಕ್ತಕ ಸಂಕಲನ ಮತ್ತು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಬಳಿಕ 'ಮುಕ್ತಕ ಸಾಹಿತ್ಯದ ವಿವಿಧ ಆಯಾಮಗಳು' ಕುರಿತು ಹಿರಿಯ ವಿದ್ವಾಂಸ ಹೆಚ್. ವಿ.ನಾಗರಾಜ ರಾವ್, 'ಸಂಸ್ಕೃತ ಸಾಹಿತ್ಯದಲ್ಲಿ ಮುಕ್ತಕದ ಪ್ರಭಾವ' ಕುರಿತು ಸಾಹಿತಿ ಡಾ.ಲೀಲಾ ಪ್ರಕಾಶ್, 'ಕನ್ನಡ ಸಾಹಿತ್ಯದಲ್ಲಿ ಮುಕ್ತಕದ ಮಹತ್ವ' ಕುರಿತು ಉಪನ್ಯಾಸಕ ಕೃ.ಪಾ.ಮಂಜುನಾಥ್ ಮಾತನಾಡಿದರು.

ಪ್ರಶಸ್ತಿ ಪ್ರದಾನ: ಹಿರಿಯ ವಿದ್ವಾಂಸರಾದ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಇನ್ನಿತರ ಗಣ್ಯರು, ಮುಕ್ತಕ ಸಾಹಿತಿ ಕೆ.ಲಕ್ಷ್ಮಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಾಗಮ್ಮ, ಪಾರ್ವತಮ್ಮ, ಸತ್ಯನಾರಾಯಣ ಕಾಮತ್, ಡಾ.ಲೀಲಾ ಪ್ರಕಾಶ್, ಪ್ರತಿಮಾ ಅವರಿಗೆ 'ರೋಟರಿ ಕ್ಲಬ್ ಆಫ್ ಮೈಸೂರ್ ಸ್ಪಾರ್ಸ್' ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ

ಇದು ಮುಕ್ತಕ ಕುರಿತ ಮಹಾ ಕಾರ್ಯಕ್ರಮ. ಚುಟುಕು, ಹನಿಕವನ ಎನ್ನುವುದು ಮುಕ್ತಕ ಪ್ರಭೇದಗಳು. ಮುಕ್ತಕ ಪ್ರಕಾರದಲ್ಲಿ ಅಸಂಖ್ಯಾತ ಕವಿಗಳಿದ್ದಾರೆ ಎಂದು ಹಿಂದೆ ಹೇಳಿದ್ದಾರೆ. ಆ ಮಾತು ಈಗಲೂ ಸತ್ಯವಾಗಿದೆ ಮುಕ್ತಕ ಸಾಹಿತ್ಯ ಕೃಷಿಕರ ಸಂಖ್ಯೆ ಅತ್ಯಧಿಕವಾಗಿದೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಮುಕ್ತಕದ ಕೊಡುಗೆ ಮೌಲಿಕವಾದುದು. ಇದು ಹೀಗೆ ಮುಂದುವರೆಯಬೇಕು. ಸಾಧಕರ ಸನ್ಮಾನಿಸುವುದು ಸಮಾಜದ ಹೊಣೆಗಾರಿಕೆ. ಈ ಸತ್ಕಾರ್ಯವೂ ನಿರಂತರವಾಗಿ ನಡೆದಿರುವುದು ಸಂತಸದ ಸಂಗತಿ. —ಸಿಪಿಕೆ

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಕ್ತಕ ಸಾಹಿತಿ ಕಮಲಾ ರಾಜೇಶ್, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ರೋಟರಿ ಕ್ಲಬ್ ಆಫ್ ಮೈಸೂರು ಸ್ಪಾರ್ಸ್ ಅಧ್ಯಕ್ಷ ಸಂತೋಷ್ ಗೌಡ, ಎನ್.ಅನಂತ, ರೋಹಿಣಿ ಶೇಖರ್, ಮಾಲತಿ ಕೃಷ್ಣಪ್ರಸಾದ್, ರಾಜೇಶ್, ಹೇಮಾವತಿ ಮತ್ತಿತರರು ಉಪಸ್ಥಿತರಿದ್ದರು.

ಕೆಪಿಎಸ್‌ಸಿ ಪರೀಕ್ಷೆಗೆ ಅಭ್ಯರ್ಥಿಗಳ ನಿರಾಸಕ್ತಿ

ಮೈಸೂರು. ಜೂನ್ 4(ಸಿಎನ್)–ಮುಖ್ಯ ವಿದ್ಯುತ್ ಪರಿವೀಕ್ಷಣಾಲಯ ಹುದ್ದೆಗಳ ಭರ್ತಿಗಾಗಿ ನಡೆದ ಸಹಾಯಕ ವಿದ್ಯುತ್ ಪರಿವೀಕ್ಷಕರ ಹುದ್ದೆಗೆ ಪರೀಕ್ಷೆ ನಡೆದಿದ್ದು, ಎರಡು ದಿನಗಳಿಂದ ನಡೆದ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಹೆಚ್ಚು ಗೈರಾಗುವ ಮೂಲಕ ಪರೀಕ್ಷೆಯಿಂದ ದೂರ ಉಳಿದಿದ್ದಾರೆ.

ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ನಡೆಯುತ್ತಿದ್ದ, ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ) ಪರೀಕ್ಷೆ (ಜೂನ್ 4) ರಂದು ಮುಕ್ತಾಯವಾಗಿದೆ. ಶನಿವಾರ(ಜೂನ್ 3)ರಂದು ನಡೆದ ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ 367 ಮಂದಿ ಪರೀಕ್ಷಾರ್ಥಿಗಳ ಪೈಕಿ ಕೇವಲ 54 ಮಂದಿ ಪರೀಕ್ಷೆ ಬರೆದು, ಬರೋಬ್ಬರಿ 311 ಮಂದಿ ಗೈರಾಗಿದ್ದರು. ಇನ್ನು ಭಾನುವಾರ(ಜೂನ್ 4) ಬೆಳಗ್ಗೆ ಮೊದಲ ಹಂತದಲ್ಲಿ ನಡೆದ ಸಾಮಾನ್ಯ ಪತ್ರಿಕೆ ಪರೀಕ್ಷೆಗೆ 811 ಪರೀಕ್ಷಾರ್ಥಿಗಳ ಪೈಕಿ 419 ಮಂದಿ ಪರೀಕ್ಷೆ ಎದುರಿಸಿದರೆ, 392 ಮಂದಿ ಗೈರಾಗಿದ್ದರು, ಬಳಿಕ ಮಧ್ಯಾಹ್ನ ನಡೆದ ಎರಡನೇ ಹಂತದ ನಿರ್ದಿಷ್ಟ ಪತ್ರಿಕೆ ಪರೀಕ್ಷೆಗೆ 415 ಮಂದಿ ಪರೀಕ್ಷೆ ಬರೆದು, 396 ಮಂದಿ ಗೈರಾಗುವ ಮೂಲಕ ಪರೀಕ್ಷೆಯಿಂದ ದೂರ ಉಳಿದಿದ್ದಾರೆ. ಒಟ್ಟಾರೆ ಎರಡು ದಿನಗಳಿಂದ ಕೆಪಿಎಸ್‌ಸಿ ಸಹಾಯಕ ವಿದ್ಯುತ್ ಪರಿವೀಕ್ಷಕರ ಹುದ್ದೆಗೆ ನಡೆದ ಪರೀಕ್ಷೆಗೆ ಗೈರಿನ ಸಂಖ್ಯೆ ಹೆಚ್ಚಾಗಿದ್ದು, ಈ ಈ ಮೂಲಕ ವಿದ್ಯುತ್ ಇಲಾಖೆಯಲ್ಲಿ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿಲ್ಲ ಮೇಲ್ನೋಟಕ್ಕೆ ತಿಳಿಯುತ್ತಿದೆ.

ಗಂಗಾನದಿಗೆ ಅಡ್ಡಲಾಗಿ ನಿರ್ಮಿಸುತ್ತಿದ್ದ ಸೇತುವೆ 2ನೇ ಸಲ ಕುಸಿತ

ಬಿಹಾರ: ನಿರ್ಮಾಣ ಹಂತದಲ್ಲಿದ್ದ ಸೇತುವೆ ಕುಸಿದಿರುವಂತಹ ಘಟನೆ ಭಾನುವಾರ ಬಿಹಾರದ ಭಾಗಲ್ಪುರದಲ್ಲಿ ನಡೆದಿದೆ. ಗಂಗಾನದಿಗೆ ಅಡ್ಡಲಾಗಿ ಆಗುವನಿ–ಸುಲ್ತಂಗಂಜ್ ನಡುವೆ ನಿರ್ಮಾಣವಾಗುತ್ತಿದ್ದ ಸೂಪರ್ ಸ್ಟ್ರಕ್ಚರ್ ಸೇತುವೆ 2ನೇ ಸಲ ಕುಸಿದಿದೆ. ಸೇತುವೆಯ 500 ಮೀಟರ್ ಭಾಗವು ಇದ್ದಕ್ಕಿದ್ದಂತೆ ನದಿಗೆ ಬಿದ್ದಿದೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಸಾವು–ನೋವು ಸಂಭವಿಸಿಲ್ಲ. ಇತ್ತೀಚೆಗೆ ಚಂಡಮಾರುತದಿಂದಾಗಿ ಏಪ್ರಿಲ್‌ನಲ್ಲಿ ಸೇತುವೆಗೆ ಸ್ವಲ್ಪ ಹಾನಿಯಾಗಿತ್ತು. ಎರಡು ವರ್ಷಗಳ ಹಿಂದೆಯೂ ಸೇತುವೆಯ ಒಂದು ಭಾಗ ಕುಸಿದಿತ್ತು ಎನ್ನಲಾಗಿದೆ.

ಸಿಎಂ ನಿತೀಶ್ ಕುಮಾರ್ ಅವರು 23 ಫೆಬ್ರವರಿ 2014 ರಂದು ಸೇತುವೆಯ ಶಂಕುಸ್ಥಾಪನೆ ಮಾಡಿದ್ದರು. ಬಿಹಾರ ಸರ್ಕಾರದ ಈ ಯೋಜನೆಯನ್ನು ಅತ್ಯಂತ ಮಹತ್ವಾಕಾಂಕ್ಷೆ ಯೋಜನೆ ಎಂದು ಪರಿಗಣಿಸಲಾಗಿತ್ತು. ಈ ಯೋಜನೆಯ ವೆಚ್ಚದ ಆರಂಭಿಕ ಮೌಲ್ಯಮಾಪನ 1710.77 ಕೋಟಿ ರೂ. ಎಂದು ಅಂದಾಜಿಸಲಾಗಿತ್ತು ಈ ಸೇತುವೆಯ ನಿರ್ಮಾಣದಿಂದ ಉತ್ತರ ಮತ್ತು ದಕ್ಷಿಣ ಬಿಹಾರ ನಡುವಿನ ಅಂತರ ಗಣನೀಯವಾಗಿ ಕಡಿಮೆಯಾಗಲಿದೆ. ಈ ಸೇತುವೆ ಉದ್ದ ಸುಮಾರು 3.160 ಕಿ.ಮೀ. ರಸ್ತೆಯ ಒಟ್ಟು ಉದ್ದ ಸುಮಾರು 25 ಕಿ.ಮೀ ಆಗಿದ್ದು, ಮಾರ್ಚ್ 2020ರೊಳಗೆ ಸಂಚಾರ ಆರಂಭಿಸುವುದಾಗಿ ಇಲಾಖೆ ಸೂಚನೆ ನೀಡಿತ್ತು. ಈ ಸೇತುವೆ NH 31 ಮತ್ತು NH 80 ಸಂಪರ್ಕಗೊಳ್ಳಲಿದೆ.

7ನೇ ವರ್ಷದ ಸವಿನೆನಪು



ನೀನು ನಮ್ಮನ ಅಗಲಿ ಇಂದಿಗೆ 7 ವರ್ಷ ಕಳೆದರೂ ನಿನ್ನ ನೆನಪು ಸದಾ ನಮ್ಮ ಮನದಲ್ಲಿ ಹಸಿರಾಗಿದೆ. ನಿನ್ನ ಆತ್ಮಕ್ಕೆ ಶಾಂತಿ ಸಿಗಲೆಂದು ಆ ದೇವರಲ್ಲಿ ಪ್ರಾರ್ಥಿಸುವ.
ತಂದೆ: ವಿ. ತಿಮ್ಮಯ್ಯ,
ತಾಯಿ: ಮಂಗಳ.
ಪತ್ನಿ: ಆಶಾ.ಬಿ.ಎಂ,
ಮಕ್ಕಳಾದ ಎಸ್. ಸುಸ್ಮಿತಾ, ಮತ್ತು ಎಸ್. ಪ್ರಜ್ವಲ್
ಹಾಗೂ ಸಹೋದರರು ಮತ್ತು ಕುಟುಂಬ ವರ್ಗ

ಟಿ.ಶೇಖರ್

25ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 25 ವರ್ಷ ಕಳೆದರೂ ಪ್ರತಿ ದಿನವೂ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ತಂದೆ, ತಾಯಿ ಸೋದರ, ಸೋದರಿ, ಅತ್ತಿಗೆ, ಕುಟುಂಬ ವರ್ಗದವರು,
ಕುವೆಂಪುನಗರ, ಮೈಸೂರು

ಎಸ್.ಮಹದೇವ
ಜ: 15–7–1977 – ಮ: 5–6–1998

ಕಳೆದು ಹೋಗಿದೆ

ಭಾರತೀಯ ಸೇನೆಯಲ್ಲಿದ್ದು ರಜೆಯಲ್ಲಿ ಬರುತ್ತಿದ್ದಾಗ ದಿನಾಂಕ 01–06–23 ರಂದು ಬೆಂಗಳೂರಿನಿಂದ ರಾತ್ರಿ 11.00 ಗಂಟೆಗೆ ಮಡಿಕೇರಿಗೆ ಬರುತ್ತಿದ್ದ ರಾಜಹಂಸ ಬಸ್ಸಿನಲ್ಲಿ ರಾತ್ರಿ 1.30ಕ್ಕೆ ಮೈಸೂರಿನಲ್ಲಿ ಮುಖ್ಯ ದಾಖಲಾತಿಗಳಿದ್ದ ಸೈನಿಕ ಎಂ.ಬಿ.ರಾಜೇಶ್ ಎಂಬುವವರಿಗೆ ಸೇರಿದ ಬ್ಯಾಗ್ ಕಳೆದು ಹೋಗಿದೆ. ಸಿಕ್ಕಿದವರು ದಯವಿಟ್ಟು ಮೈಸೂರು ಬಸ್ ನಿಲ್ದಾಣದ ಪೊಲೀಸ್ ಕಂಟ್ರೋಲ್ ರೂಂಗೆ ತಲುಪಿಸಬೇಕಾಗಿ ವಿನಂತಿ.
ಮೊ.ನಂ. 9481090546/6283501270



ಆಹಾರ ಅರಸಿ ಬಂದ ಕಾಡಾನೆ ಕೆರೆಯಲ್ಲಿ ಸಿಲುಕಿ ಪರದಾಟ

ಮರದ ದಿಮ್ಮಿ ಬಳಸಿ ಆನೆ ರಕ್ಷಿಸಿದ ಅರಣ್ಯ ಸಿಬ್ಬಂದಿ

ಮಡಿಕೇರಿ, ಜೂ.4– ಆಹಾರ ಅರಸಿ ಕಾಫಿ ತೋಟಕ್ಕೆ ಬಂದಿದ್ದ ಕಾಡಾನೆಗಳ ಪೈಕಿ ಒಂದು ಆನೆ ಕೆರೆಯಲ್ಲಿ ಸಿಲುಕಿ ಪರದಾಡಿದ ಘಟನೆ ವಿರಾಜಪೇಟೆ ತಾಲೂಕಿನ ನರಿಯಂದಡ ಗ್ರಾಪಂ ವ್ಯಾಪ್ತಿಯ ಕರಡ ಗ್ರಾಮದ ನಡೆದಿದೆ.

ನರಿಯಂದಡ ಗ್ರಾಮ ಪಂಚಾಯಿತ್ತಿ ವ್ಯಾಪ್ತಿಯ ಕಡಂಗ, ಕರಡ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಶುಕ್ರವಾರ ರಾತ್ರಿ ಕರಡ ಗ್ರಾಮದ ನಡಿಕೇರಿಯಂಡ ಅಯ್ಯಣ್ಣ ಎಂಬವರ ತೋಟಕ್ಕೆ ಕಾಡಾನೆಗಳು ಹಿಂಡು ಸಹಿತ ಬಂದಿದ್ದವು. ನೀರು ಕುಡಿಯುವ ವೇಳೆ ಕೆರೆಯಲ್ಲಿ 4ಕ್ಕೂ ಅಧಿಕ ಕಾಡಾನೆಗಳು ಸಿಲುಕಿಕೊಂಡಿವೆ. ಇತರ ಆನೆಗಳು ಹರ ಸಾಹಸ ಪಟ್ಟು ಕೆರೆಯಿಂದ ಹೊರ ಬರುವಲ್ಲಿ ಯಶಸ್ವಿಯಾಗಿದ್ದರೆ, ಒಂದು ಆನೆಯಂತೂ ದಿನಪೂರ್ತಿ ಕೆರೆಯಿಂದ ಹೊರ ಬರಲಾಗದೇ ಪರಿತಪಿಸಿದೆ.

ಈ ಮಾಹಿತಿ ಅರಿತ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಮರದ ದಿಮ್ಮಿಗಳನ್ನು ಬಳಸಿ ಹರಸಾಹಸದಿಂದ ಕಾಡಾನೆಯನ್ನು ಕೆರೆಯಿಂದ ಹೊರ ತರುವಲ್ಲಿ ಸಫಲರಾಗಿದ್ದಾರೆ. ಕೆರೆಯಲ್ಲಿ ಸಿಲುಕಿದ ರೋಷದಲ್ಲಿ ಕೆರೆಯಿಂದ ಹೊರ ಬಂದ ಕಾಡಾನೆ ಸ್ಥಳದಲ್ಲಿ ನಿಲ್ಲಿಸಿದ್ದ ಎಲಿಫೆಂಟ್ ಟಾಸ್ಕ್ ಫೋರ್ಸ್ ವಾಹನದ ಮೇಲೆ ದಾಳಿ ನಡೆಸಿದೆ. ಅಲ್ಲಿದ್ದ ಸಿಬ್ಬಂದಿ ಬೊಬ್ಬೆ ಹಾಕಿದಾಗ ಕಾಡಾನೆ ಘೀಳಿಡುತ್ತಾ ಕಾಫಿ ತೋಟದ ಒಳಗೆ ಮರೆಯಾಗಿದೆ. ದಾಳಿಯ ಪರಿಣಾಮ ವಾಹನದ ಮುಂಭಾಗ ಜಖಂಗೊಂಡಿದ್ದರೆ, ಗಾಜು ಒಡೆದು ಹೋಗಿ ಹಾನಿ ಸಂಭವಿಸಿದೆ. ತದನಂತರ ಕಾಫಿ ತೋಟದಿಂದ ಕಾಡಾನೆಯನ್ನು ಕಾಡಿಗಟ್ಟಲು ಕಾರ್ಯಾಚರಣೆ ನಡೆಸಲಾಯಿತು.

ಕಾಡಾನೆ ಅನುಮಾನಾಸ್ಪದ ಸಾವು



ಸಿದ್ದಾಪುರ, ಜೂ.4– ಅರಣ್ಯದಿಂದ ಆಹಾರ ಅರಿಸಿ ಕಾಫಿ ತೋಟಕ್ಕೆ ಬಂದ ಕಾಡಾನೆಯೊಂದು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಸಮೀಪದ ನಲವತ್ತೊಕ್ಲು ಬಳಿ ಸಂಭವಿಸಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ನಾಲ್ಕು ದಿನಗಳ ಹಿಂದೆ ಅಮ್ಮತ್ತಿ ಸುತ್ತಮುತ್ತಲ ಗ್ರಾಮ ವ್ಯಾಪ್ತಿಯಲ್ಲಿ ಸಿಡಿಲು ಗುಡುಗು ಸಹಿತ ಭಾರಿ ಮಳೆಯಾಗಿದ್ದು, ಕಾಫಿ ತೋಟದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿ ನೆಲಮಟ್ಟದಲ್ಲಿ ಜೋತಾಡುತ್ತಿದ್ದು, ಆ ತಂತಿಗೆ ಸ್ಪರ್ಶವಾಗಿ ಕಾಡಾನೆ ಮೃತಪಟ್ಟಿರಬಹುದೆಂದು ಎಂದು ಶಂಕಿಸಲಾಗಿದೆ. ನಾಲ್ಕು ದಿನಗಳ ನಂತರ ಕಾಫಿ ತೋಟಕ್ಕೆ ತೆರಳಿದವರಿಗೆ ದುರ್ವಾಸನೆ ಬರುತ್ತಿರುವುದನ್ನು ಕಂಡು ಸ್ಥಳಕ್ಕೆ ತೆರಳಿದಾಗ ಕಾಡಾನೆ ಮೃತುಪಟ್ಟಿರುವುದು ಕಂಡು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ

ಸುಮಾರು 25 ವರ್ಷ ಪ್ರಾಯದ ಗಂಡಾನೆ ಇದಾಗಿದ್ದು, ಡಾ ಚಟ್ಟಿಯಪ್ಪ ಆನೆ ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಜೆಸಿಬಿ ಯಂತ್ರ ಬಳಸಿ ಗುಂಡಿ ತೋಡಿ ಸ್ಥಳದಲ್ಲೇ ಅಂತ್ಯಸಂಸ್ಕಾರ ಮಾಡಲಾಗಿದೆ. ಸ್ಥಳಕ್ಕೆ ವಿರಾಜಪೇಟೆ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಶರಣಬಸಪ್ಪ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ವಿ. ನೆಹರೂ, ವಿರಾಜಪೇಟೆ ವಲಯ ಅರಣ್ಯಾಧಿ ಕಾರಿ ಕಳ್ಳಿರ. ಎಂ. ದೇವಯ್ಯ ಉಪ ವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ ಸೇರಿದಂತೆ ಮತ್ತಿತರರು ಹಾಜರಿದ್ದರು.

ಶ್ರೀ ಭಗವತಿ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶ ಮಹೋತ್ಸವ



ಗುಡ್ಡೆಹೊಸೂರು, ಜೂ.4– ಇಲ್ಲಿಗೆ ಸಮೀಪದ ತ್ಯಾಗತ್ತೂರು ಗ್ರಾಮದ ಶ್ರೀ ಭಗವತಿ ದೇವಸ್ಥಾದಲ್ಲಿ ಮೂರು ದಿನಗಳ ಕಾಲ ಅಷ್ಟಬಂಧ ಬ್ರಹ್ಮಕಲಶ ಮಹೋತ್ಸವವು ಶ್ರಾದ್ಧಭಕ್ತಿಯಿಂದ ಅದ್ದೂರಿಯಾಗಿ ನಡೆಯಿತು.

ಮೂರು ದಿನಗಳ ಕಾಲ ದೇವಸ್ಥಾನದಲ್ಲಿ ಚಂಡಿಕಾ ಹೋಮ ಸೇರಿದಂತೆ ವಿವಿಧ ಹೋಮ–ಹವನಗಳು ನಡೆಯಿತು. ಈ ಪೂಜಾ ಕಾರ್ಯವನ್ನು ತಂತ್ರಿಯವರಾದ ಪ್ರಕಾಶ ಆಚಾರ್ಯ ಪುಂಜ ಅವರ ತಂಡ ನೆರವೇರಿಸಿದರು. ಇದೇ ಸಂದರ್ಭ ದೇವಸ್ಥಾನದಲ್ಲಿ ತುಲಾಭಾರ, ಅಲಂಕಾರ ಪೂಜೆ, ತ್ರಿಮಧುರ, ಕ್ಷೀರಾಭಿಷೇಕ, ಕುಂಕುಮಾರ್ಚನೆ, ರಂಗಪೂಜೆ, ಹೂವಿನ ಅಲಂಕಾರ ಪೂಜೆ ಇನ್ನಿತರ ಸೇವೆಗಳನ್ನು ನಡೆಸಲಾಯಿತು.

ಈ ಪೂಜಾ ಕಾರ್ಯದಲ್ಲಿ ತಕ್ಕ ಮುಖ್ಯಸ್ಥರು, ಆಡಳಿತ ಮಂಡಳಿ ಒಕ್ಕಲು ಸದಸ್ಯರು ಉತ್ಸವ ಸಮಿತಿ ಮತ್ತು ಗ್ರಾಮಸ್ಥರು ಸಕ್ರಿಯವಾಗಿ ಭಾಗವಹಿಸಿದ್ದರು. ಇನ್ನೂ ಒಂದು ತಿಂಗಳ ಕಾಲ ನಿತ್ಯಪೂಜೆ ಸೇವೆಗಳು ನಡೆಸಲಾಗುವುದು ಎಂದು ದೇವಸ್ಥಾನ ಆಡಳಿತ ಮಂಡಳಿಯವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ, ಆಡಳಿತ ಮಂಡಳಿ 9480045644, 9902596825, 9972076212 ಈ ಮೊಬೈಲ್ ನಂ ಸಂಪರ್ಕಿಸಬಹುದು.

ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ



ಸುಂಟಿಕೊಪ್ಪ, ಜೂ.4– ಮಾದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿವಾಸಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು. ಮಾದಾಪುರ ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಾನಸ ಚಾಲನೆ ನೀಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುಮೇಶ್ ಮಾತನಾಡಿ, ಗ್ರಾಮ ಆರೋಗ್ಯ ಯೋಜನೆ ಅಡಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ರಾಜ್ಯಾದ್ಯಂತ ಮೇ 22 ರಿಂದ ಜೂನ್ 22 ರವರೆಗೆ ನಡೆಯಲಿದ್ದು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಗ್ರಾಮೀಣ ಪ್ರದೇಶದ ಜನತೆ ಆರೋಗ್ಯವನ್ನು ಕಾಪಾಡುವ ದಿಸೆಯಲ್ಲಿ ಇದನ್ನು ಜಾರಿಗೆ ತರಲಾಗಿದ್ದು ಯೋಜನೆಯ ಸದುಪಯೋಗವನ್ನು ಗ್ರಾಮಸ್ಥರು ಪಡೆದುಕೊಳ್ಳುವಂತೆ ಕರೆ ನೀಡಿದರು.

ಆರೋಗ್ಯ ಶಿಬಿರದಲ್ಲಿ ರಕ್ತದೊತ್ತಡ, ರಕ್ತದಲ್ಲಿ ಸಕ್ಕರೆಯ ಪ್ರಮಾಣ ಹಿಮೋಗ್ಲೋಬಿನ್, ತೂಕ ಮತ್ತು ಎತ್ತರ ಹಾಗೂ ಚಿಕ್ಕ ಮಕ್ಕಳಿಗೆ ಪೌಷ್ಠಿಕ ತಪಾಸಣೆಗಳನ್ನು ಮಾಡಲಾಯಿತು. ನೂರಾರು ಸಂಖ್ಯೆಯಲ್ಲಿ ಗ್ರಾಮಸ್ಥರು ನೆರೆದಿದ್ದು ಆರೋಗ್ಯ ತಪಾಸಣಾ ಶಿಬಿರದಲ್ಲಿ ತಪಾಸಣೆಗಳ ಪ್ರಯೋಜನ ಪಡೆದರು. ಶಿಬಿರದಲ್ಲಿ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ನಿಶಾ, ಸಿಹೆಚ್‌ಒಗಳಾದ ಸಿಂಧು, ಮನೋಜ್ ಹಾಗೂ ಆಶಾ ಕಾರ್ಯಕರ್ತೆಯರು ಪರಿಶೀಲನೆ ನಡೆಸಿದರು. ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಸದಸ್ಯರುಗಳಾದ ಲತೀಫ್, ಅಂತೋನಿ, ನಿರೂಪ, ಸೋಮಣ್ಣ, ಬಿದ್ದಪ್ಪ, ಭಾಗೀರಥಿ, ಶೀಲಾ ಗೋಪಿ, ಗ್ರಾಮ ಪಂಚಾಯಿತಿ ಲೆಕ್ಕ ಸಹಾಯಕಿ ಅನಿತಾ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪನೆಗೆ ಅಗತ್ಯ ಕ್ರಮ

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ಜೂ.4– ಜಿಲ್ಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪನೆಗೆ ಇರುವ ತೊಂದರೆಗಳ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಪರಿಹರಿಸಿ ಪ್ರತಿಮೆ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಭಾನುವಾರ ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ ಮೈಸೂರು ಪ್ರಾಂತ್ಯದ ದೈವ ಸ್ವರೂಪರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಉದ್ಘಾಟಿಸುತ್ತಿರುವುದು ಸಂತೋಷದ ವಿಷಯ ಎಂದರು.

ದೇಶದಲ್ಲಿ ಅನೇಕ ರಾಜರು ಆಳ್ವಿಕೆ ಮಾಡಿದ್ದಾರೆ. ಆದರೆ ಮೈಸೂರು ಅರಸರಾದ ನಾಲ್ವಡಿ ಅವರ ಹೆಸರು ಇಂದಿಗೂ ಅಚ್ಚಳಿಯದೇ ಉಳಿದಿದೆ ಎಂದರೆ ಅದಕ್ಕೆ ಕಾರಣ ಅವರು ಮಾಡಿದ ಜನಪರ ಕೆಲಸಗಳು. ನಾಲ್ವಡಿ ಅವರ ಚಿಂತನೆಗಳ ಫಲವಾಗಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದ ಜನರು ಉತ್ತಮ ಮೂಲಭೂತ ವ್ಯವಸ್ಥೆಗಳೊಂದಿಗೆ ಜೀವನ ನಡೆಸುತ್ತಿದ್ದಾರೆ. ನಾಲ್ವಡಿ ಅವರು ಸರ್ಕಾರ ಎಂಬ ವ್ಯವಸ್ಥೆ ಪ್ರಾರಂಭವಾಗುವ ಮೊದಲೇ ರಾಜರ ಆಳ್ವಿಕೆಯಲ್ಲಿ ಶಾಲಾ–ಕಾಲೇಜು, ನೀರಾವರಿ, ಕಾರ್ಖಾನೆಗಳು, ರೈಲ್ವೆ ವ್ಯವಸ್ಥೆಯನ್ನು ಮಾಡಿ ಅಭಿವೃದ್ಧಿಗೆ ಹೊಸ ದಿಕ್ಕು ನೀಡಿದ್ದರು. ದೇವದಾಸಿ, ಬಸವಿ ಪದ್ಧತಿಯಂತಹ ಸಮಾಜದ ಪಿಡುಗನ್ನು ತೊಡೆದು ಹಾಕಿದರು ಎಂದು ಶ್ಲಾಘಿಸಿದರು.

ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೆಲಸಗಳನ್ನು ಸ್ಮರಿಸಿ ಜನರು ಹಾಗೂ ಸರ್ಕಾರ ಜಯಂತಿ ಆಚರಿಸುತ್ತಿರುವುದು ಸಂತೋಷದ ವಿಷಯ. ಅವರ ಕಾಲದಲ್ಲಿ ನಿರ್ಮಾಣವಾದ ಕಾರ್ಖಾನೆಗಳನ್ನು ಅಭಿವೃದ್ಧಿ ಪಡಿಸಿ ಎಂದು ಮನವಿ ಮಾಡಿದ ಅವರು, ನಾಲ್ವಡಿ ಜಯಂತಿ ದಿನದಂದು ರಕ್ತದಾನ ಶಿಬಿರ ನಡೆಸುತ್ತಿರುವುದು ಶ್ಲಾಘನೀಯ ಕೆಲಸ. ಇಂತಹ ಸಮಾಜಮುಖಿ ಕೆಲಸಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದರು.

ಸಾಮಾಜಿಕ ಇತಿಹಾಸಕಾರ ಎ.ಎಸ್.ಧರ್ಮೇಂದ್ರ ಕುಮಾರ್ ಮಾತನಾಡಿ, ರಾಜರ ಕಾಲದಲ್ಲಿ ಮಕ್ಕಳಿಗೆ ಕಡ್ಡಾಯ ಶಿಕ್ಷಣ, ವಯಸ್ಕರ ಶಿಕ್ಷಣಕ್ಕಾಗಿ ರಾತ್ರಿ ವೇಳೆ ಶಿಕ್ಷಣವನ್ನು ಮೊದಲ ಬಾರಿಗೆ ಜಾರಿಗೆ ತಂದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಮುಸ್ಲಿಂ ವಿದ್ಯಾರ್ಥಿನಿಯರು ಶಾಲೆಗೆ ಹೋಗಲು ಗೋಷ ಟಾಂಗಾ, ಕುರುಡರಿಗೆ ಬ್ರೈಲ್ ಲಿಪಿ ಹೀಗೆ ಯಾರೂ ಕೂಡ ಶಿಕ್ಷಣದಿಂದ ವಂಚಿತರಾಗಬಾರದು ಎಂದು ಅವರು ವಿವಿಧ ರೀತಿಯ ಬದಲಾವಣೆಗಳನ್ನು ತಂದರು. ದೇಶಕ್ಕೆ ಮೊಟ್ಟಮೊದಲ ಬಾರಿಗೆ ಮತದಾನ ಪ್ರಕ್ರಿಯೆ ಪರಿಚಯಿಸಿಕೊಟ್ಟರು ಎಂದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಕನ್ನಂಬಾಡಿ ಕಟ್ಟೆ ಕಟ್ಟಿ ಮಂಡ್ಯ ಜಿಲ್ಲೆ ಕೃಷಿಗೆ ನೀರನ್ನು ಹಾಗೂ ಮೈಷುಗರ್ ಕಾರ್ಖಾನೆ ನಿರ್ಮಿಸಿ ಸಕ್ಕರೆ ನಾಡು ಹೆಸರನ್ನು ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಇಡುವಂತೆ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು.

ವೇದಿಕೆಯಲ್ಲಿ ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಜಿಲ್ಲಾಧಿಕಾರಿ ಡಾ. ಹೆಚ್.ಎನ್.ಗೋಪಾಲಕೃಷ್ಣ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಎಸ್ಪಿ ಎನ್.ಯತೀಶ್, ರೆಡ್ ಕ್ರಾಸ್ ಉಪಾಧ್ಯಕ್ಷೆ ಮೀರಾ ಶಿವಲಿಂಗಯ್ಯ, ಮುಖಂಡರಾದ ತಗ್ಗಹಳ್ಳಿ ವೆಂಕಟೇಶ್, ಸುರೇಶ್, ನಟರಾಜ್, ಲಂಕೇಶ್ ಹಾಗೂ ಇನ್ನಿತರರಿದ್ದರು.

ಜನಸೇವೆಗಾಗಿ ಜೀವನವನ್ನೇ ಮುಡಿಪಾಗಿಟ್ಟವರು ನಾಲ್ವಡಿ

ಕವಿ, ಖ್ಯಾತ ವೈದ್ಯ ಡಾ.ಚಂದ್ರಶೇಖರ್ ಶ್ಲಾಘನೆ



ಮಂಡ್ಯ, ಜೂ.4– ಬ್ರಿಟಿಷರ ಆಳ್ವಿಕೆಯಲ್ಲಿ ಅನೇಕ ದೇಶಿ ಅರಸರು ಪ್ರಜೆಗಳನ್ನು ಮರೆತು ಐಷಾರಾಮಿ ಬದುಕಿನಲ್ಲಿ ಮುಳುಗಿದ್ದರೆ, ರಾಜ ಇರುವುದು ಜನಸೇವೆಗಾಗಿ ವಿನಃ ಸುಖ ಜೀವನಕ್ಕಾಗಲ್ಲ ಎನ್ನುವ ಮೂಲಕ ಜನಸೇವೆಗಾಗಿ ಜೀವನವನ್ನೇ ಮುಡಿಪಾಗಿಟ್ಟವರು ನಾಲ್ವಡಿ ಕೃಷ್ಣರಾಜ ಒಡೆಯರು ಎಂದು ಕವಿ ಹಾಗೂ ಖ್ಯಾತ ವೈದ್ಯ ಡಾ.ಚಂದ್ರಶೇಖರ್ ಶ್ಲಾಘಿಸಿದರು.

ಭಾನುವಾರ ನಗರದ ಗಾಂಧಿ ಭವನದಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವ ಸೇನೆ ವತಿಯಿಂದ ಆಯೋಜಿಸಿದ್ದ ಒಡೆಯರ್ ಜಯಂತಿ ಅಂಗವಾಗಿ ನಡೆದ ತೃತೀಯ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನನ್ನ ಆಳ್ವಿಕೆಯಲ್ಲಿ ತಮ್ಮನ್ನು ನಂಬಿರುವ ಪ್ರಜೆಗಳಿಗೆ ಯಾವುದೇ ಸಮಸ್ಯೆಯಾಗಬಾರದೆಂಬ ನಿಟ್ಟಿನಲ್ಲಿ ಪ್ರಜೆಗಳ ಒಳಿತಿಗಾಗಿ ಶ್ರಮಿಸಿದ ರಾಜನಿದ್ದರೆ ಅದು ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದು ಬಣ್ಣಿಸಿದರು.

ಆಗಿನ ಕಾಲದಲ್ಲೇ ಪ್ರಗತಿಪರ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಲು ಮಿಲ್ಲರ್ ಆಯೋಗ ರಚಿಸಿ, ಶೋಷಿತರ ಸುಧಾರಣೆಗೆ ಅನೇಕ ಕಾನೂನು ತಂದ ಸಾಮಾಜಿಕ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರ್. ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಿ, ನಾಮಕಾವಸ್ಥೆಗಾಗಿದ್ದ ಪ್ರಜಾಪ್ರತಿನಿಧಿ ಸಭೆಗೆ ಹೊಸ ರೂಪ ತಂದರು. ಮತದಾನ ಪದ್ಧತಿಯಲ್ಲಿ ಸುಧಾರಣೆ, ಮಹಿಳೆಯರಿಗೂ ಮತದಾನ ಹಕ್ಕು, ಸಣ್ಣಪುಟ್ಟ ಪಟ್ಟಣಗಳ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳ ರಚನೆ, ಹಳ್ಳಿಗಳಲ್ಲಿ ಮೊದಲ ಬಾರಿಗೆ ಗ್ರಾಪಂ ರಚನೆ, ಗ್ರಾಮ ನೈರ್ಮಲ್ಯೀಕರಣ, ವೈದ್ಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳ ಅಭಿವೃದ್ಧಿಗೆ ಕಾರಣರಾದರು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಪ್ರತಿಯೊಂದು ಸಮಾಜಮುಖಿ ಕೆಲಸಕ್ಕೆ ಪ್ರಸ್ತುತ ಪ್ರತಿಯೊಬ್ಬರಿಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾದರಿಯಾಗಿದ್ದಾರೆ. ಅವರ ಕೊಡುಗೆಯಿಂದ ಮಂಡ್ಯ ಜಿಲ್ಲೆ ನೀರಾವರಿ, ಕೈಗಾರಿಕೆ ಸೇರಿದಂತೆ ಇನ್ನಿತರೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಂಡಿದೆ. ನಾಲ್ವಡಿ ಅವರು ನಮ್ಮನ್ನಗಲಿ ಹಲವು ದಶಕಗಳೇ ಕಳೆದಿದ್ದರೂ, ನಾವು ಅವರನ್ನು ಸ್ಮರಿಸುತ್ತೇವೆ. ಅದಕ್ಕೆ ಪ್ರಮುಖ ಕಾರಣ ಅವರ ಅಭಿವೃದ್ಧಿ ಕೆಲಸಗಳು, ಕೆಆರ್‌ಎಸ್, ಮೈಷುಗರ್ ಸಕ್ಕರೆ ಕಾರ್ಖಾನೆ ನಿರ್ಮಾಣ. ಅವರಿಂದ ನಮ್ಮ ಜಿಲ್ಲೆ ಸಂಬದ್ಧರಿತವಾಗಿದೆ ಎಂದು ಬಣ್ಣಿಸಿದರು.

ಮಾಜಿ ಶಾಸಕ ಎಂ.ಶ್ರೀನಿವಾಸ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರನ್ನು ಸ್ಮರಿಸುವುದು ನಮ್ಮ ಕರ್ತವ್ಯ ಜಿಲ್ಲೆಯ ಜನ ಕೃಷಿ, ನೀರಾವರಿಯಲ್ಲಿ ಸಮೃದ್ಧ ಜೀವನ ನಡೆಸುತ್ತಿದ್ದರೆ ಅದಕ್ಕೆ ನಾಲ್ವಡಿ ಅವರೇ ಕಾರಣ. ಇಂದಿನ ರಾಜಕಾರಣಿಗಳಿಗೆ, ಯುವಕರಿಗೆ ನಾಲ್ವಡಿ ಮಾದರಿಯಾಗಿದ್ದಾರೆ. ಅಂತಹ ರಾಜಮನೆತನ ನಮ್ಮ ಸಂಸ್ಥಾನ ಆಳ್ವಿಕೆ ಮಾಡದಿದ್ದರೆ ಮಂಡ್ಯ ಜಿಲ್ಲೆ ನಿಜಕ್ಕೂ ಬರಡಾಗುತ್ತಿತ್ತು ಅವರ ಕೊಡುಗೆ ಅನನ್ಯ ಎಂದು ಶ್ಲಾಘಿಸಿದರು.

ರೇಷ್ಮೆ ತಜ್ಞ ಕಿರಣಗೆರೆ ಜಗದೀಶ್ ಮಾತನಾಡಿದರು. ಸಮಾರಂಭದಲ್ಲಿ ಜಿಲ್ಲೆಯ ಖ್ಯಾತ ವೈದ್ಯರಾದ ಡಾ.ಸತ್ಯನಾರಾಯಣರಾವ್, ಡಾ.ಪುಟ್ಟಸ್ವಾಮಿಗೌಡ, ಡಾ.ಸೂರ್ಯನಾರಾಯಣ ಶರ್ಮಾ, ಡಾ.ಮಾದೇಶ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ವೈದ್ಯರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದಲ್ಲದೇ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 15 ಮಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಡರತ್ನ ಪ್ರಶಸ್ತಿ, ಐವರಿಗೆ ಕಲಾರತ್ನ ಪ್ರಶಸ್ತಿ ಹಾಗೂ ತಲಾ ಐದು ಮಂದಿಗೆ ಕಾವ್ಯಶ್ರೀ ಹಾಗೂ ಕವಿರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷ ಡಾ.ಸಿ.ಕೆ.ರಾಮೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ಎಚ್.ಎಸ್. ಮುದ್ದೇಗೌಡ, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ, ಪ್ರಧಾನ ಕಾರ್ಯದರ್ಶಿ ಮಂಗಲ ಶಿವಣ್ಣ, ಉಪಾಧ್ಯಕ್ಷರಾಗಿಮುದ್ದನಹಳ್ಳಿ ನಾಗೇಶ್ ಉಪಸ್ಥಿತರಿದ್ದರು.

ಸಫಾರಿ ವೇಳೆ ಆನೆಗಳ ಹಿಂಡು ದಾಳಿ: ವಿಚಾರವಾದಿ ಕೆ.ಎಸ್. ಭಗವಾನ್ ಅಪಾಯದಿಂದ ಪಾರು

ಕೆ.ಗುಡಿ ವನ್ಯಜೀವಿ ಸಫಾರಿಯಲ್ಲಿ ಘಟನೆ



ಚಾಮರಾಜನಗರ, ಜೂ.4– ಸಫಾರಿ ವೇಳೆ ಆನೆಗಳ ಹಿಂಡೊಂದು ವಿಚಾರವಾದಿ ಕೆ.ಎಸ್. ಭಗವಾನ್ ಮತ್ತು ಅವರ ತಂಡವಿದ್ದ ಸಫಾರಿ ಜೀಪನ್ನು ಅಟ್ಟಾಡಿಸಿದ್ದು, ಕೂದಲೆಳೆ ಅಂತರದಲ್ಲಿ ಪಾರಾಗಿರುವ ಘಟನೆ ಚಾಮರಾಜನಗರ ತಾಲೂಕಿನ ಕೆ ಗುಡಿಯಲ್ಲಿ ಸಂಭವಿಸಿದೆ

ಕೆ.ಗುಡಿ ವನ್ಯಜೀವಿ ಸಫಾರಿಗೆಂದು ವಿಚಾರವಾದಿ ಕೆ.ಎಸ್. ಭಗವಾನ್, ದಲಿತ ಮುಖಂಡ ಪಾಪು ಹಾಗೂ ಇನ್ನಿತರರು ತೆರಳಿದ್ದರು. ಈ ವೇಳೆ ದಾರಿಯಲ್ಲಿ ಕಾಣಿಸಿದ ಪ್ರಾಣಿಗಳನ್ನು ತಮ್ಮ ಮೊಬೈಲ್ ಮತ್ತು ಕ್ಯಾಮರಾದಲ್ಲಿ ಸೆರೆಹಿಡಿಯುತ್ತಿದ್ದರು ಎನ್ನಲಾಗಿದೆ. ಈ ವೇಳೆ ಮರಿ ಜೊತೆ ಇದ್ದ ಆನೆಗಳ ಹಿಂಡು ದಾಳಿ ಮಾಡಲು ಮುಂದಾಯಿತು. ತನ್ನ ಜೊತೆ ಇರುವ ಮರಿ ಆನೆಗೆ ಅಪಾಯ ತರಬಹುದೆಂಬ ಕಾರಣದಿಮದ ಆನೆಗಳ ಹಿಂಡು ಜೀಪನ್ನು ಅಟ್ಟಾಡಿಸಿಕೊಂಡು ಬೆನ್ನು ಹತ್ತಿತ್ತು.

ಈ ವೇಳೆ ಚಾಲಕ ತನ್ನ ಸಮಯಪ್ರಜ್ಞೆಯಿಂದ ರಿವರ್ಸ್ ಗೇರಲ್ಲಿ ಜೀಪನ್ನು ಚಲಾಯಿಸಿ ಅಪಾಯದಿಂದ ಪಾರು ಮಾಡಿದ್ದಾರೆ. ಹಿಂಡಿನಲ್ಲಿ ಒಟ್ಟು 6 ಆನೆಗಳಿದ್ದವು. ಅದೃಷ್ಟವಶಾತ್ ಜೀಪ್ ಕಂದಕಕ್ಕೆ ಬೀಳಲಿಲ್ಲ, ಅದೊಂದು ಭಯಾನಕ ಅನುಭವ ಎಂದು ದಲಿತ ಮುಖಂಡ ಪಾಪು ತಿಳಿಸಿದ್ದಾರೆ.

ಮಣಿ ನಿಧನ



ಚಾಮರಾಜನಗರ, ಜೂ.4– ತಾಲೂಕು ಹರವೆ ಗ್ರಾಮದ ಬಿ.ಮಾದಪ್ಪನವರ ಧರ್ಮಪತ್ನಿ ಹಾಗೂ ಗ್ರಾಮ ಪಂಚಾಯತ್ ಮಾಜಿ ಸದಸ್ಯೆ ಮಣಿ (58) ಭಾನುವಾರ ನಿಧನರಾಗಿದ್ದಾರೆ,

ಮೃತರು ಪತಿ ಬಿ.ಮಾದಪ್ಪ ಪುತ್ರ ಜೆಸಿಬಿ ಸಂತೋಷ್ ಮತ್ತು ಪುತ್ರಿ ಶೀಲಾ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಹರವೆಯಲ್ಲಿ ನಡೆಯಲಿದೆ.

ಚಾ.ನಗರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

ನಾಲ್ವಡಿ ಕೃಷ್ಣರಾಜರ ಪುತ್ಥಳಿಗೆ ಅಂಬೇಡ್ಕರ್ ಅನುಯಾಯಿಗಳ ಮಹಾ ಒಕ್ಕೂಟದಿಂದ ಮಾಲಾರ್ಪಣೆ



ಚಾಮರಾಜನಗರ, ಜೂ.4– ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಪ್ರಯುಕ್ತ ನಗರದ ಪ್ರವಾಸಿ ಮಂದಿರದ ಮುಂಭಾಗದಲ್ಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಡಾ.ಬಿ.ಆರ್.ಅಂಬೇಡ್ಕರ್ ಅನುಯಾಯಿಗಳು ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಬಿಎಸ್ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹ.ರಾ. ಮಹೇಶ್ ಮಾತನಾಡಿ, ಮೈಸೂರು ಒಡೆಯರ ಆಡಳಿತದಲ್ಲಿ ಅಗ್ರಗಣ್ಯ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ಆದ್ಯತೆ ನೀಡಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಏಷ್ಯಾ ಖಂಡದಲ್ಲಿಯೇ ಮೊದಲ ಬಾರಿಗೆ ದಲಿತ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯವನ್ನು ಜಾರಿ ಮಾಡಿ, ಶಿಕ್ಷಣ ಕಲಿಯಲು ಅವಕಾಶ ಮಾಡಿಕೊಟ್ಟಿದ್ದರು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತದಲ್ಲಿ ಮೈಸೂರು ಸಂಸ್ಥಾನದ ಪ್ರಗತಿಗೆ ಹೊಸ ಇತಿಹಾಸವನ್ನು ಸೃಷ್ಟಿ ಮಾಡಿದರು. ಆ ಕಾಲದಲ್ಲಿ ಅವರು ತೆಗೆದುಕೊಂಡ ದಿಟ್ಟ ನಿರ್ಧಾರದಿಂದ ಶೂದ್ರರು ಸ್ವಾಭಿಮಾನಿಗಳಾಗಿ ಬದುಕು ರೂಪಿಸಿಕೊಳ್ಳಲು ಸಾಧ್ಯವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ ಅವರ 38 ವರ್ಷಗಳ ಕಾಲ ದಕ್ಷ ಆಡಳಿತ ನಡೆಸಿ, ಪ್ರಜೆಗಳಿಂದ ರಾಜರ್ಷಿ ಬಿರುದು ಪಡೆದುಕೊಂಡರು. ತಮ್ಮ ಸಂಸ್ಥಾನದ ಏಳ್ಗೆಗಾಗಿ, ತಮ್ಮ ಪ್ರಜೆಗಳ ಬದುಕಿಗಾಗಿ ತಮ್ಮ ಇಡೀ ಜೀವನವನ್ನು ಮುಡಾಗಿಟ್ಟಿದ್ದ ಏಕೈಕ ಮಹಾರಾಜರು ಎಂದು ಬಣ್ಣಿಸಿದರು.

ಆಡಳಿತದಲ್ಲಿ ಕನ್ನಡನಾಡಿಗೆ ನೀಡಿದ ಕೊಡುಗೆಗಳು ಅಪಾರ. ಮೈಸೂರು ಮೆಡಿಕಲ್ ಕಾಲೇಜು ಸ್ಥಾಪನೆ, ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣ ಮಾಡುವ ಮೂಲಕ ಮೈಸೂರು ಭಾಗದ ರೈತರಿಗೆ ನೀರಾವರಿ ಕಲ್ಪಿಸಿಕೊಟ್ಟರು. ಕಡ್ಡಾಯ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಇಂಥ ಮಹಾನ್ ರಾಜರಾದ ನಾಲ್ವಡಿ ಮಹಾರಾಜರು ಜಯಂತಿಯನ್ನು ಆಚರಣೆ ಮಾಡುವ ಮೂಲಕ ಅವರ ಸೇವೆಯನ್ನು ಸ್ಮರಿಸಿಕೊಳ್ಳೋಣ ಎಂದರು.

1939ರಲ್ಲಿ ಹಿರೇ ಭಾಸ್ಕರ್ ಅಣೆಕಟ್ಟು ನಿರ್ಮಾಣ, ಮಹಾತ್ಮಾಗಾಂಧಿ ವಿದ್ಯುತ್ ಉತ್ಪಾದಾನ ಘಟಕ ಆರಂಭ ಬಾಲ್ಯ ವಿವಾಹ ಪದ್ಧತಿ ರದ್ದು, ಮಹಳೆಯರ ಶಿಕ್ಷಣಕ್ಕೆ ಒತ್ತು, 1936ರಲ್ಲಿ ಮೈಸೂರು ಲ್ಯಾಂಪ್ ನಿರ್ಮಾಣ, ಮೈಸೂರಿನಲ್ಲಿ ವಾಣಿ ವಿಲಾಸ ಮಕ್ಕಳ ಆಸ್ಪತ್ರೆ ನಿರ್ಮಾಣ, ಕೆ.ಆರ್. ಮಿಲ್ ಆರಂಭ, ಬೆಂಗಳೂರಿನಲ್ಲಿ ಟೌನ್ ಹಾಲ್ ನಿರ್ಮಾಣ, ಸಂತಾಫಿಲೋಪಿನ ಚರ್ಚ್ ಉದ್ಘಾಟನೆ, ಬೆಂಗಳೂರಿನಲ್ಲಿ ಕೆ.ಆರ್. ಮಾರುಕಟ್ಟೆ ಸ್ಥಾಪನೆ, ಮಂಡ್ಯದಲ್ಲಿ ಮೈಸೂರು ಸಕ್ಕರ ಕಾರ್ಖಾನೆ ಸ್ಥಾಪನೆ, ನಿಮ್ಸ್ ಆಸ್ಪತ್ರೆ ಸ್ಥಾಪನೆ, ಕೃಷ್ಣರಾಜನಗರ ಸ್ಥಾಪನೆ, ಭದ್ರಾವತಿ ಕಬ್ಬಿಣ ಮತ್ತು ಹುಕ್ಕಿನ ಕಾರ್ಖಾನೆ ಆರಂಭ ಮೈಸೂರಿನಲ್ಲಿ ಲಲಿತ್ ಮಹಲ್ ಸ್ಥಾಪನೆ, ಮೈಸೂರಿನಲ್ಲಿ ಯುವ ರಾಜ ಕಾಲೇಜು ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ, ಭಾರತ ಮೊದಲ ಬಾಯ್ಸ್ ಸ್ಕೌಟ್ಸ್ ಸ್ಥಾಪನೆ, ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ, ಸೇಟ್ ಬ್ಯಾಂಕ್ ಆಫ್ ಮೈಸೂರು ಸ್ಥಾಪನೆ, ಏಷ್ಯಾದಲ್ಲಿಯೇ ಪ್ರಥಮ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ ಮಾಡಿದ ಕೀರ್ತಿ ನಾಲ್ವಡಿ ಮಹಾರಾಜರಿಗೆ ಸಲ್ಲುತ್ತದೆ. ಕಾರ್ಯಕ್ರಮದಲ್ಲಿ ವಕೀಲರಾದ ಪ್ರಸನ್ನಕುಮಾರ್ ಬಿ. ರಾಮಸಮುದ್ರ ಪುಟ್ಟಸ್ವಾಮಿ, ಸಿ.ಕೆ ಮಂಜುನಾಥ್, ಸಿ.ಎಂ.ಕೃಷ್ಣಮೂರ್ತಿ, ಶಿವಕುಮಾರ್, ಎಸ್.ಪಿ. ಮಹೇಶ್, ಬಸವಣ್ಣ ವಾಸು, ಬಾಬು, ರಾಜೇಂದ್ರ, ಶೇಷಣ್ಣ, ಮಹ ದೇವಸ್ವಾಮಿ, ಗಣೇಶ್ ಪ್ರಸಾದ್ ಇತರರಿದ್ದರು.

ಜಿಲ್ಲಾಸ್ಪತ್ರೆಯ ಫ್ಯಾನ್‌ಗಳು ದುರಸ್ತಿ!

ಸೆಕೆಯ ಆರ್ಭಟಕ್ಕೆ ನಲುಗಿದ್ದ ರೋಗಿಗಳು ನಿರಾಳ

ಚಾಮರಾಜನಗರ, ಜೂ4(ಎಸ್‌ಎಸ್)– ಚಾಮರಾಜನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕಳೆದೊಂದು ತಿಂಗಳಿನಿಂದ ಕೆಟ್ಟು ನಿಂತಿದ್ದ ಫ್ಯಾನ್‌ಗಳನ್ನು ದುರಸ್ತಿಪಡಿಸಲಾಗಿದೆ.

ಬೇಸಿಗೆಯ ಬಿಸಿಲಿನ ತಾಪ ಹೆಚ್ಚಾಗಿ ಆಸ್ಪತ್ರೆಯಲ್ಲಿನ ರೋಗಿಗಳು ಸೆಕೆಯ ಆರ್ಭಟದಿಂದ ಕಂಗೆಟ್ಟಿದ್ದರು. ಇದಕ್ಕಾಗಿ ಕೆಲವು ರೋಗಿಗಳ ಸಂಬಂಧಿಕರು ಆಸ್ಪತ್ರೆಗೆ ಟೇಬಲ್ ಫ್ಯಾನ್‌ಗಳನ್ನು ತೆಗೆದು ಕೊಂಡು ಹೋಗುತ್ತಿದ್ದರು. ಈ ಬಗ್ಗೆ ಮೇ 30ರಂದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ 'ಚಾಮರಾಜನಗರ ಜಿಲ್ಲಾಸ್ಪತ್ರೆ ಎಂಬ ನರಕ!' ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟಿಸಲಾಗಿತ್ತು.

'ಮೈಸೂರು ಮಿತ್ರ' ವರದಿಯಿಂದ ಎಚ್ಚೆತ್ತ ಅಧಿಕಾರಿಗಳು


ಚಾಮರಾಜನಗರ ಜಿಲ್ಲಾಸ್ಪತ್ರೆ ಎಂಬ ನರಕ!

ಮಿತ್ರನ ವರದಿಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ದೌಡಾಯಿಸಿ, ಆಸ್ಪತ್ರೆಯ ಸಿಬ್ಬಂದಿ, ಆಡಳಿತ ವರ್ಗವನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಬಳಿಕ ಆಸ್ಪತ್ರೆಯ ಎಲ್ಲಾ ಒಳ ರೋಗಿಗಳ ವಾರ್ಡ್‌ಗಳಲ್ಲಿ ಕೆಟ್ಟ ನಿಂತಿದ್ದ ಫ್ಯಾನ್‌ಗಳನ್ನು ದುರಸ್ತಿಪಡಿಸಲಾಗಿದ್ದು, ರೋಗಿಗಳ ಉಪಯೋಗಕ್ಕೆ ನೀಡಲಾಗುತ್ತಿದೆ. ಇದರಿಂದ ಸೆಕೆಯಿಂದ ಬಳಲುತ್ತಿದ್ದ ರೋಗಿಗಳು ನಿಟ್ಟುಸಿರು ಬಿಟ್ಟಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಫ್ಯಾನ್ ಗಳು ಇಲ್ಲದೆ ಇರುವುದರಿಂದ ತೀವ್ರ ತೊಂದರೆ ಯಾಗಿತ್ತು. 'ಮೈಸೂರು ಮಿತ್ರ'ನಲ್ಲಿ ಈ ಬಗ್ಗೆ ವರದಿ ಮಾಡಿದ ಹಿನ್ನೆಲೆಯಲ್ಲಿ ಆಸ್ಪತ್ರೆಯ ಆಡಳಿತ ವರ್ಗ ಎಚ್ಚೆತ್ತು ಎಲ್ಲಾ ಫ್ಯಾನ್‌ಗಳನ್ನು ದುರಸ್ತಿಪಡಿಸಿದ್ದಾರೆ. ಹೀಗಾಗಿ 'ಮಿತ್ರ'ನಿಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದು ಆಸ್ಪತ್ರೆಯ ರೋಗಿಯೊಬ್ಬರ ಸಂಬಂಧಿ ಹೇಮಂತ್ ಕುಮಾರ್ ತಿಳಿಸಿದರು.


ಜಿಲ್ಲಾಸ್ಪತ್ರೆಯಲ್ಲಿ ಸ್ವಚ್ಛತೆಗೆ ಇಲ್ಲದಂತಾಗಿದೆ. ಆಸ್ಪತ್ರೆಯ ಕೆಲವು ವಾರ್ಡ್‌ಗಳ ಶೌಚಾಲಯದಲ್ಲಿ ಅನೈರ್ಮಲ್ಯ ತಾಂಡವವಾಡುತ್ತಿದೆ. ರಾತ್ರಿ ವೇಳೆ ವಿಪರೀತ ಸೊಳ್ಳೆಗಳು ಇದ್ದು, ರೋಗಿಗಳಿಗೆ ತೊಂದರೆಯಾಗುತ್ತಿದ್ದು, ಆಸ್ಪತ್ರೆಯ ಆಡಳಿತ ವರ್ಗ ಸ್ವಚ್ಛತೆಯ ಬಗ್ಗೆಯೂ ಹೆಚ್ಚಿನ ಆದ್ಯತೆ ನೀಡಬೇಕು. ಬಡರೋಗಿಗಳಿಗೆ ಉತ್ತಮ ಆರೋಗ್ಯ ಸೌಲಭ್ಯ ದೊರೆಯು ವಂತಾಗಬೇಕು ಎನ್ನುವುದು ಸಾರ್ವಜನಿಕರ ಒತ್ತಾಯವಾಗಿದೆ.



ಹಾಡಹಗಲೇ ಮಹಿಳೆ ಮೊಬೈಲ್ ಕಸಿದ ಖದೀಮರು

ಸಿಸಿ ಕ್ಯಾಮರಾದಲ್ಲಿ ದೃಶ್ಯ ಸೆರೆ





ಪಾದಚಾರಿ ಮಹಿಳೆಯಿಂದ ಮೊಬೈಲ್ ಕಿತ್ತುಕೊಂಡು ಪರಾರಿಯಾದ ಖದೀಮರು.

ಮೈಸೂರು, ಜೂ.4(ಎಸ್‌ಬಿಡಿ)– ಸ್ಕೂಟರ್‌ನಲ್ಲಿ ಬಂದ ಖದೀಮರು ಮಹಿಳೆಯ ಮೊಬೈಲ್ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಕಲ್ಯಾಣಗಿರಿಯಲ್ಲಿ ಭಾನುವಾರ ಹಾಡಹಗಲೇ ನಡೆದಿದೆ.

ಕಲ್ಯಾಣಗಿರಿ ಕೆಹೆಚ್‌ಬಿ ಕಾಲೋನಿ, ಡಾ. ರಾಜ್‌ಕುಮಾರ್ ರಸ್ತೆ, ನಾಲ್ಕನೇ ಕ್ರಾಸ್ ವಾಟರ್ ಟ್ಯಾಂಕ್ ಬಳಿ ಬೆಳಗ್ಗೆ 9.34ರ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು, ಖದೀಮರ ದುಷ್ಕೃತ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಅಜೀಜ್‌ಸೇಠ್‌ನಗರದ ಇಬ್ಬರು ಮಹಿಳೆಯರು ಡಾ.ರಾಜ್‌ಕುಮಾರ್ ರಸ್ತೆಯಲ್ಲಿನ ಬಸ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುತ್ತಿದ್ದರು. ಅವರಲ್ಲಿ ಓರ್ವ ಮಹಿಳೆ ಮೊಬೈಲ್‌ನಲ್ಲಿ ಮಾತನಾಡುತ್ತಾ ಬರುತ್ತಿದ್ದರು. ಅವರು ವಾಟರ್ ಟ್ಯಾಂಕ್ ಕಡೆಯಿಂದ ಬಂದು 4ನೇ ಕ್ರಾಸ್‌ಗೆ ತಿರುಗಿ ಸ್ವಲ್ಪ ದೂರ ಕ್ರಮಿಸುವಷ್ಟರಲ್ಲಿ ಎದುರಿನಿಂದ ಸ್ಕೂಟರ್‌ನಲ್ಲಿ ಬಂದ ಖದೀಮರು ಏಕಾಏಕಿ ಮಹಿಳೆ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ತಿರುವಿನಲ್ಲಿ ಪರಾರಿಯಾಗಿದ್ದಾರೆ. ಈ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸ್ಪಷ್ಟವಾಗಿ ಸೆರೆಯಾಗಿದೆ.

ಮೊಬೈಲ್ ಕಳೆದುಕೊಂಡ ಮಹಿಳೆ, 4ನೇ ಕ್ರಾಸ್‌ನಲ್ಲಿರುವ ನಗರ ಪಾಲಿಕೆ ಮಾಜಿ ಸದಸ್ಯ ಶೌಖತ್ ಪಾಷಾ ಅವರ ಮನೆ ಬಳಿ ಬಂದು ಘಟನೆ ಬಗ್ಗೆ ತಿಳಿಸಿದರು. ಕೂಡಲೇ ಶೌಖತ್ ಪಾಷಾ ಅವರು ಉದಯಗಿರಿ ಪೊಲೀಸ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಸುನೀಲ್ ಅವರಿಗೆ ಕರೆ ಮಾಡಿ ಮಾಹಿತಿ ತಿಳಿಸಿದ್ದಾರೆ. ಐದಾರು ನಿಮಿಷದಲ್ಲಿ ಮತ್ತೋರ್ವ ಸಬ್‌ಇನ್‌ಸ್ಪೆಕ್ಟರ್ ನಾಗರಾಜ ನಾಯ್ಕ ಅವರು ಸ್ಥಳಕ್ಕಾಗಮಿಸಿ ಮಾಹಿತಿ ಪಡೆದುಕೊಂಡರು. ಮನೆಯೊಂದರಲ್ಲಿ ಅಳವಡಿಸಿದ್ದ ಹೆಚ್‌ಡಿ ಸಿಸಿಟಿವಿ ಕ್ಯಾಮರಾದ ದೃಶ್ಯಾವಳಿ ಪರಿಶೀಲಿಸಿದಾಗ ಖದೀಮರ ದುಷ್ಕೃತ್ಯ ಅದರಲ್ಲಿ ಸೆರೆಯಾಗಿತ್ತು.

ಮೊಬೈಲ್ ಕಳೆದುಕೊಂಡ ಮಹಿಳೆ ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಖದೀಮರ ಪತ್ತೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.



ಹುಟ್ಟುಹಬ್ಬ ಆಚರಿಸಿಕೊಂಡ ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಹಾಗೂ ಇಂಡಿಯನ್ ಟಿವಿ ಚೇರ್ಮನ್ ಎಸ್.ಬಸವರಾಜು ಅವರನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀಸೋಮನಾಥಶ್ರೀಗಳು ಆಶೀರ್ವದಿಸಿ, ಸನ್ಮಾನಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

APARTMENT FOR SALE AT SANKALP TEMPLE TREES
2 BHK Flat, 2 Bath, North Facing at Vijayanagar 4th Stage, Ring Road. All Luxury Amenities
Contact: 8105591765

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಶ್ರೀ ಗೌರಿಶಂಕರ ಟ್ರಾವೆಲ್ಸ್
28-6-2023 (4 ದಿನ): ಭೀಮಾಶಂಕರ, ಘೃಷ್ಣೇಶ್ವರ, ಶಿರಡಿ, ನಾಸಿಕ್, ತ್ರಯಂಬಕೇಶ್ವರ, ಎಲ್ಲೋರ ಇತ್ಯಾದಿ. 16-7-23 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್, ಕೋಟಿಲಿಂಗ. 12-8-23 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಗಯಾ, ಬಾಬಾಬೈದ್ಯ ನಾಥ್, ಇತ್ಯಾದಿ.
ವಿಮಾನ / ಎಸಿ ಬಸ್ / ಊಟ / ರೂಂ.
Mob: 9620002114

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ನಿಮ್ಮ ಹೊಲಿಗೆ ಯಂತ್ರ ಕೆಟ್ಟಿದೆಯೇ?
ನಮ್ಮಲ್ಲಿ ಎಲ್ಲಾ ತರಹದ ಹೊಲಿಗೆ ಯಂತ್ರಗಳ ರಿಪೇರಿ ಮತ್ತು ಎಕ್ಸ್‌ಚೇಂಜ್ ಮಾಡಲಾಗುತ್ತದೆ.
ಇಂದೇ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್
#22/2, ಚಂದ್ರಗುಪ್ತ ರಸ್ತೆ, ಸಬರ್ಬ್ ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು
6360737581, 9620476665
0821-2591111

WANTED
Maths, PE, Social Science, Art and Craft, English and Computer teaching staff for reputed institution.
Send your resume through WhatsApp / Message.
Contact no:
8971577685, 9980631121

ಬೇಕಾಗಿದ್ದಾರೆ
ಬಿಲ್ಲಿಂಗ್, ಅಕೌಂಟ್ಸ್, ಅಂಗಡಿ ಕೆಲಸ ಹಾಗೂ ಡೆಲಿವರಿಗಳಿಗೆ ಕೆಲಸದವರು ಬೇಕಾಗಿದ್ದಾರೆ. ಅಂಗಡಿ ಕೆಲಸದವರಿಗೆ ದ್ವಿಚಕ್ರವಾಹನ ಡ್ರೈವಿಂಗ್ ಲೈಸನ್ಸ್ ಕಡ್ಡಾಯ ಹಾಗೂ ಮೈಸೂರು ನಗರ ನಿವಾಸಿಗಳಿಗೆ ಆದ್ಯತೆ ನೀಡಲಾಗುತ್ತದೆ.
ಶ್ರೀನಿವಾಸ ಇಮೇಜ್ ಪ್ರಾಡಕ್ಟ್ಸ್
ಮೋರ್ ಮೆಗಾ ಮಾರ್ಟ್ ಹತ್ತಿರ, ಶಿವರಾಂಪೇಟೆ, ಮೈಸೂರು
9902902530

ಬೇಕಾಗಿದ್ದಾರೆ
ವಿ.ವಿ. ಮೊಹಲ್ಲಾದಲ್ಲಿ ವಾಸವಿರುವ 1 ವರ್ಷದ ಮಗು ನೋಡಿಕೊಳ್ಳಲು ಮನೆಯಲ್ಲಿ ಇರುವವರು ಅಥವಾ ಬಂದು ಹೋಗುವವರು ಬೇಕಾಗಿದ್ದಾರೆ. ಗೋಕುಲಂ, ಪಡುವಾರಹಳ್ಳಿ, ಯಾದವಗಿರಿ ಯಲ್ಲಿರುವವರಿಗೆ ಹೆಚ್ಚು ಆದ್ಯತೆ.
9916623340

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

AMAZE
SUNZONE SOLAR SYSTEM
VM Double Road, Kuvempunagar, Mysuru
9845175443

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಒಟಿ 15200/- to 86000/-
9740733021
9535028750

Alpha School of Fashion Design, Mysore
Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE
Alpha School of Fashion Design, No.66/2, Manandavadi Road, Near Ring Road Signal Junction, Srirampura, Mysore
782 993 7469

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 30 ರಿಂದ 50ರವರೆಗೆ ಮೇಟಗಳ್ಳಿ, ಬೆಳವಾಡಿ, ಜೆ.ಪಿ.ನಗರ ಹಾಗೂ ಮೈಸೂರಿನ ಸುತ್ತಮುತ್ತ ಇರುವ ಪ್ರದೇಶಗಳಿಗೆ.
9538886328, 9538886326,
9108100117

ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. (Unmarried)
ವಿಚಾರಿಸಿ:
ಚೇತನ ಬುಕ್ ಹೌಸ್
ಎನ್.ಎಸ್.ರಸ್ತೆ, ಮೈಸೂರು

ಮನೆ ಮಾರಾಟಕ್ಕಿದೆ
30X40 Corner G/F, F/F, S/F ಟೀಚರ್ಸ್ ಲೇಔಟ್ & ಆಲನಹಳ್ಳಿ ಲೇಔಟ್
IPS ಲೇಔಟ್ 3ನೇ ಹಂತ, Near Ring Road N/F Total Sqft 4300, 40x95 ನಿವೇಶನ ಮಾರಾಟಕ್ಕಿದೆ
9880929323

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು 35 ರಿಂದ 50 ರವರೆಗೆ ಮೊದಲ ಆದ್ಯತೆ.
ಸಂಬಳ: 12,000/–
8892258814

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಮೈತ್ರಿ ಟ್ರಾವೆಲ್ಸ್
ಶಿರಡಿ ಪ್ರವಾಸ 23 ಜೂನ್ 3 ದಿನಗಳು ಶನಿಸಿಂಗನಾಪುರ, ಘೃಷ್ಣೇಶ್ವರ, ಜ್ಯೋತಿರ್ಲಿಂಗ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ.
6360422209, 9382421499

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 23-6-23, ಪುರಿ ಜಗನ್ನಾಥ ಪ್ರವಾಸ 4 ದಿನಗಳು 12-7-23, ನೇಪಾಳ ಪಶುಪತಿನಾಥ ಪ್ರವಾಸ 9 ದಿನಗಳು 13-7-23. ಅಮರನಾಥ ಯಾತ್ರ ಪ್ರವಾಸ 10 ದಿನಗಳು. ಮಧ್ಯಪ್ರದೇಶ ಪ್ರವಾಸ 3-7-23 – 2 ಜ್ಯೋತಿರ್ಲಿಂಗದೊಂದಿಗೆ 4 ದಿನಗಳು.
9008381022, 9019462508

ಬೇಕಾಗಿದ್ದಾರೆ
ಮಾಂಟೆಸ್ಸರಿ ಶಿಕ್ಷಕಿಯರು ಮಧ್ಯಮ & ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮಹಿಳಾ ಬೋಧಕರು
9663039220

SITE FOR SALE
Size 30x50 Price Rs. 1800/- Sqft.
Yash Garden
Nanjangudu Main Road Near Airport, Kadakola
8884001262
9945355519

ಬ್ರಾಹ್ಮಣ ವಧು ಬೇಕಾಗಿದೆ
28 ವರ್ಷದ ಎಂ.ಕಾಂ ಓದಿ ಆಡಿಟರ್ ಕಛೇರಿ ಶಿವಮೊಗ್ಗದಲ್ಲಿ ಕೆಲಸದಲ್ಲಿರುವ ಸ್ವಂತ ಮನೆ 2 ಎಕರೆ ಜಮೀನು ಹೊಂದಿರುವ ವರನಿಗೆ ಯಾವುದೇ ಬ್ರಾಹ್ಮಣ ಕಡುಬಡತನದ SSLC ಓದಿರುವ ವಧು ಬೇಕಾಗಿದೆ.
ಮದುವೆಯ ಸಂಪೂರ್ಣ ಖರ್ಚು ವೆಚ್ಚಗಳು ವರನಮನೆಯಿಂದಲೇ ಮಾಡಲಾಗುತ್ತದೆ ಮಧ್ಯವರ್ತಿಗಳಿಗೆ ಅವಕಾಶವಿಲ್ಲ ವಧುವಿನ ತಂದೆ ತಾಯಿಗಳು ಮಾತ್ರ ನೇರವಾಗಿ ಕರೆ ಮಾಡತಕ್ಕದ್ದು (ಬಡತನದ ವಧುವಿಗೆ ಮೊದಲು ಆದ್ಯತೆ)
9731921598

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಪೋಸ್ಟ್‌ಗಳಿಗೆ SSLC, PUC, ITI, Degree ಆಗಿರುವ ಉತ್ಸಾಹಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ 14,000–30,000/- (ESI+PF+OT)
9164052361, 9035143190

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 40 ವರ್ಷ
ವಿದ್ಯಾರ್ಹತೆ : 7 ರಿಂದ ಪಿಯುಸಿ
9480404036

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು): ಆನಂದೂರ್, ಲಕ್ಷ್ಮೀಪುರ, ಪಾಲಳ್ಳಿ, ಬಂಬೂಬಜಾರ್, ಕೆ.ಡಿ.ರೋಡ್, ಚಾಮುಂಡಿಪುರಂ, ನಾಡನಹಳ್ಳಿ (ವಿದ್ಯಾವಿಕಾಸ್ ಕಾಲೇಜ್), ಹೆಬ್ಬಾಳ್ ಹತ್ತಿರ, ಫಾರಂನಲ್ಲಿ ಗಾರ್ಡನಿಂಗ್ ಕೆಲಸಕ್ಕೆ ಫ್ಯಾಮಿಲಿ ಬೇಕಾಗಿದ್ದಾರೆ. ಹೆಚ್.ಡಿ.ಕೋಟೆ ರೋಡ್, (ಝೀ ಸ್ಕೂಲ್ ಹತ್ತಿರ)
8310098788, 6361439167

MUDA SITE FOR SALE
Site no.: 247, 20x40
Srinidhi Enclave
Hyundai Showroom backside Belavadi
9880047018

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ.
ಸಂಬಳ: 12000 ದಿಂದ 18000 (ESI, PF, ಸೌಲಭ್ಯ ಇರುತ್ತದೆ.)
8050699742, 7760043596

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 16,000 ರಿಂದ 38,000/- ESI+PF+OT ಸೇರಿ, ಷರತ್ತು ಅನ್ವಯ
6366141586, 6364103418

ಸೈಟು ಮಾರಾಟಕ್ಕಿದೆ
DTCP ಅಪ್ರೂವ್ಡ್, 9&11A ಖಾತೆ 30x40, Rs.18,60,000/- ಬ್ಯಾಂಕ್ ಲೋನ್ ದೊರೆಯುತ್ತದೆ ಮಾಲೀಕರಿಂದ ನೇರವಾಗಿ ಮಾರಾಟ ಮೈಸೂರು–ಬನ್ನೂರು ರಸ್ತೆ
9945558166

JOB'S IN MYSORE
Trainee/ Helpersಗಳಾಗಿ Age (18-24), Earn (8500/- ರಿಂದ 16500/-) PM 10th, PUC, BBM Only Frashers, No Fee, Meet Us Today, Join Tomorrow, ವಿವರಗಳೊಂದಿಗೆ ನೇರ ಸಂಪರ್ಕಿಸಿ, ಪರಸ್ಥಳದವರಿಗೆ ವಸತಿ. Call : ಕಾವ್ಯ
9342827788

SITE FOR SALE
40X60, W/F, at, Kamadhenu Badavane Namoona-3
Price: 50 Laksh
9731937223

ಶಿಕ್ಷಕಿಯರು ಬೇಕಾಗಿದ್ದಾರೆ
ಲಿಟಲ್ ಫ್ಲವರ್ ಪ್ರೀ–ಸ್ಕೂಲ್, ಉದ್ಬೂರು, ಮೈಸೂರು ತಾಲ್ಲೂಕು N.S.T. -02
9945659388
6364119150

ತಕ್ಷಣ ಬೇಕಾಗಿದ್ದಾರೆ
ತಾಂಡ್ಯ ಮತ್ತು ಕಡಕೊಳ ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 25000/-
ವಯೋಮಿತಿ: 45 ವರ್ಷದೊಳಗೆ
(ESI, PF, ಸೌಲಭ್ಯ ಇರುತ್ತದೆ.)
9538567819
9620667819

ತಕ್ಷಣ ಬೇಕಾಗಿದ್ದಾರೆ
ದೇವಸ್ಥಾನಕ್ಕೆ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ : 40 ರಿಂದ 50 ವರ್ಷದೊಳಗೆ
6364748485

Cotton Bed Repairs, Foam Bed and all types of Bed Repairs Window Mosquito Fibre Netlon
9342104210

RESTAURANT FOR LEASE
Good Location and Good Running Condition With well interior
Contact No.
9535601201

SITE FOR SALE
30X40, E/F, at, Vishwaprajna Marati Kyatanahalli, Mysore
Price: 26.50 Lakhs
9731937223

WANTED
Abacus Teacher In Mysuru. Zealous Rock Abacus (ZRA)
9902624677

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
9148733213

FOR RENT
Industrial Shed / Warehouse
Space - 17500/- Sqft
Power - 15HP
Loading and Unloding Bay -2 Nos.
All other General Facilities
9108501792

ನಗರದ ಸ್ವೀಟ್ಸ್ & ಕಾಂಡಿಮೆಂಟ್ಸ್ ಅಂಗಡಿಯೊಂದಕ್ಕೆ ಬೇಕಾಗಿದ್ದಾರೆ
* ಸ್ಟೋರ್ ಕೀಪರ್,
* ಅಕೌಂಟೆಂಟ್ ಅಸಿಸ್ಟೆಂಟ್
* ಸೂಪರ್ ವೈಸರ್
* ಪ್ರೊಡಕ್ಷನ್ ಡಿಪಾರ್ಟ್‌ಮೆಂಟ್ ಹೆಲ್ಪರ್ಸ್
* ಡೆಲಿವರಿ ಬಾಯ್ಸ್
* ಚಾಟ್ಸ್ ಮಾಸ್ಟರ್
* ಪಾತ್ರೆ ತೊಳೆಯಲು ಹೆಂಗಸರು

9606116663

ಮನೆ ಬಾಡಿಗೆಗಿದೆ
ಮೈಸೂರಿನ ಸೂರ್ಯ ಬೇಕರಿ ಹತ್ತಿರ ಹೊಸದಾಗಿ ನಿರ್ಮಿಸಿರುವ ಮನೆ ಬಾಡಿಗೆಗಿದೆ. ಅಳತೆ 15x30, 1 ಬಿಹೆಚ್‌ಕೆ, ನೆಲ ಅಂತಸ್ತು
9342124871
9620406254

ಕೆಲಸಕ್ಕೆ ಬೇಕಾಗಿದ್ದಾರೆ
Online Center ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಗೊತ್ತಿರುವ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಸ್ಪೋಕನ್ ಇಂಗ್ಲೀಷ್ ಹೇಳಿಕೊಡಲು ಅನುಭವಿ ಶಿಕ್ಷಕಿಯರು ಬೇಕಾಗಿದ್ದಾರೆ.
9538782130
9019776357

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯೊಂದರಲ್ಲಿ ಕೆಲಸ ಮಾಡಲು ಟೈಲರುಗಳು, ಹೆಲ್ಪರುಗಳು, ಸೆಕ್ಯೂರಿಟಿ ಗಾರ್ಡುಗಳು ಮತ್ತು ವೆಲ್‌ಡರ್ (Welder) ಗಳು ಬೇಕಾಗಿದ್ದಾರೆ. ESI & PF ವಾರದ ರಜೆ ಮತ್ತು ಕೆಲವು ಸ್ಥಳಗಳಿಗೆ ಬಸ್ಸಿನ ವ್ಯವಸ್ಥೆ ಇರುತ್ತದೆ
7795285485, 8105249880

REQUIRED
Leading a Auditor Office Required Lady Office Assistant Qualification PUC/ Degree No. Of Post - 1, Computer Knowledge with Tally is Must Salary Rs.5000-8000 Per Month, Candidate Preferable, Hinkal, Hootagalli, Belavadi, Koorgalli, Vijayanagara 4th Stage, Yelwala. Please send your resume to Email:hpsridhar@yahoo.co.in

ಶಾದಿ ಗುರೂಜಿ. ಕಾಂ
ಎಲ್ಲಾ ಜಾತಿಯ ವಧುವರರಿಗೆ ಶೀಘ್ರ ವಿವಾಹ ಪ್ರಾಪ್ತಿಗಾಗಿ ಸಂಪರ್ಕಿಸಿ: ನಿಮ್ಮ ಫೋಟೋ ಮತ್ತು ಬಯೋಡೆಟಾ ವಾಟ್ಸಾಪ್ ಮಾಡಿರಿ
6361740552
9449408551

ಫ್ಲೋರ್‌ಮಿಲ್ ಬಾಡಿಗೆಗೆ ಇದೆ
ಕುವೆಂಪುನಗರದಲ್ಲಿ ವಿಜಯ ಬ್ಯಾಂಕ್ ಸರ್ಕಲ್ ಬಳಿ ಹಾಲಿ ನಡೆಯುತ್ತಿರುವ ಫ್ಲೋರ್ ಮಿಲ್ ಬಾಡಿಗೆಗೆ ಇದೆ.
9620607138
8105751169

ನೇರ ನೇಮಕಾತಿ
ಆಫೀಸ್‌ನಲ್ಲಿ ಕೆಲಸ ಖಾಲಿ ಇದೆ 20 ಜನ ಯುವತಿಯರು ಕೆಲಸ ಮಾಡಲು ಬೇಕಾಗಿದ್ದಾರೆ. ವಿದ್ಯಾಭ್ಯಾಸ–SSLC, PUC, ITI, Diploma any Degree, (Pass/Fail) ವಯೋಮಿತಿ: 35 ರೊಳಗೆ, ತಿಂಗಳಿಗೆ ವೇತನ: 7500 ರಿಂದ 12000
ಸರಸ್ವತಿ: 6364897012
9071107156

ತಾರಸಿ ಸೋರುವಿಕೆ ಸಂಪ್ ಲೀಕೇಜ್ ಬಾತ್ ರೂಂ ಲೀಕೇಜ್ ಸರಿಪಡಿಸಲಾಗುವುದು
7829236625

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು ಹಾಗೂ SSLC, PUC ಪಾಸ್ ಫೇಲಾದ ಯುವಕ ಯುವತಿಯರು ಬೆಳಿಗ್ಗೆ ಅಥವಾ ರಾತ್ರಿ ಅಥವಾ 24 ಗಂಟೆ ಸೇವೆ ಮಾಡುವವರು ಬೇಕಾಗಿದ್ದಾರೆ.
8123630683

WANTED
PART TIME & FULL TIME
For a Computer Training Institute
Counselor
Technical Trainer
Non-Technical Trainer
Marketing Executive
Telecallers
9035066233
9035066755

FOR SALE
Buy & Sell site , House, Land
1) 12x36 G+2 House Kuvempu Nagar
2) 30x40 40x60 Somanatha Nagar attch
3) 30x40 Duplex House Srirampura
4) 20x30 New and Old House available in Dattagalli
5) 20x30,30x40,40x60 sites in H D Kote Road Near Defence Apartment

9538690359
9035990359

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಮೈಸೂರು ಪಿರಿಯಾಪಟ್ಟಣ, ಕುಶಾಲನಗರ, ಮಡಿಕೇರಿಯಲ್ಲಿ ಕೆಲಸ ಮಾಡಲು ಗಾರ್ಡ್‌ಗಳು ಬೇಕಾಗಿದ್ದಾರೆ. ಉಚಿತ ಊಟ ವಸತಿಯೊಂದಿಗೆ ಆಕರ್ಷಕ ಸಂಬಳ
9535784363
9901236401

ಅಂಗಡಿ ಮಳಿಗೆ ಬಾಡಿಗೆಗೆ ಇದೆ
ಶ್ರೀರಂಗಪಟ್ಟಣ ಟೌನ್ ಮೇನ್ ರಸ್ತೆ ಪೇಟೆ ಬೀದಿಯಲ್ಲಿ 22x10 ಅಳತೆಯ ಅಂಗಡಿ ಬಾಡಿಗೆಗೆ ದೊರೆಯುತ್ತದೆ.
9342446593
9480314341

ಉದ್ಯೋಗವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರು, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಹಾಗೂ ಹೌಸ್ ಕೀಪಿಂಗ್ ಕೆಲಸಕ್ಕೆ ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ 7/10/PUC, ANM, GNM Pass/ Fail ತಿಂಗಳ ಸಂಬಳ: 9000 ರಿಂದ 18000
9606514441, 08214242351
7349278501

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳಿನ ಕ್ಲೂಬರ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಮತ್ತು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ: 27000/- + W/O (8Hrs) ಊಟ ತಿಂಡಿ ಸೌಲಭ್ಯವಿರುತ್ತದೆ. ವಯೋಮಿತಿ: 45 ವರ್ಷದೊಳಗಿರಬೇಕು
9620667819
9620777819

SITES FOR SALE
Roopanagar
1) 30x50, South Face
2) 40x60 South Face
Prime Location
9448054390

ಜಮೀನು ಮಾರಾಟಕ್ಕಿದೆ
12 ಗುಂಟೆ ಜಮೀನು ಮಾರಾಟ್ಕಿದೆ ನಂಜನಗೂಡು To ಗುಂಡ್ಲುಪೇಟೆ ರಸ್ತೆ ಆಸಕ್ತರು ಸಂಪರ್ಕಿಸಿ:
7090665666

ಬೇಕಾಗಿದ್ದಾರೆ
ಮೈಸೂರಿನ ಬನ್ನೂರು ರಸ್ತೆ ಭುಗತ್‌ಗಳ್ಳಿಯಲ್ಲಿ ಇರುವ ಒಂದು ದೊಡ್ಡ ಕಂಪನಿಗೆ ಇಂಗ್ಲಿಷ್ ಓದಲೂ ಬರೆಯಲು ಬರುವ 45 ವರುಷದ ಒಳಗೆ ಇರುವ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. 26 ದಿನಕ್ಕೆ ಆಕರ್ಷಕ ಸಂಬಳ ವಿದ್ದು, 4, W/off, ESI, EPF ರೂಮಿನ ಸೌಲಭ್ಯ ವಿರುತ್ತದೆ. ಮತ್ತೆ ತಿಂಡಿ, ಊಟ ಉಚಿತವಾಗಿರುತ್ತದೆ. ಆಸಕ್ತರು ಕೂಡಲೇ ಈ ನಂಬರ್‌ಗಳಿಗೆ ಸಂಪರ್ಕಿಸಿ
9900066284, 9900066478

ಫುಟ್‌ಪಾತ್‌ನಲ್ಲಿ ಅವೈಜ್ಞಾನಿಕ ಇಂಟರ್‌ಲಾಕ್ ಅಳವಡಿಕೆ: ಟೀಂ ಮೈಸೂರು ಸದಸ್ಯರ ಆಕ್ಷೇಪ



ಮೈಸೂರು, ಜೂ.4(ಎಸ್‌ಬಿಡಿ)- ಪಾದಚಾರಿ ಮಾರ್ಗದಲ್ಲಿನ ಗಿಡಗಳ ಸುತ್ತ ಅವೈಜ್ಞಾನಿಕವಾಗಿ ಇಂಟರ್‌ಲಾಕ್ ಅಳವಡಿಸದಂತೆ ಟೀಂ ಮೈಸೂರು ಪ್ರತಿಷ್ಠಾನದ ಸದಸ್ಯರು ಕಾಮಗಾರಿ ತಡೆದು ಮನವರಿಕೆ ಮಾಡಿಕೊಟ್ಟ ಘಟನೆ ನಡೆದಿದೆ.

ನಗರದ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ರಸ್ತೆಯ ಫುಟ್‌ಪಾತ್‌ಗೆ ಇಂಟರ್ ಲಾಕಿಂಗ್ ನೆಲಹಾಸು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಈ ವೇಳೆ ಅಲ್ಲಿರುವ ಗಿಡಗಳ ಸುತ್ತಲೂ ಅವೈಜ್ಞಾನಿಕವಾಗಿ ನೆಲಹಾಸು ಅಳವಡಿಸುವುದನ್ನು ಗಮನಿಸಿದ ಟೀಂ ಮೈಸೂರು ಸದಸ್ಯರು, ತಕ್ಷಣ ಮೇಯರ್ ಶಿವಕುಮಾರ್ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಬಳಿಕ ಮೇಯರ್, ಗಿಡಗಳಿಗೆ ತೊಂದರೆಯಾಗದಂತೆ ವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈ ಬಗ್ಗೆ ಟೀಂ ಮೈಸೂರು ಸಂಚಾಲಕ ಪ್ರತಿಕ್ರಿಯಿಸಿ, ಪಾದಚಾರಿ ಮಾರ್ಗಗಳಿಗೆ ಇಂಟರ ಲಾಕ್ ವ್ಯವಸ್ಥೆ ಮಾಡುತ್ತಿರುವುದು ಪ್ರಶಂಸನಾರ್ಹ. ಆದರೆ ಮೊದಲಿಗೆ ಫುಟ್‌ಪಾತ್ ಎತ್ತರಗೊಳಿಸಿ, ಗ್ರೋಟ್ ಮಿಕ್ಸ್, ಅದರ ಮೇಲೆ ಎಂ ಸ್ಯಾಂಡ್ ಹಾಕಿ, ನಂತರ ಇಂಟರ್ ಲಾಕಿಂಗ್ ಹಾಕಲಾಗುತ್ತಿದೆ. ಇದರಿಂದ ಮಳೆ ನೀರು ಭೂಮಿಗೆ ಸೇರುವುದಿಲ್ಲ. ಪರಿಣಾಮ ಗಿಡಗಳಿಗೂ ನೀರು ಸಿಗದಂತಾಗುತ್ತದೆ. ಸರಿಯಾಗಿ ಪಾತಿ ಮಾಡದೆ ಗಿಡದ ಬುಡದವರೆಗೂ ಮುಚ್ಚುವುದರಿಂದ ನೀರಿನ ಕೊರತೆಯಿಂದ ಕಾಲಕ್ರಮೇಣ ಗಿಡಗಳು ಸಾಯುತ್ತವೆ. ಈ ಬಗ್ಗೆ ಮೇಯರ್ ಶಿವಕುಮಾರ್ ಅವರಿಗೆ ಮಾಹಿತಿ ನೀಡಿದ ತಕ್ಷಣ ಅವರು ಕ್ರಮ ವಹಿಸಿ ದರು. ಗಿಡದ ಸುತ್ತ 2 ಅಡಿ ಸುತ್ತಳತೆಯಲ್ಲಿರುವ ಇಂಟರ್‌ಲಾಕ್ ತೆಗೆಯಬೇಕು. ಮುಂದೆಯೂ ಗಿಡಗಳಿಗೆ ಪಾತಿ ಬಿಟ್ಟು ಕಾಮಗಾರಿ ನಡೆಸುವಂತೆ ಗುತ್ತಿಗೆದಾರರಿಗೆ ತಿಳಿಸಲಾಗಿದೆ ಎಂದರು. ಈ ವೇಳೆ ತಂಡದ ಸಹ ಸಂಚಾಲಕ ಯಶವಂತ್, ಸದಸ್ಯರಾದ ವಿಶ್ವನಾಥ್, ಅನಿಲ್ ಜೈನ್, ಹರೀಶ್ ಬಾಬು, ಹರೀಶ್ ಶೆಟ್ಟಿ, ಅಭಿಷೇಕ್ ಮತ್ತಿತರರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.4- ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಶ್ರೀಮತಿ ನಂಜನಗೂಡು ಶಾರದಮ್ಮ ಸ್ಮಾರಕ ಧರ್ಮಸಂಸ್ಥೆಯ 1ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಂದ 2023-24ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ನಿಗದಿತ ಅರ್ಜಿ ನಮೂನೆಗಳನ್ನು ಧರ್ಮಸಂಸ್ಥೆಯಿಂದ ಪಡೆದು ಸಲ್ಲಿಸಲು ಕೋರಲಾಗಿದೆ. ಅರ್ಜಿ ಸಲ್ಲಿಸಲು ಜೂ.10 ಕೊನೆ ದಿನವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ತನಿಖೆಗೆ ರೈಲ್ವೆ ಶಿಫಾರಸು

ಮತ್ತು ಸ್ಟೇಷನ್‌ನಿಂದ ಹೊರಹೋಗಲು ಸಹಾಯಕ ಸ್ಟೇಷನ್ ಮ್ಯಾನೇಜರ್ ಗ್ರೀನ್ ಸಿಗ್ನಲ್ ನೀಡಿದ್ದರು. ಆದರೆ ರೈಲು ಇನ್ನೇನು ನಿಲ್ದಾಣ ಪ್ರವೇಶಿಸಬೇಕು ಎನ್ನುವ ಹೊತ್ತಿನಲ್ಲಿ ಸ್ಟೇಷನ್ ಮ್ಯಾನೇಜರ್‌ಗೆ ತಾನು ಗ್ರೀನ್ ಸಿಗ್ನಲ್ ನೀಡಿದ್ದರೂ, ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ಮುಖ್ಯ ಹಳಿಯಲ್ಲಿ ಹೋಗಲು ಅನುವಾಗುವಂತೆ ಹಳಿ ಬದಲಾವಣೆ ಮಾಡಿರಲಿಲ್ಲ ಎಂಬುದು ಅರಿವಾಗಿದೆ. ಹೀಗಾಗಿ ಆತ ಕಡೆಯ ಹಂತದಲ್ಲಿ ಗ್ರೀನ್ ಸಿಗ್ನಲ್ ಅನ್ನು ರೆಡ್‌ಗೆ ಬದಲಾಯಿಸಿದ್ದಾರೆ. ಅಷ್ಟರಲ್ಲಿ ರೈಲು ಮುಖ್ಯಹಳಿಯ ಬದಲಾಗಿ ಪಕ್ಕದಲ್ಲಿ ಸರಕು ಸಾಗಣೆ ರೈಲು ನಿಂತಿದ್ದ ಹಳಿಯಲ್ಲಿ ಸಾಗಿ ಭೀಕರ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕೋರಮಂಡಲ್ ಎಕ್ಸ್‌ಪ್ರೆಸ್ ರೈಲಿನ ಆರಂಭಿಕ ಬೋಗಿಗಳು ಗೂಡ್ಸ್ ರೈಲಿನ ಮೇಲೆ ಹತ್ತಿವೆ. 15 ಬೋಗಿ ಹಳಿ ತಪ್ಪಿದ್ದರೆ, 7 ಬೋಗಿಗಳು ತಲೆಕೆಳಗಾಗಿ ಉರುಳಿ ಭಾರೀ ಪ್ರಮಾಣದ ಸಾವು ನೋವು ಸಂಭವಿಸಿದೆ. ಹೀಗಾಗಿ ಹಳಿ ತಪ್ಪಿದ ಬೋಗಿಗಳು ಪಕ್ಕದ ಹಳಿಯ ಮೇಲೆ ಬಿದ್ದಿದ್ದು, ಅದಕ್ಕೆ ಬೆಂಗಳೂರು-ಹೌರಾ ರೈಲು ಬಂದು ಡಿಕ್ಕಿ ಹೊಡೆದಿದೆ.

ಚಾಲಕನಿಗೆ ಕ್ಲೀನ್‌ಚಿಟ್

ಬೆಂಗಳೂರು-ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ 126 ಕಿ.ಮೀ ವೇಗದಲ್ಲಿ ಚಲಿಸುತ್ತಿತ್ತು. ಎರಡೂ ರೈಲುಗಳಲ್ಲಿ ಅತಿಯಾದ ವೇಗದ ಪ್ರಶ್ನೆಯೇ ಇರಲಿಲ್ಲ. ಸಿಗ್ನಲಿಂಗ್ ಸಮಸ್ಯೆ ಇದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಸಿನ್ಹಾ ಹೇಳಿದರು. ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದಿದೆ. ಈ ರಭಸಕ್ಕೆ ಅದರ ಬೋಗಿಗಳು ಹಳಿ ತಪ್ಪಿ ಮತ್ತೊಂದು ಹಳಿ ಮೇಲೆ ಬಿದ್ದಿದೆ ಎಂದು ಅವರು ಹೇಳಿದರು. ಗೂಡ್ಸ್ ರೈಲು ನಿಲ್ಲಿಸಿದ್ದ ನಿಲ್ದಾಣದಲ್ಲಿ ಕೋರೊಮಂಡಲ್ ಎಕ್ಸ್‌ಪ್ರೆಸ್ ಲೂಪ್ ಲೈನ್ ಪ್ರವೇಶಿಸಿದೆ ಎಂದು ಪ್ರಾಥಮಿಕ ವರದಿ ತಿಳಿಸಿದೆ.

ಮಕ್ಕಳಿಗೆ ಉಚಿತ ಶಿಕ್ಷಣ ಭರವಸೆ

ಗಾಯಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಟ್ವೀಟ್ ಮಾಡಿರುವ ಅದಾನಿ, 'ಒಡಿಶಾ ರೈಲು ಅಪಘಾತದಿಂದ ನಾವೆಲ್ಲರೂ ತೀವ್ರವಾಗಿ ನೊಂದಿದ್ದೇವೆ. ಈ ಅಪಘಾತದಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡ ಅಮಾಯಕ ಮಕ್ಕಳ ಶಾಲಾ ಶಿಕ್ಷಣದ ಜವಾಬ್ದಾರಿಯನ್ನು ಅದಾನಿ ಗ್ರೂಪ್ ಹೊರಲು ನಿರ್ಧರಿಸಿದೆ' ಎಂದು ಅವರು ತಿಳಿಸಿದ್ದಾರೆ.

'ಸಂತ್ರಸ್ತರಿಗೆ ಮತ್ತು ಅವರ ಕುಟುಂಬಗಳಿಗೆ ಶಕ್ತಿ ನೀಡುವುದು ಮತ್ತು ಮಕ್ಕಳಿಗೆ ಉತ್ತಮ ನಾಳೆ ಒದಗಿಸುವುದು ನಮ್ಮೆಲ್ಲರ ಜಂಟಿ ಜವಾಬ್ದಾರಿಯೂ ಆಗಿದೆ' ಎಂದು ಅದಾನಿ ಅಭಿಪ್ರಾಯಪಟ್ಟಿದ್ದಾರೆ. ರೈಲು ದುರಂತದ ಸಂತ್ರಸ್ತರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದಾಗಿ ಭಾರತ ತಂಡದ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಘೋಷಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿದ್ದು, ಈ ಚಿತ್ರವು ದೀರ್ಘಕಾಲದವರೆಗೆ ನಮ್ಮನ್ನು ಕಾಡುತ್ತದೆ. ಈ ದುಃಖದ ಸಮಯದಲ್ಲಿ, ಈ ದುರಂತ ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ನಾನು ಹೊರಬಲ್ಲೆ. ನಾನು ಅಂತಹ ಮಕ್ಕಳಿಗೆ ಸೆಹ್ವಾಗ್ ಇಂಟರ್ ನ್ಯಾಶನಲ್ ಸ್ಕೂಲ್‌ನ ಬೋರ್ಡಿಂಗ್ ಸೌಲಭ್ಯದಲ್ಲಿ ಉಚಿತ ಶಿಕ್ಷಣವನ್ನು ನೀಡುತ್ತೇನೆ ಎಂದು ಟ್ವೀಟ್ ಮಾಡಿದ್ದಾರೆ. ವಿರೇಂದ್ರ ಸೆಹ್ವಾಗ್ ಅವರು ಸೆಹ್ವಾಗ್ ಇಂಟರ್‌ನ್ಯಾಶನಲ್ ಸ್ಕೂಲ್ ನಡೆಸುತ್ತಿದ್ದಾರೆ. ಇದರಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ವಿವಿಧ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವ ಸೌಲಭ್ಯ ಕೂಡ ಇದೆ.

ಸಿಖರ್ಜಿ ತಲುಪಿದ 110 ಕನ್ನಡಿಗರು

ಕಳಸ, ಸಂಸೆ, ಹೊರ ನಾಡು, ಕುದುರೆಮುಖದ ಸುಮಾರು 110 ಜನರು ಜೈನ ಕ್ಷೇತ್ರಗಳ ದರ್ಶನಕ್ಕೆ ತೆರಳಿದ್ದರು. ಈ ವೇಳೆ ರೈಲು ಅಪಘಾತಗೊಂಡಿತ್ತು. ಈಗ ಎಲ್ಲಾ ಯಾತ್ರಿಕರು ಕೋಲ್ಕತ್ತಾ ರೈಲು ನಿಲ್ದಾಣದಿಂದ ಮೂರು ಬಸ್‌ಗಳ ಮೂಲಕ ಯಾತ್ರಾ ಸ್ಥಳಕ್ಕೆ ತಲುಪಿದ್ದಾರೆ ಎಂಬ ಮಾಹಿತಿ ಬಂದಿದೆ. ಈಗಾಗಲೇ ದೇವರ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತಿರುವ ಯಾತ್ರಿಕರು, ತಾವು ಸೇಫ್ ಆಗಿದ್ದೇವೆ ಎಂದು ವಿಡಿಯೋ ಬಿಡುಗಡೆ ಮಾಡಿದ್ದಾರೆ. ಅಲ್ಲದೇ ಅಪಘಾತದಲ್ಲಿ ಯಾರಿಗೂ ತೊಂದರೆಯಾಗಿಲ್ಲ ಎಂದು ಹೇಳಿಕೊಂಡಿದ್ದಾರೆ.

ತ್ವರಿತವಾಗಿ 2 ಲೈನ್ ದುರಸ್ತಿ

ಕ್ರೇನ್‌ಗಳನ್ನು ಆಪರೇಟ್ ಮಾಡುವ ಜನರ ತಂಡದೊಂದಿಗೆ ಸೇರಿ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ ಬೋಗಿಗಳು, ಇತರ ಅವಶೇಷಗಳನ್ನು ತೆರವುಗೊಳಿಸಲಾಗಿದೆ. ಇಲ್ಲಿಯ ಪ್ರಧಾನ ಟ್ರಂಕ್ ಲೈನ್ ಅನ್ನು ರೆಸ್ಟೋರ್ ಮಾಡಲಾಗಿರುವುದು ವರದಿಯಾಗಿದೆ. ಬಹಂಗ ಬಜಾರ್‌ನಲ್ಲಿ ಹಾಳಾದ ಹಳಿಗಳನ್ನು ದುರಸ್ತಿ ಮಾಡಲಾಗುತ್ತಿದೆ. ಮೇಲೆ ಹಾದು ಹೋಗುವ ಎಲೆಕ್ಟ್ರಿಕ್ ಕೇಬಲ್‌ಗಳನ್ನೂ ಮರುಸ್ಥಾಪಿಸಲಾಗುತ್ತಿದೆ. ಬಹನಾಗ ರೈಲು ನಿಲ್ದಾಣದ ಬಳಿ ಎಲ್ಲಾ ಟ್ರ್ಯಾಕ್‌ಗಳನ್ನು ಬಹಳ ಶೀಘ್ರದಲ್ಲಿ ಓಡಾಟಕ್ಕೆ ಅನುವು ಮಾಡಿಕೊಡುವತ್ತ ಪ್ರಯತ್ನಿಸಲಾಗುತ್ತಿದೆ. ಈ ಮಾರ್ಗ ಬಹಳ ಮುಖ್ಯವಾಗಿದ್ದು, ದಕ್ಷಿಣ ಭಾರತ ಮತ್ತು ಈಶಾನ್ಯಕ್ಕೆ ಇದು ಸಂಪರ್ಕ ಕಲ್ಪಿಸುತ್ತದೆ. ಆದಷ್ಟೂ ಬೇಗ ಈ ಮಾರ್ಗದ ಪುನಶ್ಚೇತನ ಆಗುವುದು ಮುಖ್ಯ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಈ ಕುರಿತು ಮಾತನಾಡಿ, ಜೂನ್ 6, ಮಂಗಳವಾರದೊಳಗೆ ಈ ಮಾರ್ಗವನ್ನು ಸಂಪೂರ್ಣವಾಗಿ ಬಳಕೆಗೆ ಸಿದ್ಧಪಡಿಸಲಾಗುವುದು ಎಂದಿದ್ದಾರೆ. ಎರಡು ಲೈನ್‌ಗಳನ್ನಾದರೂ ನಾವು ಆದಷ್ಟೂ ಬೇಗ ಸರಿಪಡಿಸುತ್ತೇವೆ ಎಂದು ರೈಲ್ವೆ ಅಧಿಕಾರಿಯೊಬ್ಬರೂ ಪುನರುಚ್ಚರಿಸಿದ್ದಾರೆ.

ಕಾರು ಡಿಕ್ಕಿ: ನಾಲ್ವರ ಸಾವು

ತುಮಕೂರು ಮೂಲದ ಶರತ್ ಹುಟ್ಟುಹಬ್ಬದ ನಿಮಿತ್ತ ತಡರಾತ್ರಿವರೆಗೆ ಪಾರ್ಟಿ ಮುಗಿಸಿ ಚುಂಚನಗಿರಿಯತ್ತ ಪ್ರಯಾಣ ಬೆಳಸಿದ್ದರು. ಈ ನಡುವೆ ಬರ್ತ್ ಡೇ ಪಾರ್ಟಿ, ಡೆತ್ ಡೇಗೆ ಮುನ್ನುಡಿಯಾಗಿದೆ. ಇಲ್ಲಿನ ಬಿ.ಜಿ.ನಗರದ ಬಿಜಿಎಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು ಮತ್ತು ಟಿಪ್ಪರ್ ಲಾರಿಯನ್ನು ವಶಕ್ಕೆ ಪಡೆದಿರುವ ಪೊಲೀಸರು, ಹೆದ್ದಾರಿ ಗಸ್ತು ಸಿಬ್ಬಂದಿಗಳು ನೀಡಿದ ದೂರಿನನ್ವಯ ಬೆಳ್ಳೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಾನಿಂದು ಶಾಸಕನಾಗಲು ಮುಖ್ಯ ಕಾರಣ ನಮ್ಮೂರಿನ ಜನ

ಕೆಜಿ ಕೊಪ್ಪಲು ಅಭಿವೃದ್ಧಿ ಶತಸಿದ್ಧ, ಕ್ಷೇತ್ರದ ಅಭಿವೃದ್ಧಿಗೂ ಬದ್ಧ

ಅದ್ದೂರಿ-ಆತ್ಮೀಯತೆ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಘೋಷಣೆ



ಹುಟ್ಟೂರಲ್ಲಿ ಕೆ.ಹರೀಶ್‌ಗೌಡರ ಅದ್ದೂರಿ ಮೆರವಣಿಗೆ...

ಮೈಸೂರು,ಜೂ.4(ಪಿಎಂ)- ಚಾಮರಾಜ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿರುವ ಕೆ.ಹರೀಶ್‌ಗೌಡ ಅವರನ್ನು ಹುಟ್ಟೂರು ಕೆಜಿ ಕೊಪ್ಪಲಿನ ವಿವಿಧ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ಮಾಡಲಾಯಿತು. ಸಾರೋಟು ಇದ್ದರೂ ನಡೆದುಕೊಂಡೇ ಸಾಗಿದ ಹರೀಶ್‌ಗೌಡರಿಗೆ ಗ್ರಾಮಸ್ಥರು ಹೂಮಳೆ ಸುರಿಸಿ ಅಭಿನಂದನೆ ಸಲ್ಲಿಸಿದರು.

ನ್ಯೂ ಕಾಂತರಾಜ್ ರಸ್ತೆಯಲ್ಲಿರುವ ಬಂದಂತಮ್ಮ ಕಾಳಮ್ಮ ದೇವಸ್ಥಾನದಿಂದ ಮೆರವಣಿಗೆ ಹೊರಟು ಬರಕ್ಕಿ ರಾಮೇಗೌಡರ ವೃತ್ತ, ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ ಎದುರು ಮೆರವಣಿಗೆ ಸಮಾವೇಶಗೊಂಡಿತು. ಇಲ್ಲಿ ಕ್ರೇನ್ ಸಹಾಯದಿಂದ ಬೃಹತ್ ಕೊಬ್ಬರಿ ಮತ್ತು ಬೆಲ್ಲದ ಹಾರ ಅರ್ಪಿಸಿ ಹರೀಶಗೌಡರನ್ನು ಅಭಿನಂದಿಸಲಾಯಿತು. ನಂತರ ರೈಲ್ವೆಗೇಟ್ ರಸ್ತೆ, ಶ್ರೀ ಸಿದ್ದಪ್ಪಾಜಿ ದೇವಸ್ಥಾನ ರಸ್ತೆ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ರಸ್ತೆ ಮೂಲಕ ಕನ್ನೇಗೌಡರ ವೃತ್ತ ತಲುಪಲಾಯಿತು. ಇಲ್ಲಿ ಭಾರೀ ಉದ್ದದ ಸೇಬಿನ ಹಾರವನ್ನು ಕ್ರೇನ್ ಸಹಾಯದಿಂದ ಶಾಸಕರಿಗೆ ಅರ್ಪಿಸಿ ಹೂಮಳೆ ಸುರಿಸಲಾಯಿತು.

ಅನಾನಸ್ ಹಣ್ಣುಗಳ ಬೃಹತ್ ಹಾರವನ್ನೂ ಅರ್ಪಿಸಿ ಶಾಸಕರಿಗೆ ಗೌರವ ಸಲ್ಲಿಸಲಾಯಿತು. ಬಳಿಕ ಕೆಜಿ ಕೊಪ್ಪಲಿನ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ಸಾಗಿತು. ದಾರಿಯುದ್ದಕ್ಕೂ ಪಟಾಕಿ ಸಿಡಿಸಿ ಪುಷ್ಪಗಳ ಸಿರಿಮಳೆಯನ್ನೇ ಸುರಿಸಲಾಯಿತು. ಜಾನಪದ ಕಲಾವಿದರು, ಗಾರುಡಿ ಬೊಂಬೆ ಕಲಾವಿದರ ನೃತ್ಯ ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿತು. ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ ಆವರಣಕ್ಕೆ ತಲುಪಿ, ಮೆರವಣಿಗೆ ಮುಕ್ತಾಯಗೊಂಡಿತು.

ಮೈಸೂರು, ಜೂ.4(ಪಿಎಂ)- ನಾನಿಂದು ಶಾಸಕನಾಗಿ ಆಯ್ಕೆಯಾಗಲು ಮುಖ್ಯ ಕಾರಣ ನಮ್ಮೂರಿನ (ಕೆಜಿ ಕೊಪ್ಪಲು) ಜನ. ನಮ್ಮ ಗ್ರಾಮದ ಅಭಿವೃದ್ಧಿಗೆ ಏನಾಗಬೇಕೆಂದು ಊರಿನ ಹಿರಿಯರು ನನಗೆ ಮಾರ್ಗದರ್ಶನ ನೀಡಿದರೆ ಖಂಡಿತವಾಗಲೂ ಅದಕ್ಕೆ ಪೂರಕ ಯೋಜನೆಗಳನ್ನು ತರಲು ಶತಸಿದ್ಧವಿದ್ದು, ಇಡೀ ಕ್ಷೇತ್ರದ ಅಭಿವೃದ್ಧಿಗೂ ಬದ್ಧವಾಗಿದ್ದೇನೆ ಎಂದು ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಘೋಷಿಸಿದರು.

ಮೈಸೂರಿನ ಕೆಜಿ ಕೊಪ್ಪಲಿನ ನ್ಯೂ ಕಾಂತರಾಜ ಅರಸ್ ರಸ್ತೆಯ ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿವಿಧ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ಶಾಸಕರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಅವರಿಗೆ ಹಮ್ಮಿಕೊಂಡಿದ್ದ ಅದ್ದೂರಿ-ಆತ್ಮೀಯತೆಯ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ (ಟ್ರಸ್ಟ್‌ನಿಂದ 2 ಕೆಜಿಯ ಬೆಳ್ಳಿ ಗದೆ, ಅಭಿನಂದನಾ ಫಲಕ ನೀಡಿ ಸನ್ಮಾನಿಸಲಾಯಿತು) ಅವರು ಮಾತನಾಡಿದರು.

ಎಲ್ಲಾ ಕಡೆಯೂ ಪರ-ವಿರೋಧ ಇದ್ದೇ ಇರುತ್ತದೆ. ನನಗೆ ಹೆಚ್ಚಿನ ಶಕ್ತಿ ಕೊಟ್ಟಿದ್ದು ನನ್ನ ಗ್ರಾಮದ ಯಜಮಾನರು, ಯುವಕರು ಹಾಗೂ ತಾಯಂದಿರು. ನನ್ನೂರಿನ ತಾಯಂದಿರು ಪ್ರಚಾರದ ವೇಳೆ ಈ ಚುನಾವಣೆಯಲ್ಲಿ ನೀನು ಗೆಲ್ಲಬೇಕೆಂದು ಆಶೀರ್ವದಿಸಿದರು. ನಮ್ಮಪ್ಪ ನಿಧನರಾದ ಸಂದರ್ಭದಲ್ಲಿ ಮಾತ್ರವೇ ಕಣ್ಣೀರು ಹಾಕಿದ್ದ ನಾನು ಚುನಾವಣೆಯಲ್ಲಿ ಗೆದ್ದಾಗ ಮನೆಯೊಳಗೆ ಕೊಠಡಿಯಲ್ಲಿ ಒಬ್ಬನೇ ಅತ್ತಿದ್ದೇನೆ. ನಮ್ಮೂರಿನ ತಾಯಂದಿರು ಪ್ರಚಾರದ ವೇಳೆ ಮಾಡಿದ ಆಶೀರ್ವಾದ ನೆನೆದು ನನ್ನ ಕಣ್ಣಿನಲ್ಲಿ ನೀರು ಬಂದಿತು. ನನ್ನ ಜೀವ ಇರುವವರೆಗೂ ನಿಮ್ಮ ಪ್ರೀತಿ-ವಿಶ್ವಾಸ ಉಳಿಸಿಕೊಳ್ಳುತ್ತೇನೆ ಎಂದು ವಾಗ್ದಾನ ನೀಡಿದರು.

ನಮ್ಮ ಗ್ರಾಮದಲ್ಲಿ ಯಾರೂ ಸ್ವಾಭಿಮಾನ ಬಿಟ್ಟು ಬದುಕಿದ್ದನ್ನು ನಾನು ನೋಡಿಲ್ಲ. ಸ್ವಾಭಿಮಾನ ನಮ್ಮ ಗ್ರಾಮಸ್ಥರ ರಕ್ತದಲ್ಲೇ ಇದೆ. ಗ್ರಾಮದ ತಾಯಂದಿರು ನನ್ನನ್ನು ಅರಸಿ ಹಾರೈಸಿ ನನ್ನ ಸ್ವಾಭಿಮಾನ ಹೆಚ್ಚು ಮಾಡಿದ್ದಾರೆ. ಕೆಲ ಜನ ನನ್ನನ್ನು ದುರಹಂಕಾರಿ ಎನ್ನುತ್ತಾರೆ. ಆದರೆ ನಿಜಕ್ಕೂ ನನ್ನಲ್ಲಿ ದುರಹಂಕಾರವಿಲ್ಲ. ನನ್ನ ಸ್ವಭಾವವೇ ಆ ರೀತಿಯಲ್ಲಿದ್ದು, ಅಂತರಂಗದಲ್ಲಿ ಅಹಂ ಖಂಡಿತವಾಗಲೂ ಇಲ್ಲ. ಹಾಗಾಗಿ ಯಾರೂ ತಪ್ಪಾಗಿ ಅರ್ಥೈಸಿಕೊಳ್ಳಬಾರದು ಎಂದು ಕೋರಿದರು.

ಒಂದಾನೊಂದು ಕಾಲದಲ್ಲಿ ಬಡವರೇ ಇರಲಿಲ್ಲ: ನಮ್ಮ ಗ್ರಾಮದ ಅಭಿವೃದ್ಧಿಗೆ ಏನಾಗಬೇಕೆಂದು ಊರಿನ ಹಿರಿಯರು ನನಗೆ ಮಾರ್ಗದರ್ಶನ ಮಾಡಿದರೆ ಅಗತ್ಯ ಯೋಜನೆಗಳನ್ನು ತರಲು ಸಿದ್ಧವಿದ್ದೇನೆ. ಗ್ರಾಮದಲ್ಲಿ ಹಿಂದೆ ಎಲ್ಲರದ್ದೂ ಜಮೀನ್ದಾರರ ಕುಟುಂಬಗಳೇ ಆಗಿದ್ದವು. ನಮ್ಮೂರಿನಲ್ಲಿ ಅಂದು ಯಾರೂ ಬಡವರು ಇರಲಿಲ್ಲ. ಆದರೆ ಇಂದು ಸಾಕಷ್ಟು ಕುಟುಂಬಗಳಲ್ಲಿ ಬಡತನವಿದೆ. ಇದ್ದ ಜಮೀನುಗಳನ್ನು ಮುಡಾ ಇಲ್ಲವೇ ಖಾಸಗಿಯವರಿಗೆ ಮಾರುವ ಮೂಲಕ ಹಣ ಗಳಿಸಿದ್ದರೂ ಅದನ್ನು ಕಳೆದುಕೊಂಡು ತೀರಾ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ಮಕ್ಕಳ ಶಿಕ್ಷಣಕ್ಕೆ ನೆರವಾಗಬೇಕು: ನಮ್ಮೂರಿನ ಬಡಕುಟುಂಬಗಳ ಮಕ್ಕಳ ಶಿಕ್ಷಣಕ್ಕೆ ಕೈಲಾದಷ್ಟು ಸಹಾಯ ಮಾಡಬೇಕಿದೆ. ಅವರ ಶೈಕ್ಷಣಿಕ ಶುಲ್ಕಗಳ ಪಾವತಿಗೆ ಸಾಮೂಹಿಕ ಪ್ರಯತ್ನ ಮಾಡಬೇಕು. ಇದಕ್ಕೆ ನಾನೂ ಸಂಪೂರ್ಣ ಸಹಕಾರ ನೀಡುತ್ತೇನೆ. ನಾವೆಲ್ಲರೂ ಸೇರಿ ನಮ್ಮೂರಿನ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡೋಣ. ನೀವೆಲ್ಲರೂ ಸೇರಿ ಸಮುದಾಯದ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಅಭಿನಂದಿಸಿ ಅವರ ಆಶೀರ್ವಾದ ದೊರೆಯುವಂತೆ ಮಾಡಿದ್ದಕ್ಕಾಗಿ ಧನ್ಯವಾದ ಅರ್ಪಿಸುವುದಾಗಿ ಹೇಳಿದರು.

ಕೆಜಿ ಕೊಪ್ಪಲಿನ ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿಗಳೂ ಆದ ಮಾಜಿ ಮೇಯರ್ ಆರ್.ಲಿಂಗಪ್ಪ ಮಾತನಾಡಿ, ಕೆ.ಹರೀಶ್‌ಗೌಡರು ನಮ್ಮ ಕೆಜಿ ಕೊಪ್ಪಲಿನ ಮಗ ಎಂಬುದು ನಮ್ಮೆಲ್ಲರ ಹೆಮ್ಮೆ. ಕಳೆದ ಎರಡು ದಶಕಗಳಿಂದ ಸಮಾಜ ಸೇವೆಗಾಗಿ ತಮ್ಮನ್ನು ಮುಡುಪಾಗಿಸಿಕೊಂಡಿದ್ದಾರೆ ಎಂದರು.

ಕೋವಿಡ್ ಸಂದರ್ಭದಲ್ಲಿ ಸುಮಾರು 45 ಸಾವಿರ ಕುಟುಂಬಗಳಿಗೆ ಆಹಾರದ ಕಿಟ್‌ಗಳನ್ನು ವಿತರಣೆ ಮಾಡಿದರು. ಜೊತೆಗೆ ಸುಮಾರು 300 ಬಡಕುಟುಂಬಗಳಿಗೆ ತಲಾ 10 ಸಾವಿರ ರೂ. ನೀಡುವ ಮೂಲಕ ಮಾನವೀಯತೆ ಮೆರೆದರು. ಈಗ ಶಾಸಕರಾಗಿ ಹೆಚ್ಚಿನ ಜವಾಬ್ದಾರಿ ಅವರ ಹೆಗಲೇರಿದ್ದು, ಈ ಮಹತ್ತರ ಜವಾಬ್ದಾರಿ ನಿರ್ವಹಿಸುವ ಸಾಮರ್ಥ್ಯವನ್ನು ತಾಯಿ ಚಾಮುಂಡೇಶ್ವರಿ ಅವರಿಗೆ ನೀಡಲಿ ಎಂದು ಹಾರೈಸಿದರು.

ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಿ.ಬಸವರಾಜು ಮಾತನಾಡಿ, ಚಾಮರಾಜ ಕ್ಷೇತ್ರಕ್ಕೆ ಸೀಮಿತವಾಗದೇ ಮೈಸೂರು ನಗರದ ಶ್ರೇಯೋಭಿವೃದ್ಧಿಗೂ ನೀವು ಆದ್ಯತೆ ನೀಡಬೇಕು. ಭವಿಷ್ಯದಲ್ಲಿ ನೀವು ಮಂತ್ರಿಯಾಗುವತ್ತ ಹೆಜ್ಜೆ ಹಾಕಬೇಕು ಎಂದು ಶಾಸಕ ಹರೀಶ್‌ಗೌಡರಿಗೆ ಸಲಹೆ ನೀಡಿದರು.

ವಿವಿಧ ಸಂಘ-ಸಂಸ್ಥೆಗಳಿಂದಲೂ ಶಾಸಕರನ್ನು ಪ್ರತ್ಯೇಕವಾಗಿ ಅಭಿನಂದಿಸಲಾಯಿತು. ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಟ್ರಸ್ಟ್ ಉಪಾಧ್ಯಕ್ಷ ಪಿ.ಮಹದೇವಪ್ಪ, ಸಹ ಕಾರ್ಯದರ್ಶಿ ಎಸ್.ಬಸವರಾಜು, ಒಕ್ಕಲಿಗರ ಹಿತರಕ್ಷಣಾ ಸಮಿತಿಯ ಗೌರವಾಧ್ಯಕ್ಷ ರಾಜಣ್ಣ, ಅಧ್ಯಕ್ಷ ಎಂ.ಶಿವಕುಮಾರ್, ಕಾರ್ಯದರ್ಶಿ ಎಸ್.ಬಾಲು, ಖಜಾಂಚಿ ಜಿ.ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪ್ರಕಾಶ್, ನಿರ್ದೇಶಕರಾದ ಎಂ.ಮಾದಪ್ಪ, ಆರ್.ರಾಜಕುಮಾರ್ ಸೇರಿದಂತೆ ಕೆಜಿ ಕೊಪ್ಪಲು ಗ್ರಾಮಸ್ಥರು, ಶಾಸಕರ ಅಭಿಮಾನಿಗಳು ಹಾಗೂ ಹಿತೈಷಿಗಳು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಿಜವಾದ ನಾಯಕನ ಲಕ್ಷಣ ಕೆ.ಹರೀಶ್‌ಗೌಡರಲ್ಲಿದೆ: ಶ್ರೀ ಸೋಮನಾಥಾನಂದ ಸ್ವಾಮೀಜಿ

ಮೈಸೂರು, ಜೂ.4(ಪಿಎಂ)- ಸಂಕಷ್ಟದಲ್ಲಿ ಇರುವವರಿಗೆ ಸ್ಪಂದಿಸಿ, ಸುಸ್ಥಿತಿಯಲ್ಲಿ ಇರುವವರ ವಿಶ್ವಾಸವನ್ನೂ ಗಳಿಸಿ, ಎಲ್ಲರ ಪ್ರೀತಿಗೆ ಪಾತ್ರವಾಗುವ ಲಕ್ಷಣ ಇದ್ದರೆ ಅವರೇ ನಿಜವಾದ ನಾಯಕರು. ಅಂತಹ ಎಲ್ಲಾ ಲಕ್ಷಣಗಳನ್ನು ಕೆ.ಹರೀಶ್‌ಗೌಡ ಹೊಂದಿದ್ದಾರೆ ಎಂದು ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದು ಗ್ರಾಪಂ ಸದಸ್ಯನಾಗಿ ಆಯ್ಕೆಯಾಗುವುದೇ ಕಷ್ಟದ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಕೆಜಿ ಕೊಪ್ಪಲಿನ ಕೆ.ಹರೀಶ್‌ಗೌಡರು ಶಾಸಕರಾಗಿ ಹೊರಹೊಮ್ಮಿರುವುದು ನಮ್ಮೆಲ್ಲರ ಹೆಮ್ಮೆ. ಅವರು ಈ ಭಾಗದ ನಾಯಕರಾಗಿ ಮುಂದಿನ ದಿನಗಳಲ್ಲಿ ಮೈಸೂರು, ಬೆಂಗಳೂರು ಮಾತ್ರವಲ್ಲದೆ, ರಾಷ್ಟ್ರ ಮಟ್ಟದಲ್ಲೂ ಬೆಳೆಯುವ ಶಕ್ತಿಯನ್ನು ಚಾಮುಂಡೇಶ್ವರಿ ತಾಯಿ, ಕಾಲಭೈರವ ಸ್ವಾಮಿ, ಬಾಲಗಂಗಾಧರನಾಥ ಸ್ವಾಮೀಜಿಯವರು ಕರುಣಿಸಲಿ ಎಂದು ಆಶೀರ್ವದಿಸಿದರು.



ಮೈಸೂರಿನ ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಭಾನುವಾರ ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ ಸಮ್ಮುಖದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಸಿ.ಬಸವರಾಜು, ಉಪಾಧ್ಯಕ್ಷ ಪಿ.ಮಹದೇವಪ್ಪ, ಕಾರ್ಯದರ್ಶಿ ಆರ್.ಲಿಂಗಪ್ಪ, ಸಹ ಕಾರ್ಯದರ್ಶಿ ಎಸ್.ಬಸವರಾಜು ಮತ್ತಿತರರು ಚಿತ್ರದಲ್ಲಿದ್ದಾರೆ.



ಮೈಸೂರಿನ ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಭಾನುವಾರ ಒಕ್ಕಲಿಗರ ಹಿತರಕ್ಷಣಾ ಸಮಿತಿ ವತಿಯಿಂದಲೂ ನೂತನ ಶಾಸಕ ಕೆ.ಹರೀಶ್‌ಗೌಡರನ್ನು ಅಭಿನಂದಿಸಲಾಯಿತು. ಸಮಿತಿ ಗೌರವಾಧ್ಯಕ್ಷ ರಾಜಣ್ಣ, ಅಧ್ಯಕ್ಷ ಎಂ.ಶಿವಕುಮಾರ್, ಕಾರ್ಯದರ್ಶಿ ಎಸ್.ಬಾಲು, ಖಜಾಂಚಿ ಜಿ.ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪ್ರಕಾಶ್, ನಿರ್ದೇಶಕರಾದ ಎಂ.ಮಾದಪ್ಪ, ಆರ್.ರಾಜಕುಮಾರ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಗಣಪತಿ ಸಚ್ಚಿದಾನಂದ ಶ್ರೀಗಳ 81ನೇ ಜನ್ಮದಿನ

ವಿಶೇಷಚೇತನ ಮಕ್ಕಳಿಗೆ ವಿವಿಧ ಸವಲತ್ತು ವಿತರಣೆ



ಮೈಸೂರು, ಜೂ.4(ಎಂಟಿವೈ)- ದತ್ತಪೀಠದ ಸ್ಥಾಪನೆ ಮಾಡಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ತಮ್ಮ ಆಶ್ರಮದಲ್ಲಿ ಪ್ರತ್ಯೇಕತೆ, ಜಾತಿ-ಧರ್ಮದ ತಾರತಮ್ಯ ಮಾಡದೆ ಎಲ್ಲರನ್ನು ಸಮಾನ ದೃಷ್ಟಿಯಿಂದ ಕಾಣುವ ಮಹಾನ್ ಮಾನವತಾವಾದಿಯಾಗಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಣ್ಣಿಸಿದ್ದಾರೆ.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಭಾನುವಾರ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 81ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ವಿಶೇಷ ಮಕ್ಕಳಿಗೆ ವಿವಿಧ ಸೌಲಭ್ಯ ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೈಸೂರಲ್ಲಿ ದತ್ತಪೀಠವನ್ನು ಸ್ಥಾಪಿಸಿದ ಧಾರ್ಮಿಕ ಕಾರ್ಯದೊಂದಿಗೆ ವಿವಿಧ ಸಮಾಜ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ಸಾರ್ಥಕ ಸೇವೆಯನ್ನು ನಡೆಸುತ್ತಾ ಬಂದಿದ್ದಾರೆ. ಆಶ್ರಮಕ್ಕೆ ಬರುವ ಭಕ್ತರಲ್ಲಿ ಯಾರಿಗೂ ತಾರತಮ್ಯ ಮಾಡದೇ ಎಲ್ಲರನ್ನೂ ಸರಿಸಮಾನರಂತೆ ಕಾಣುವ ಮೂಲಕ ದೊಡ್ಡ ಮಹಾನ್ ಮಾನವತಾವಾದಿ ಎಂದು ತೋರ್ಪಡಿಸಿದ್ದಾರೆ ಎಂದು ತಿಳಿಸಿದರು.

ಎಲ್ಲಾ ಜನರು ಒಂದೇ ಎಂಬ ಭಾವನೆಯಿಂದ ಆಶ್ರಮವನ್ನು ಬೃಹದಾಕಾರವಾಗಿ ಕಟ್ಟಿದ್ದಾರೆ. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜೀವನ ಇತಿಹಾಸದ ಪುಟಗಳಲ್ಲಿ ಬರೆದಿಡುವಂತದ್ದಾಗಿದೆ. ಅವರ ಜನಪರ ಕಾರ್ಯಗಳಿಗೆ ನಾನು ಸಂಪೂರ್ಣ ಸಹಕಾರ ಕೊಟ್ಟು ಕೆಲಸ ಮಾಡುತ್ತೇನೆ ಎಂದರು.

ಇಂದು ಎಲ್ಲೆಡೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಆಚರಿಸಲಾಗುತ್ತಿದೆ. ಮೈಸೂರು ಸಂಸ್ಥಾನದಲ್ಲಿ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿ ಬಡವರಿಗೆ ನೆರವಾಗಿ ತಮ್ಮ ಹೆಸರನ್ನು ಅಮರವಾಗಿಸಿದ್ದಾರೆ. ಅವರ ಹುಟ್ಟಿದ ದಿನದಂದೇ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಜನಿಸಿದ್ದು, ಜನರ ಏಳಿಗೆಗಾಗಿ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಐತಿಹಾಸಿಕ ನಿರ್ಧಾರಗಳಿಂದ ಮಾದರಿ ಆಡಳಿತ ನೀಡಿ ಮಾದರಿ ಎನಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತೆ ಗಣಪತಿ ಸ್ವಾಮೀಜಿ ಸಮಾಜ ಸೇವಾ ಕಾರ್ಯಕ್ರಮವನ್ನು ಮುಂದುವರೆಸಿದ್ದಾರೆ ಎಂದು ತಿಳಿಸಿದರು.

ಇಂದು ಜನ್ಮದಿನದಂದು ಆದಿವಾಸಿ ಮಕ್ಕಳಿಗೆ ಶಾಲಾ ವಾಹನ ನೀಡುವುದು. ಅಲ್ಪಸಂಖ್ಯಾತರಿಗೆ, ವಿಶೇಷಚೇತನರಿಗೆ ಸಹಾಯ ಹಸ್ತ ನೀಡಿ, ಸಮಾಜಮುಖಿ ಕೆಲಸ ಮಾಡುವ ಮೂಲಕ ಸ್ವಾಮೀಜಿಯವರು ತಮ್ಮ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿದ್ದಾರೆ. ಸ್ವಾಮೀಜಿಯವರ ಇಡೀ ಜೀವನವೇ ಸಾರ್ಥಕವಾಗಿಸಿದ್ದಾರೆ. ದೊಡ್ಡ ಮಾನವತಾವಾದಿಯಾದ ಸ್ವಾಮೀಜಿಗಳಿಗೆ ಎಲ್ಲ ಜನರು ಪ್ರಾರ್ಥನೆ ಮಾಡಿ, ಅವರು ನೂರು ವರ್ಷಗಳನ್ನು ಆರೋಗ್ಯವಂತರಾಗಿ ಪೂರೈಸಲಿ ಎಂದು ಹಾರೈಸಿದರು.

ಭೂಕಂಪ ಸೇರಿದಂತೆ ಯಾವುದೇ ಅವಘಡಗಳಿಂದ ಭಗವದ್ಗೀತೆ ನಮ್ಮನ್ನು ರಕ್ಷಣೆ ಮಾಡುತ್ತದೆ, ಭಗವದ್ಗೀತೆಯನ್ನು ಕಂಠಪಾಠ ಮಾಡುತ್ತಿದ್ದರೆ ಮನಸ್ಸು ಪವಿತ್ರವಾಗುತ್ತದೆ, ಪ್ರತಿದಿನ ಗೀತೆಯ ಒಂದು ಅಧ್ಯಾಯ ಓದಿದರೆ ಒಳಿತಾಗಲಿದೆ. ಶೋಷಿತ ಸಮುದಾಯದವರಿಗೆ, ನಿರ್ಗತಿಕರಿಗೆ, ಬಡವರಿಗೆ, ಮಹಿಳೆಯರಿಗೆ ಮತ್ತು ಎಲ್ಲಾ ಜನರಿಗೆ ಸ್ವಾಮೀಜಿಯವರ ಮಾರ್ಗದರ್ಶನ ಲಭ್ಯವಾಗಲಿ. ಪಾಳು ಬಿದ್ದ ಈ ದೊಡ್ಡದಾದ ಜಾಗವನ್ನು ಪೂಜ್ಯ ಸ್ವಾಮೀಜಿಯವರು ವೈಕುಂಠವನ್ನಾಗಿ ಮಾಡಿದ್ದಾರೆ. ಶ್ರೀಗಳಲ್ಲಿ ಮಾನವೀಯ ಗುಣ ತುಂಬಿ ತುಳುಕಾಡುತ್ತಿದೆ ಎಂದರು.

ವಿವಿಧ ಸಮಾಜ ಸೇವಾ ಕಾರ್ಯ: ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 81ನೇ ಜನ್ಮದಿನದ ಅಂಗವಾಗಿ ವಿವಿಧ ಸಮಾಜ ಸೇವಾ ಕಾರ್ಯ ನಡೆಸಲಾಯಿತು. ವಿಶೇಷಚೇತನ ಮತ್ತು ಹಿರಿಯ ನಾಗರಿಕರ ಇಲಾಖೆಯ ಅಧಿಕಾರಿಗಳ ಸಲಹೆಯ ಮೇರೆಗೆ 25 ವಿಶೇಷ ಮಕ್ಕಳಿಗೆ ಸ್ಪೆಷಲ್ ಕುರ್ಚಿ, 13 ವಿಶೇಷ ಮಕ್ಕಳಿಗೆ ಸ್ಟ್ಯಾಂಡಿಂಗ್ ಫ್ರೇಂ, 6 ಮಕ್ಕಳಿಗೆ ರೋಲೇಟರ್ ವಾಕರ್ಸ್, ಇಬ್ಬರು ಮಕ್ಕಳಿಗೆ ರೆಕ್ಸಿನ್ ಹಾಸಿಗೆ, 30 ಬುದ್ಧಿಮಾಂದ್ಯ ಮಕ್ಕಳಿಗೆ ಕಲಿಕೆಯ ವಸ್ತುಗಳ ಕಿಟ್, ಐವರು ವಯಸ್ಕ ವಿಶೇಷಚೇತನರಿಗೆ ವಾಕರ್ಸ್ ವಿತರಿಸಲಾಯಿತು. ಹಾಡಿಯಿಂದ ಶಾಲೆಗೆ ಕರೆದೊಯ್ಯಲು ಹೆಚ್.ಡಿ.ಕೋಟೆಯ ಸೋನಹಳ್ಳಿಯ ಮಡಿಲು ಸೇವಾ ಟ್ರಸ್ಟ್‌ಗೆ ಮಿನಿ ವಾಹನವೊಂದನ್ನು ಉಡುಗೊರೆಯಾಗಿ ನೀಡಲಾಯಿತು.

ಇದಕ್ಕೂ ಮೊದಲು ಭಕ್ತರಿಗೆ ಆಶೀರ್ವಚನ ನೀಡಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಭಗವದ್ಗೀತೆ ಎಲ್ಲರನ್ನು ರಕ್ಷಣೆ ಮಾಡುವ ಒಂದು ವರ ಎಂದು ಬಣ್ಣಿಸಿದರು. ಇದೇ ವೇಳೆ ಭಗವದ್ಗೀತೆ 700 ಶ್ಲೋಕಗಳನ್ನು ಕಂಠಪಾಠ ಮಾಡಿದವರಿಗೆ ಚಿನ್ನದ ಪದಕವನ್ನು ಸ್ವಾಮೀಜಿ ವಿತರಣೆ ಮಾಡಿದರು. ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಪೀಠದ ವತಿಯಿಂದ ಪೀಠ ಪ್ರಸಾದ ನೀಡಿ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಗೌರವಿಸಿದರು.



5 ಗ್ಯಾರಂಟಿ ಯೋಜನೆ ಜಾರಿ ಐತಿಹಾಸಿಕ ತೀರ್ಮಾನ

ಕೃತಜ್ಞತಾ ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಜೂ.4– ದೇಶದ ಇತಿಹಾಸದಲ್ಲೇ ಯಾವುದೇ ಸರ್ಕಾರ ಕೈಗೊಳ್ಳದ ಐತಿಹಾಸಿಕ ತೀರ್ಮಾನ ಕೈಗೊಂಡು ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಹೆಳವರಹುಂಡಿ ಗ್ರಾಮದ ಬಳಿ ಕಾಂಗ್ರೆಸ್ ಪಕ್ಷದಿಂದ ಆಯೋಜಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಜಾತಿ, ಧರ್ಮ, ಭಾಷೆಗೆ ಸೀಮಿತಗೊಳಿಸದೇ ಎಲ್ಲರಿಗೂ ಉಚಿತ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಆದರೆ ಜನರು ಮಾತ್ರ ಅವರನ್ನು ಜಾತಿವಾದಿ ಎನ್ನುತ್ತಾರೆ. ಅವರು ಜಾತಿವಾದಿಯಾಗಿದ್ದರೇ ಎಲ್ಲಾ ಜಾತಿ ಧರ್ಮದವರಿಗೆ ಉಚಿತ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುತ್ತಿರಲಿಲ್ಲ ಎಂದರು.

ಇಡೀ ದೇಶದಲ್ಲಿ ಉಚಿತ ಯೋಜನೆಗಳನ್ನು ಜಾರಿಗೊಳಿಸಿದ್ದರೇ ಅದು ಕಾಂಗ್ರೆಸ್ ಪಕ್ಷ ಮಾತ್ರ. ವಿಪಕ್ಷದವರು ಕಾಂಗ್ರೆಸ್ ಕೇವಲ ಚುನಾವಣೆಯಲ್ಲಿ ಮತ ಪಡೆಯಲು ಗ್ಯಾರಂಟಿ ಭರವಸೆ ನೀಡುತ್ತಿದೆ ಎಂದು ಆರೋಪಿಸುತ್ತಿದ್ದರು. ಆದರೀಗ ಗ್ಯಾರಂಟಿ ಯೋಜನೆ ಜಾರಿಯಿಂದ ಎಲ್ಲರಿಗೂ ಉಸಿರುಗಟ್ಟುವಂತಾಗಿದೆ ಎಂದರು.

ವಿಪಕ್ಷಗಳು ಅಧಿಕಾರದಲ್ಲಿದ್ದಾಗ ಜನಪರ ಕೆಲಸ ಮಾಡಲೇ ಇಲ್ಲ. ಬಿಜೆಪಿ, ಜೆಡಿಎಸ್‌ಗಳು ಜನರ ಕಷ್ಟ ಸುಖಕ್ಕೆ ಸ್ಪಂದಿಸಲಿಲ್ಲ. ಅವರ ಅವಧಿಯಲ್ಲಿ ಆಡಳಿತ ಯಂತ್ರವೇ ಕುಸಿದು ಹೋಗಿತ್ತು. ಬರೀ ಆಶ್ವಾಸನೆ, ಸುಳ್ಳು ಭರವಸೆಗಳನ್ನು ಕೊಡುತ್ತಲೇ ಬಂದರು. ಇದರಿಂದ ರೋಸಿ ಹೋದ ಜನತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಜನ ಕೊಟ್ಟಿರುವ ಅಧಿಕಾರವನ್ನು ನಮ್ಮ ಸರ್ಕಾರ ಸಮರ್ಪಕವಾಗಿ ಬಳಸಿಕೊಂಡು ಜನಪರ ಆಡಳಿತ ನಡೆಸಲಿದೆ ಎಂದರು.

ನನ್ನ ವಿರುದ್ಧ ಸ್ಪರ್ಧಿಸಿದ್ದವರು ಕೋಳಿ ಕೂಗುವ ಮುಂಚೆಯೇ ಸಾವಿನ ಮನೆ ಮುಂದೆ ಹಾಜರಾಗುತ್ತಿದ್ದರು. ಇದರಿಂದ ನಮ್ಮ ಕಾರ್ಯಕರ್ತರು ನೀವು ಬರುತ್ತಿಲ್ಲ ಎಂದು ನನ್ನ ಮೇಲೆ ಬೇಸರ ಮಾಡಿಕೊಳ್ಳುತ್ತಿದ್ದರು. ಮಾಜಿ ಶಾಸಕರು ಅವರ ಅವಧಿಯಲ್ಲಾದ ಕೆಲಸಗಳನ್ನು ಮುಂದುವರೆಸದಿದ್ದರೆ ಪ್ರತಿಭಟಿಸುವುದಾಗಿ ಎಚ್ಚರಿಸಿದ್ದಾರೆ. ಮೊದಲು ಅವರು ವಾಪಸ್ ಹೋಗಿರುವ ಡಿಪ್ಲೋಮಾ ಕಾಲೇಜು ವಾಪಸ್ ತರಲಿ, ಆಗ ಅವರೇಳಿದಂತೆ ಮಾಡೋಣ ಎಂದು ವ್ಯಂಗ್ಯವಾಡಿದರು.

ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರ ಪರಿಶ್ರಮ ಹಾಗೂ ಕ್ಷೇತ್ರದ ಮತದಾರರು ಕೈ ಹಿಡಿದಿದ್ದರಿಂದ ಶಾಸಕನಾಗಿ ಆಯ್ಕೆಯಾಗಿ, ಇದೀಗ ಸಚಿವನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿ ಎಲ್ಲಾ ಜಾತಿ ಜನಾಂಗದವರು ನನಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ನಾನು ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ಮಾತನಾಡಿ, ಪ್ರಸಕ್ತ ಚುನಾವಣೆ ನಮ್ಮ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಆದರೆ ಕಾರ್ಯಕರ್ತರು ತಾವೇ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇವೆಂದು ಭಾವಿಸಿ ಶ್ರಮಿಸುವ ಮೂಲಕ ಗೆಲುವು ತಂದು ಕೊಟ್ಟಿದ್ದಾರೆ. ಹಾಗಾಗಿ ನಮ್ಮೆಲ್ಲ ಕಾರ್ಯಕರ್ತರು ಹಾಗೂ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಬನ್ನೂರು ಭಾಗವನ್ನು ಒಂದು ಪಕ್ಷಕ್ಕೆ ಸೀಮಿತ ಎನ್ನುವಂತೆ ಬಿಂಬಿಸಲಾಗಿತ್ತು. ಅದನ್ನು ಮೀರಿ ಅಲ್ಲಿನ ಜನ ನಮಗೆ ಮತ ನೀಡಿದ್ದಾರೆ ಎಂದರು.

ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಈ ಬಾರಿಯ ಚುನಾವಣೆ ಜಾತ್ಯಾತೀತ ಮತ್ತು ಪ್ರಗತಿಪರ ಚಿಂತನೆವುಳ್ಳ ಕಾಂಗ್ರೆಸ್ ನಿಲುವು ಒಂದೆಡೆಯಾದರೇ, ಮತ್ತೊಂದೆಡೆ ಕೋಮು–ದ್ವೇಷ ಹರಡುವ, ಭ್ರಷ್ಟಾಚಾರ, ಉದ್ದಿಮೆದಾರರ ಪರ ನಿಲುವು ಹೊಂದಿದ್ದ ಬಿಜೆಪಿ ಸಿದ್ಧಾಂತಗಳ ನಡುವಿನ ಯುದ್ಧವಾಗಿತ್ತು. ಕೊನೆಗೆ ಜನಪರವಿರುವ ಕಾಂಗ್ರೆಸ್ ಪರ ಫಲಿತಾಂಶ ಬಂದಿದೆ. ಸಿದ್ದರಾಮಯ್ಯ ಮತ್ತು ಮಹದೇವಪ್ಪ ಅಂಬೇಡ್ಕರ್ ಆದರ್ಶಗಳನ್ನಿಟ್ಟು ಮೌಲ್ಯಾಧಾರಿತ, ಸಂವಿಧಾನ ಪರವಾಗಿ ರಾಜಕಾರಣ ಮಾಡಲಿದ್ದಾರೆ. ಮಹದೇವಪ್ಪ ಅವರಿಗೆ ಈಗಾಗಲೇ ಅನೇಕ ಖಾತೆಗಳನ್ನು ನಿಭಾಯಿಸಿದ ಅನುಭವವಿದ್ದು, ಸಮಾಜ ಕಲ್ಯಾಣ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡಲಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರನ್ನು ತೆರೆದ ವಾಹನದಲ್ಲಿ ಹೊಸ ತಿರುಮಕೂಡಲು ವೃತ್ತದಿಂದ ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಡಾ.ಕೆ.ಮಹದೇವ, ಸಹಕಾರ ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಎಸ್ಸಿ, ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲು, ಮೂಗೂರು ಗುರುಸಿದ್ದಪ್ಪ, ಮಾಜಿ ಶಾಸಕರಾದ ಕೃಷ್ಣಪ್ಪ, ಸುನೀತಾ ವೀರಪ್ಪ ಗೌಡ, ಮಾಜಿ ಸಂಸದ ಶಿವಣ್ಣ, ಜಿಪಂ ಮಾಜಿ ಸದಸ್ಯೆ ಸುಧಾ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಪುರಸಭಾ ಮಾಜಿ ಅಧ್ಯಕ್ಷರಾದ ಬಸವಣ್ಣ, ಎನ್.ಎಸ್.ಬಸವರಾಜು, ಟಿ.ಎಂ.ನಂಜುಂಡಸ್ವಾಮಿ, ಪದ್ಮನಾಭ, ಮುನಾವರ್ ಪಾಷ, ಸದಸ್ಯ ಬಾದಾಮಿ ಮಂಜು, ಕ್ಷೇತ್ರಾಧ್ಯಕ್ಷರಾದ ಎಂ.ಡಿ. ಬಸವರಾಜು, ಚನ್ನಕೇಶವ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಮರಯ್ಯ, ಮಹಿಳಾ ಘಟಕದ ಮಾಜಿ ಅಧ್ಯಕ್ಷ ಲತಾ, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಸದಸ್ಯ ಪಿ.ಪುಟ್ಟರಾಜ್, ಹಿರಿಯ ಮುಖಂಡ ಪಿ.ಸ್ವಾಮಿನಾಥ್‌ಗೌಡ, ಸಿದ್ದರಾಮಯ್ಯ ಅಭಿಮಾನಿ ಬಳಗದ ಸಂದೇಶ್, ಮಣಿಕಂಠ, ಪ್ರಥಮ ದರ್ಜೆ ಗುತ್ತಿಗೆದಾರರಾದ ಎ.ಎನ್.ಸ್ವಾಮಿ, ಕೆ.ಎಂ. ಮಧುಕುಮಾರ್, ಮಹಿಳಾಧ್ಯಕ್ಷೆ ವೀಣಾ, ಬೃಂದಾ ಕೃಷ್ಣೇಗೌಡ, ಟೌನ್ ಅಧ್ಯಕ್ಷ ಅಂದಾನಿಗೌಡ, ಹುಣಸೂರು ಬಸವಣ್ಣ ಮತ್ತಿತರರಿದ್ದರು.

ಭರ್ಜರಿ ಬಾಡೂಟ: ಕಾರ್ಯಕ್ರಮದಲ್ಲಿ ಕಾರ್ಯಕರ್ತರು, ಮತದಾರರಿಗೆ ಭರ್ಜರಿ ಬಾಡೂಟ ಹಾಗೂ ಸಸ್ಯಾಹಾರಿಗಳಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.



> ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಚಾಮರಾಜನಗರದಲ್ಲಿ ಸುನೀಲ್ ಬೋಸ್ ಹಾಗೂ ಮೈಸೂರು ಕ್ಷೇತ್ರದಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪರ್ಧಿಸುವ ವಿಚಾರ ಜನರು ಹಾಗೂ ಪಕ್ಷದ ತೀರ್ಮಾನಕ್ಕೆ ಬಿಟ್ಟಿದ್ದು. ಈ ಬಗ್ಗೆ ಯಾವುದೇ ನಿರ್ಧಾರವಾಗಿಲ್ಲ. ಕಾರ್ಯಕರ್ತರ ಅಭಿಪ್ರಾಯವನ್ನು ಹೈಕಮಾಂಡ್‌ಗೆ ತಿಳಿಸುತ್ತೇವೆ. ಲೋಕಸಭೆ ಚುನಾವಣೆಯಲ್ಲಿ ಯಾರೇ ಸ್ಪರ್ಧಿಸಿದರೂ ಗೆಲುವಿಗೆ ಎಲ್ಲರೂ ದುಡಿಯೋಣ.
>
> – ಡಾ.ಹೆಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ.

ಗ್ಯಾರಂಟಿಗಳನ್ನು ಜಾರಿಗೊಳಿಸಿ

ಸಿದ್ದರಾಮಯ್ಯ ಜನರ ನಂಬಿಕೆಗೆ ಪಾತ್ರರಾಗಿದ್ದಾರೆ

ನಂಜನಗೂಡು, ಜೂ.4– ಕಾಂಗ್ರೆಸ್ ಪಕ್ಷ ಚುನಾವಣೆಗೂ ಮುನ್ನ ನೀಡಿದ್ದ 5 ಗ್ಯಾರಂಟಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೊದಲ ಸಂಪುಟ ಸಭೆಯಲ್ಲೇ ಜಾರಿಗೊಳಿಸುವ ಮೂಲಕ ಜನರ ನಂಬಿಕೆಗೆ ಪಾತ್ರರಾಗಿದ್ದಾರೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.



ತಾಲೂಕಿನ ಕಳಲೆ, ಕೆರೆಹುಂಡಿ ಗ್ರಾಮಗಳಲ್ಲಿ ಆಯೋಜಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ 2013ರಲ್ಲೂ ದಲಿತರು, ಕಾರ್ಮಿಕರು, ರೈತರು, ಬಡವರ ಪರ ಅನೇಕ ಯೋಜನೆಗಳನ್ನು ಜಾರಿಗೆ ತಂದು ಅಭಿವೃದ್ಧಿ ಹರಿಕಾರ ಎಂದು ಹೆಸರು ಪಡೆದಿದ್ದರು. ಅಲ್ಲದೇ ಯಾವುದೇ ಕಪ್ಪುಚುಕ್ಕೆ ಇಲ್ಲದೇ 5 ವರ್ಷ ಪೂರ್ಣಾವಧಿ ಸರ್ಕಾರ ನಡೆಸಿ ಜನರ ವಿಶ್ವಾಸ ಗಳಿಸಿದ್ದರು. ರಾಜ್ಯದ ಜನರ ಆಶೀರ್ವಾದದಿಂದ ಈ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ, ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಿದ್ದಾರೆ. ಅಲ್ಲದೇ ಮೊದಲ ಸಂಪುಟ ಸಭೆಯಲ್ಲೇ ಕೊಟ್ಟಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿದರು. ಮುಖಂಡರಾದ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠನಾಯಕ, ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಜಿಪಂ ಮಾಜಿ ಸದಸ್ಯೆ ಲತಾ, ಬ್ಲಾಕ್ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜು, ಶಿವಪ್ಪ ದೇವರು, ಜಯಮಾಲ, ನಾಗರಾಜಯ್ಯ, ರಾಜೇಶ್, ಬಸವಣ್ಣ ಶಾಂತಮ್ಮ, ಮಹದೇವು, ಮಲ್ಲೇಶ್, ಶಿವನಂಜಯ್ಯ, ಬಾಲಕೃಷ್ಣ, ಗ್ರಾಪಂ ಸದಸ್ಯರಾದ ಗೋವಿಂದ ನಾಯಕ, ಹರೀಶ್, ಪ್ರತಾಪ್ ಇದ್ದರು.

ನಂ.ಗೂಡಲ್ಲಿ ಕ್ಷುಲ್ಲಕ ಕಾರಣಕ್ಕೆ ಗುಂಪು ಘರ್ಷಣೆ: ಇಬ್ಬರಿಗೆ ತೀವ್ರ ಗಾಯ

ನಂಜನಗೂಡು, ಜೂ.4– ಕ್ಷುಲ್ಲಕ ಕಾರಣಕ್ಕೆ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಗಿ ಇಬ್ಬರು ಯುವಕರಿಗೆ ಡ್ರ್ಯಾಗನ್‌ನಿಂದ ಇರಿದು ಗಂಭೀರವಾಗಿ ಗಾಯಗೊಳಿಸಿರುವ ಘಟನೆ ನಗರದ ನೀಲಕಂಠನಗರ ಬಡಾವಣೆಯಲ್ಲಿ ಜರುಗಿದೆ.

ನೀಲಕಂಠನಗರ ನಿವಾಸಿಗಳಾದ ಆಕಾಶ್(19), ಪ್ರಸಾದ್(22) ಗಂಭೀರವಾಗಿ ಗಾಯಗೊಂಡು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಭಾನುವಾರ ಸಂಜೆ ವೇಳೆ ಹುಟ್ಟುಹಬ್ಬ ಆಚರಣೆ ವೇಳೆ ಕ್ಷುಲ್ಲಕ ಕಾರಣಕ್ಕಾಗಿ ಎರಡು ಗುಂಪುಗಳ ನಡುವೆ ಮಾರಕಾಸ್ತ್ರಗಳಿಂದ ಹೊಡೆದಾಟ ನಡೆದಿದೆ. ಘಟನೆಯಲ್ಲಿ ಸುಮಾರು ಏಳುಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಪಟ್ಟಣ ಪೊಲೀಸರು ಹೆಚ್ಚಿನ ಪೊಲೀಸರನ್ನು ನಿಂಯೋಜಿಸಿ ರಕ್ಷಣೆ ನೀಡುವ ಮೂಲಕ ಪ್ರಕರಣವನ್ನು ತಿಳಿಗೊಳಿಸಿದ್ದಾರೆ. ಸ್ಥಳದಲ್ಲಿ ಸಶಸ್ತ್ರ ಮೀಸಲು ಪಡೆಯ ಪೊಲೀಸರು ಬೀಡು ಬಿಟ್ಟಿದ್ದಾರೆ.

ಹುಣ್ಣಿಮೆ: ಶ್ರೀಕಂಠೇಶ್ವರನ ದರ್ಶನಕ್ಕೆ ಹರಿದು ಬಂದ ಭಕ್ತ ಸಾಗರ

ನಂಜನಗೂಡು, ಜೂ.4– ಹುಣ್ಣಿಮೆ ಅಂಗವಾಗಿ ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ ಸಾವಿರಾರು ಭಕ್ತರು ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದು ಪುನೀತರಾದರು.



ಶನಿವಾರ ಸಂಜೆಯಿಂದಲೇ ನಂಜನಗೂಡಿಗೆ ಆಗಮಿಸಿದ ಭಕ್ತರು, ಭಾನುವಾರ ಮುಂಜಾನೆ 4 ಗಂಟೆಯಿಂದಲೇ ಕಪಿಲಾ ನದಿಯಲ್ಲಿ ಮಿಂದು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೇ ತುಲಾಭಾರ ಸೇವೆ, ಉರುಳು ಸೇವೆ, ಧೂಪ, ದೀಪದ ಸೇವೆ, ಈಡುಗಾಯಿ ಸೇವೆ, ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರ ಸ್ವಾಮಿಗೆ ಬೆಳ್ಳಿ ಅಂಗಾಂಗಳ ಹರಕೆಯನ್ನು ಹುಂಡಿಗೆ ಹಾಕಿ ಶ್ರದ್ಧಾ ಭಕ್ತಿಯಿಂದ ಸೇವೆ ಸಲ್ಲಿಸಿದರು.

ವಿಶೇಷವಾಗಿ ಶ್ರೀಕಂಠೇಶ್ವರಸ್ವಾಮಿ ಅವರಿಗೆ ಚಿನ್ನದ ಕೊಳಗ ತೊಡಿಸಿ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ಪಂಚತೀರ್ಥಗಳ ಅಭಿಷೇಕ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲಾನ್ಯ ಅರ್ಪಣೆ, ಕಲ್ಲು–ಸಕ್ಕರೆ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ನಂತರ ಮಹಾಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ದೇವಾಲಯದ ದಾಸೋಹ ಭವನದಲ್ಲಿ ಹುಣ್ಣಿಮೆ ಅಂಗವಾಗಿ ಭಕ್ತರಿಗೆ ಪಾಯಸ, ಅನ್ನ, ಸಾಂಬರ್, ಪಲ್ಯ ವ್ಯವಸ್ಥೆ ಮಾಡಲಾಗಿತ್ತು.

ಒಡಿಸ್ಸಾ ರೈಲು ದುರಂತದಿಂದ ಅತಂತ್ರರಾಗಿದ್ದ

ವಾಲಿಬಾಲ್ ಆಟಗಾರರು ಸುರಕ್ಷಿತವಾಗಿ ಮೈಸೂರಿಗೆ ಆಗಮನ



ಹುಣಸೂರು, ಜೂ.4– ಒಡಿಸ್ಸಾ ರೈಲು ದುರಂತದಿಂದಾಗಿ ರೈಲುಗಳ ಸಂಚಾರ ರದ್ದಾದ ಹಿನ್ನೆಲೆಯಲ್ಲಿ ಕೋಲ್ಕತ್ತಾದ ಹೌರಾ ನಿಲ್ದಾಣದಲ್ಲಿ ಸಿಲುಕಿದ್ದ ವಾಲಿಬಾಲ್ ಆಟಗಾರರು ಸುರಕ್ಷಿತವಾಗಿ ಮೈಸೂರಿಗೆ ತಲುಪಿದ್ದಾರೆ.

ರಾಜ್ಯ ಸರ್ಕಾರ ಇವರನ್ನು ಕರೆತರಲು ವ್ಯವಸ್ಥೆ ಕಲ್ಪಿಸಿತ್ತು. ಇಂದು ಮುಂಜಾನೆ ಕೋಲ್ಕತ್ತಾದಿಂದ ವಿಮಾನದಲ್ಲಿ ಹೊರಟ ಆಟಗಾರರು ಬೆಂಗಳೂರಿಗೆ ತಲುಪಿ, ಅಲ್ಲಿಂದ ಮೈಸೂರಿಗೆ ಆಗಮಿಸಿದರು.

ಹುಣಸೂರಿನ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಅವರ ಮೈಸೂರು ನಿವಾಸಕ್ಕೆ ಭೇಟಿ ನೀಡಿದ ಆಟಗಾರರು ಅವರಿಗೆ ಅಭಿನಂದನೆ ಸಲ್ಲಿಸಿದರು.

ರೈಲು ದುರಂತದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳಕ್ಕೆ ನ್ಯಾಷನಲ್ ವಾಲಿಬಾಲ್ ಚಾಂಪಿಯನ್‌ಶಿಪ್‌ಗೆ ತೆರಳಿದ್ದ ಕರ್ನಾಟಕದ 16 ವರ್ಷದೊಳಗಿನ ಬಾಲಕರ ಹಾಗೂ ಬಾಲಕಿಯರ ತಂಡದ ಆಟಗಾರರು ಹಾಗೂ ಕೋಚ್‌ಗಳು ಹೌರಾದಿಂದ ಬೆಂಗಳೂರಿಗೆ ವಾಪಸ್ ಬರಲಾಗದೆ ಪರದಾಡಿದ್ದರು. ಈ ವಿಷಯ ತಿಳಿದು ಕ್ರೀಡಾಪಟುಗಳ ಸಂಕಷ್ಟಕ್ಕೆ ಸ್ಪಂದಿಸಿದ್ದ ಸಿಎಂ ಸಿದ್ದರಾಮಯ್ಯ ಕ್ರೀಡಾಪಟುಗಳಿಗೆ ಧೈರ್ಯ ತುಂಬಿ, ಸರ್ಕಾರದಿಂದ ವಿಮಾನದ ಮೂಲಕ ಅವರನ್ನು ವಾಪಸ್ ಕರೆತರಲು ವ್ಯವಸ್ಥೆ ಮಾಡಿದ್ದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಹುಣಸೂರು ಸೇರಿದಂತೆ ರಾಜ್ಯದ ಕ್ರೀಡಾಪಟುಗಳು ತಾಯ್ನಾಡಿಗೆ ಮರಳಲು ಸಾಧ್ಯವಾಗದೇ ಸಂಕಷ್ಟದಲ್ಲಿರುವುದನ್ನು ಗಮನಕ್ಕೆ ಬಂದ ಕೂಡಲೇ ನಾನು ದೂರವಾಣಿ ಮೂಲಕ ಕ್ರೀಡಾಪಟುಗಳಿಗೆ ಆತ್ಮಸ್ಥೈರ್ಯ ತುಂಬಿ ಕೂಡಲೇ ಮುಖ್ಯಮಂತ್ರಿಗಳಿಗೆ ಮಾಹಿತಿ ತಿಳಿಸಿದೆ. ಮುಖ್ಯಮಂತ್ರಿಗಳು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಹೌರಾಕ್ಕೆ ಕಳುಹಿಸಿ ವಿಮಾನದ ಮೂಲಕ ಕ್ರೀಡಾಪಟುಗಳನ್ನು ತಾಯ್ನಾಡಿಗೆ ಕರೆತಂದಿದ್ದಾರೆ. ಇದಕ್ಕಾಗಿ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಭಾರಿಯಾಗಿದ್ದೇನೆ ಎಂದರು.

ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ವಾಲಿಬಾಲ್ ಕೋಚ್ ಮಮತಾ ಶೆಟ್ಟಿ, ದೇವರ ದಯೆಯಿಂದ ನಾವು ಬಚಾವಾಗಿದ್ದೇವೆ. ಚಾಂಪಿಯನ್‌ಶಿಪ್ ಮುಗಿಸಿ ಬಾಲಕ ಹಾಗೂ ಬಾಲಕಿಯರ ಎರಡೂ ತಂಡಗಳು ಬೆಂಗಳೂರಿಗೆ ಆಗಮಿಸುತ್ತಿದ್ದವು. ಬಾಲಕರ ತಂಡಕ್ಕೆ ಯಶವಂತಪುರ–ಹೌರಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಟಿಕೆಟ್ ಬುಕ್ ಆಗಿತ್ತು. ಆದರೆ ಬಾಲಕಿಯರ ತಂಡಕ್ಕೆ ರಿಸರ್ವೇಷನ್ ಟಿಕೆಟ್ ಸಿಕ್ಕಿರಲಿಲ್ಲ. ಹೀಗಾಗಿ ಕೋರಮಂಡಲ್ ಎಕ್ಸ್‌ಪ್ರೆಸ್‌ನಲ್ಲಿ ಚೆನ್ನೈಗೆ ಬಂದು ಅಲ್ಲಿಂದ ಬೆಂಗಳೂರಿಗೆ ಬರುವ ತೀರ್ಮಾನ ಮಾಡಿದ್ದೆವು. ಆದರೆ ಕೊನೆ ಕ್ಷಣದಲ್ಲಿ ಬೇರೆ ಟ್ರೈನ್ ಬೇಡ. ಎರಡು ತಂಡಗಳು ಒಂದೇ ಟ್ರೈನ್‌ನಲ್ಲಿ ಹೋಗೋಣ ಅಂತ ನಿರ್ಧಾರ ಮಾಡಿದೆವು. ಇದರಿಂದ ನಾವು ಕೋರ್‌ಮಂಡಲ್ ಟ್ರೈನ್‌ನಲ್ಲಿ ಪ್ರಯಾಣ ಮಾಡಲಿಲ್ಲ. ಹೀಗಾಗಿ ಅದೃಷ್ಟವಶಾತ್ ನಾವು ಬದುಕಿ ಬಂದೆವು ಎಂದು ಘಟನೆ ಬಗ್ಗೆ ಮಾಹಿತಿ ನೀಡಿದರು.



ಸುತ್ತೂರು ಮಠಕ್ಕೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭೇಟಿ ನೀಡಿ, ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ವೇಳೆ ಶಾಸಕರಾದ ಗಣಿಗ ರವಿಕುಮಾರ್, ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಕಾಂಗ್ರೆಸ್ ಮುಖಂಡ, ಸಮಾಜ ಸೇವಕ ವಿಜಯ್ ರಾಮೇಗೌಡ ಸೇರಿದಂತೆ ಇನ್ನಿತರರಿದ್ದರು.




ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಪಂ ಪಿಡಿಓ ಶ್ರೀನಿವಾಸ ನಿವೃತ್ತರಾದ ಹಿನ್ನೆಲೆಯಲ್ಲಿ ಗ್ರಾಪಂ ಸದಸ್ಯರು, ನೌಕರರು ಅವರನ್ನು ಸನ್ಮಾನಿಸಿ, ಬೀಳ್ಕೊಟ್ಟರು. ಈ ವೇಳೆ ಅಧ್ಯಕ್ಷ ಜವರೇಗೌಡ, ಉಪಾಧ್ಯಕ್ಷೆ ವತ್ಸಲ ಹಾಗೂ ಇತರರಿದ್ದರು.

ಜನರ ಅಪೇಕ್ಷೆಯಂತೆ ಸಿದ್ದರಾಮಯ್ಯ ಮುಖ್ಯಮಂತ್ರಿ

ಪಶುಸಂಗೋಪನಾ ಹಾಗೂ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್

ಪಿರಿಯಾಪಟ್ಟಣ, ಜೂ.4– ಬಿಜೆಪಿ ದುರಾಡಳಿತದಿಂದ ಬೇಸತ್ತಿದ್ದ ಜನತೆ ರಾಜ್ಯದ ಸರ್ವತೋಮುಖ ಅಭಿವೃದ್ಧಿ ಹಾಗೂ ಜನತೆಯ ಕಲ್ಯಾಣಕ್ಕಾಗಿ ಸಿದ್ದರಾಮಯ್ಯನವರ ನಾಯಕತ್ವ ಹಂಬಲಿಸಿದ್ದರು. ಇದೀಗ ಜನರ ಅಪೇಕ್ಷೆಯಂತೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ ಎಂದು ಪಶುಸಂಗೋಪನಾ ಹಾಗೂ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಸಚಿವರಾದ ಬಳಿಕ ಪ್ರಥಮ ಬಾರಿಗೆ ತಾಲೂಕಿಗೆ ಆಗಮಿಸಿ ಪಟ್ಟಣದ ಶಕ್ತಿ ದೇವತೆಗಳಾದ ಶ್ರೀಮಸಣಿಕಮ್ಮ ಹಾಗೂ ಕನ್ನಂಬಾಡಿ ಅಮ್ಮನವರಿಗೆ ಪೂಜೆ ಸಲ್ಲಿಸಿ ಮತದಾರರಿಗೆ ಕೃತಜ್ಞತೆ ಅರ್ಪಿಸಲು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.



ಕಳೆದ ಮೂರೂವರೆ ವರ್ಷ ರಾಜ್ಯದ ಜನರ ಪಾಲಿಗೆ ಕರಾಳ ದಿನಗಳಾಗಿದ್ದವು. ಅಗತ್ಯ ವಸ್ತುಗಳ ಬೆಲೆ ಏರಿಕೆ, ಭ್ರಷ್ಟಾಚಾರ, ಕಮಿಷನ್ ದಂಧೆ, ಸಾರ್ವಜನಿಕರ ಹಣದ ದುರ್ಬಳಕೆ, ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ಗೆ ಕತ್ತರಿ ಸೇರಿದಂತೆ ಯಾವುದೇ ಜನಪರ ಯೋಜನೆಗಳನ್ನು ರೂಪಿಸದ ಬಿಜೆಪಿ ಸರ್ಕಾರದಿಂದ ಬೇಸತ್ತ ಜನಸಾಮಾನ್ಯರು ರಾಜ್ಯದ ಸುಭಿಕ್ಷೆ ಹಾಗೂ ಜನ ಸಾಮಾನ್ಯರ ಏಳಿಗೆಗೆ ಸಿದ್ದರಾಮಯ್ಯನವರ ನಾಯಕತ್ವ ಬಯಸುತ್ತಿದ್ದರು. ಅದೇ ರೀತಿ ಈ ಬಾರಿಯ ಚುನಾವಣೆಯಲ್ಲಿ ರಾಜ್ಯದ ಜನತೆ ಸಿದ್ದರಾಮಯ್ಯನವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಆದ್ದರಿಂದ ಸಿದ್ದರಾಮಯ್ಯ ನೇತೃತ್ವದಲ್ಲಿ ಜನಪರ ಕೆಲಸಗಳನ್ನು ಮಾಡುವ ಮೂಲಕ ಶ್ರೀಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತೇವೆ. ಅದಕ್ಕಾಗಿ ನಿಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ನಾವು ನುಡಿದಂತೆ ನಡೆಯುವವರು. ನೀಡಿದ್ದ 5 ಭರವಸೆಗಳನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಜೂ.11 ರಿಂದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಭಾಗ್ಯ, ಜು.1ರಿಂದ ಪ್ರತಿಯೊಬ್ಬರಿಗೂ ತಲಾ 10 ಕೆಜಿ ಅಕ್ಕಿ, ಅದೇ ರೀತಿ ಮುಂಬರುವ ದಿನಗಳಲ್ಲಿ ಗೃಹಲಕ್ಷ್ಮಿ ಯೋಜನೆ, 200 ಯೂನಿಟ್ ಉಚಿತ ವಿದ್ಯುತ್, ಯುವನಿಧಿ ಯೋಜನೆಗಳು ಆರಂಭವಾಗಲಿವೆ ಎಂದರು.

ತಾಲೂಕಿಗೆ ಗೌರವ ತರುವ ಕೆಲಸ ಮಾಡುತ್ತೇನೆ: 45 ವರ್ಷಕ್ಕೂ ಹೆಚ್ಚು ಕಾಲ ತಾಲೂಕಿನ ಸರ್ವೋತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಈಗ 2ನೇ ಬಾರಿ ಸಚಿವನಾಗಿದ್ದೇನೆ. ಪ್ರತಿದಿನ ನಾನು ಸಾರ್ವಜನಿಕರ ಕೆಲಸಕ್ಕೆ ಸಿಗಲು ಸಾಧ್ಯವಿಲ್ಲ. ಹಾಗಾಗಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲು ನಮ್ಮ ಪಕ್ಷದ ಅಧ್ಯಕ್ಷರು, ಹಿರಿಯರು ಇರುತ್ತಾರೆ ಎಂದರು.

ಈ ವೇಳೆ ನಿಮ್ಮ ಮಗ ನಿತಿನ್ ವೆಂಕಟೇಶ್‌ಗೆ ಜವಾಬ್ದಾರಿ ನೀಡಬೇಕು ಎಂದು ಕಾರ್ಯಕರ್ತರು ಒತ್ತಾಯಿಸಿದಾಗ ಬೆಂಗಳೂರು ಅಮೆರಿಕಾ ಅಲ್ಲ. ನಾನು ಇರುತ್ತೇನೆ. ಮುಂದಿನ ದಿನಗಳಲ್ಲಿ ಪಟ್ಟಣದ ಹೊಸ ಹೌಸಿಂಗ್ ಬೋರ್ಡ್‌ನಲ್ಲಿ ಸ್ವಂತ ಮನೆ ನಿರ್ಮಿಸುತ್ತೇನೆ. ಸದ್ಯದಲ್ಲೇ ಪ್ರತಿ ಗ್ರಾಮಗಳಿಗೂ ಭೇಟಿ ನೀಡಿ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವ ಕೆಲಸ ಮಾಡುತ್ತೇನೆ. ನೀವು ಸಹ ತಾಲೂಕಿನ ಸಮಸ್ಯೆಗಳ ಕುರಿತು ಮಾಹಿತಿ ನೀಡುವ ಮೂಲಕ ಅಭಿವೃದ್ಧಿ ಕೆಲಸಗಳಿಗೆ ಸಹಕಾರ ನೀಡಬೇಕು ಎಂದರು.

ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ಮುಖಂಡರಾದ ಹೆಚ್.ಡಿ.ಗಣೇಶ್, ರಹಮತ್ ಜಾನ್‌ಬಾಬು, ವಕೀಲ ಬಿ.ವಿ.ಜವರೇಗೌಡ, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹಾಜರಿದ್ದರು.

ಚಲುವರಾಜ್ ನಿಧನ



ಸರಗೂರು, ಜೂ.4– ಪಟ್ಟಣದ ಕಟ್ಟಡ ಕಾರ್ಮಿಕರ ಸಂಘದ ಮಾಜಿ ಅಧ್ಯಕ್ಷ ಚಲುವರಾಜ್(52) ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಪಟ್ಟಣದ ಸೋಮೇಶ್ವರ ದೇವಸ್ಥಾನದ ಕಪಿಲಾ ನದಿ ದಡದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಬಾಬುರಾವ್ ಘಾಟ್ಕೆ



ಹುಣಸೂರು, ಜೂ.4– ತಾಲೂಕಿನ ರತ್ನಪುರಿ ಗ್ರಾಮದ ನಿವಾಸಿ ಬಾಬುರಾವ್ ಘಾಟ್ಕೆ(65) ಭಾನುವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ರತ್ನಪುರಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಶ್ರೀಮತಿ ಸುಮ ಮತ್ತು
ಶ್ರೀ ಕೆ. ದಿನೇಶ್ ರವರ
25 ನೇ ವಿವಾಹ
ವಾರ್ಷಿಕೋತ್ಸವದ
ಶುಭಾಶಯಗಳು
ದಿನಾಂಕ 05-06-2023
ಗಿರೀಶ್, ಕೆ.ಜಿ.ಕೊಪ್ಪಲು
ಜಿ ಮಂಜುಗೌಡರು,
ಮಾಲೀಕರು ಅಶ್ವಿನಿ ಗೋಲ್ಡ್ ಕಂಪನಿ
ಅಧ್ಯಕ್ಷರು, ಜಿಲ್ಲಾ ಒಕ್ಕಲಿಗರ ಸಂಘ
ಮೈಸೂರು-ಚಾಮರಾಜನಗರ
ಕೆ. ಹರೀಶ್ ಗೌಡ ರವರು
ಶಾಸಕರು
ಚಾಮರಾಜ ವಿಧಾನಸಭಾ ಕ್ಷೇತ್ರ
ಉಮೇಶ್ ಕುಮಾರ್
ಕೃಷ್ಣಪ್ಪ
ಜಯಂತ್
ಸಾದಿಖ್
ವಿಶ್ವನಾಥ್ (ಪುರಂ)
ಶೇಖರ್
ನಾಗೇಂದ್ರ (ತುಪ್ಪ) ಕೆ.ಜಿ. ಕೊಪ್ಪಲು
ಶುಭಕೋರುವವರು : ಎಂ. ವಿಜಯ್ ಕುಮಾರ್, ಕೆ.ಜಿ.ಕೊಪ್ಪಲು, ಮೈಸೂರು
ಮತ್ತು ದಿನೇಶ್ ಸ್ನೇಹ ಬಳಗ, ಮೈಸೂರು